ಸಂಪುಟ: 05 ಸಂಚಿಕೆ: 128 ಪುಟಗಳು: 08 ಸೋಮವಾರ 21 ಜುಲೈ 2025 · www.udayavahini.in · epaper.udayavahini.in · Udayavahini news · Udayavahini news · Udayavahini news youtube · udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ · RNI No. KARKAN/2021/80833 · 9448225696 · +91 8035841833 · ₹5

**ಮುಂಜಾನೆ ಮಾತು**
ನಮ್ಮನ್ನು ಇಷ್ಟಪಡುವವರನ್ನು ದುರುಪಯೋಗ ಪಡಿಸಿಕೊಳ್ಳಬಾರದು. ನಮ್ಮ ಅವಶ್ಯಕತೆಯಿದ್ದವರನ್ನು ಕಾಯಿಸಬಾರದು, ನಂಬಿದವರನ್ನು ಕೈಬಿಡಬಾರದು. ವಿಶ್ವಾಸವೇ ಬದುಕಿನ ಮೂಲ!

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಡಿಕೆಶಿಯನ್ನು ಮುಗಿಸಲು ನಡೆಸಿದ ಸಮಾವೇಶ: ಆರ್.ಅಶೋಕ್

• ಉದಯವಾಹಿನಿ, ಬೆಂಗಳೂರು

ಸಿಎಂ ಸಿದ್ದರಾಮಯ್ಯ ನಡೆಸಿದ ಸಮಾವೇಶ ಸರ್ಕಾರಿ ಕಾರ್ಯಕ್ರಮ ಅಲ್ಲ. ಅದು ಡಿ.ಕೆ ಶಿವಕುಮಾರ್‌ಅವರನ್ನು ಮುಗಿಸಲು ಮಾಡಿದ ಕಾರ್ಯಕ್ರಮ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ವ್ಯಂಗ್ಯವಾಡಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ನಡೆಸಿದ ಸಮಾವೇಶ ಕಾಂಗ್ರೆಸ್‌ನ ಒಡಕನ್ನು ತೋರಿಸಿದೆ. ಅಲ್ಲಿ ಒಬ್ಬರೂ ಡಿಕೆಶಿ ಪರ ಮಾತಾಡಲಿಲ್ಲ. ಡಿಕೆಶಿಗೆ ಪಾಠ ಕಲಿಸಲು ಹಾಗೂ ಅಪಮಾನ ಮಾಡಲು ಈ ಸಮಾವೇಶ ನಡೆಸಲಾಗಿದೆ. ಡಿಕೆಶಿ ಈಗ ಎರಡನೇ ದರ್ಜೆಯ ನಾಯಕರಾಗಿಬಿಟ್ಟಿದ್ದಾರೆ. ಡಿಕೆಶಿಯನ್ನು ಮುಗಿಸಲು ಗುದ್ದಲಿ ಪೂಜೆ ಮಾಡಲಾಗಿದೆ ಎಂದಿದ್ದಾರೆ. ಕಾಂಗ್ರೆಸ್ ಪಕ್ಷದ ನಾಯಕರು ಬೀದಿಯಲ್ಲಿ ಬಡಿದಾಡಿಕೊಳ್ಳುತ್ತಿದ್ದಾರೆ. ಇದು ಡಿಕೆಶಿ ಸಿದ್ದರಾಮಯ್ಯನವರ ಆಂತರಿಕ ಜಗಳ. ಬಿಜೆಪಿಗೆ ಸರ್ಕಾರವನ್ನು ಬೀಳಿಸುವ ಅಗತ್ಯವಿಲ್ಲ. ಈ ಸರ್ಕಾರ ಕಾಂಗ್ರೆಸ್‌ನ ಆಂತರಿಕ ಕಲಹದಿಂದಲೇ ಬಿದ್ದುಹೋಗಲಿದೆ. ಸುರ್ಜೇವಾಲಾ ರಾಜ್ಯಕ್ಕೆ ಬಂದು ಶಾಸಕರ ಅಹವಾಲುಗಳನ್ನು ಆಲಿಸಿದ್ದಾರೆ. ಇವರ ಜಗಳ ಜನರ ಮುಂದೆ ಬಯಲಾಗಿದೆ ಎಂದು ಲೇವಡಿ ಮಾಡಿದ್ದಾರೆ.

## ಕೆಲವರು ಉದ್ದೇಶಪೂರ್ವಕವಾಗಿ ಧರ್ಮಸ್ಥಳದ ತೇಜೋವಧೆ ಮಾಡುತ್ತಿರಬಹುದು

• ಉದಯವಾಹಿನಿ, ಬೆಂಗಳೂರು



ಧರ್ಮಸ್ಥಳ ಶ್ರೀ ಮಂಜುನಾಥ ಇರುವ ಪುಣ್ಯ ಕ್ಷೇತ್ರ. ಕೆಲವರು ಉದ್ದೇಶಪೂರ್ವಕವಾಗಿ ತೇಜೋವಧೆ ಮಾಡುತ್ತಿರಬಹುದು. ಒಟ್ಟಿನಲ್ಲಿ ಸೌಜನ್ಯ ಪ್ರಕರಣವಿರಲಿ ಬೇರೆ ಅತ್ಯಾಚಾರ, ಹತ್ಯೆ ಪ್ರಕರಣಗಳಿರಲಿ ನ್ಯಾಯ ಸಿಕ್ಕಿಯೇ ಸಿಗುತ್ತದೆ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಧರ್ಮಸ್ಥಳದಲ್ಲಿ ಶವಗಳನ್ನು ಹೂತಿಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು ಪ್ರತಿಕ್ರಿಯಿಸಿದ್ದಾರೆ. ಅನುಮಾನಾಸ್ಪದ ಸಾವುಗಳ ಬಗ್ಗೆ ಎಸ್‌ಐಟಿ ತನಿಖೆ ಆಗಬೇಕು ಅಂತ ಒತ್ತಡ ಇತ್ತು. ದಕ್ಷಿಣ ಕನ್ನಡ ಪೊಲೀಸರು ತನಿಕೆಗೆ ಸಿದ್ಧವಿದ್ದರು ಅವರ ಮೇಲೆ ನಮಗೂ ನಂಬಿಕೆ ಇತ್ತು. ಇದೀಗ ಸಿಎಂ ಹಾಗೂ ಗೃಹ ಸಚಿವರು ಎಸ್‌ಐಟಿ ರಚಿಸಿ ಆದೇಶ ಮಾಡಿದ್ದಾರೆ ನಿಜಾಂಶ ಹೊರಗೆ ಬರಬೇಕು ನೂರಾರು ಹೆಣ ಅಂತ ಹೇಳ್ತಿದ್ದಾರೆಇದರ ಸತ್ಯಾಂಶ ಹೊರಗೆ ಬರಬೇಕು ಅಂತ ಒತ್ತಾಯಿಸಿದ್ದಾರೆ.

ಅಲ್ಲದೇ ಸಾಕ್ಷಿದಾರ ಯಾರು? ಅವರ ಹಿನ್ನೆಲೆ ಏನು ಎಂಬುದರ ಹಿಂದೆ ಹೋಗಲು ಆಗುವುದಿಲ್ಲ. ಮೊದಲು ಹೆಣ ಹೂತು ಹಾಕಿದ್ದಾರೆ ಎನ್ನಲಾದ ಸ್ಥಳಕ್ಕೆ ಹೋಗಬೇಕು. ವಿಧಿವಿಜ್ಞಾನ ತನಿಖೆ ಆಗಬೇಕು ಇದೆಲ್ಲವನ್ನೂ ನೋಡಬೇಕು. ಯಾರೋ ಒಬ್ಬರ ಮೇಲೆ ಮಾಡಿದ್ದೀವಿ ಅಂತ ಹೇಳಲು ಆಗುವುದಿಲ್ಲ. ಕೇವಲ ಸೌಜನ್ಯ ಕೇಸ್ ಮಾತ್ರವಲ್ಲ, ಎಲ್ಲವನ್ನೂ ಕೂಲಂಕುಷವಾಗಿ ತನಿಖೆ ಮಾಡಬೇಕು. ಸಾಕ್ಷಿದಾರ ಠಾಣೆಗೆ ಬಂದು ಹೇಳಿಕೆ ಕೊಟ್ಟಾಗಲೇ ತನಿಖೆ ಮುಂದುವರಿಸಬಹುದಿತ್ತು. ಆದ್ರೆ ಎಸ್‌ಐಟಿ ಮಾಡಲೇಬೇಕು ಎನ್ನುವ ಒತ್ತಡವಿತ್ತು. ಅದರಂತೆ ಸರ್ಕಾರ ಎಸ್‌ಐಟಿ ರಚನೆ ಮಾಡಿದೆ ಎಂದು ತಿಳಿಸಿದ್ದಾರೆ.

## ಬಿಎಂಟಿಸಿ ಬಸ್ ಅಪಘಾತದಲ್ಲಿ ಯುವತಿ ಬಲಿ ಪ್ರಕರಣ: ಕಂಡಕ್ಟರ್ ಅಮಾನತು, ಚಾಲಕ ವಜಾ

• ಉದಯವಾಹಿನಿ, ಬೆಂಗಳೂರು

ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಹೋಟೆಲ್‌ಗೆ ಡಿಕ್ಕಿಯಾದ ಪರಿಣಾಮ ಯುವತಿಯೊಬ್ಬಳು ಬಲಿಯಾಗಿರುವ ಪ್ರಕರಣ ಸಂಬಂಧ ಕಂಡಕ್ಟರ್ ಡ್ರೈವರ್ ವಿರುದ್ಧ ಪೀಣ್ಯ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಈಗಾಗ್ಲೇ ಕಂಡಕ್ಟರ್‌ನನ್ನು ಬಿಎಂಟಿಸಿ ಅಮಾನತು ಮಾಡಿದೆ. ಇದೀಗ ಬಸ್ ಚಾಲಕನನ್ನೂ ಕೆಲಸದಿಂದ ವಜಾ ಮಾಡಲು ಟಾಟಾ ಮೋಟರ್ ಸಂಸ್ಥೆ ನಿರ್ಧಾರ ಮಾಡಿದೆ.

**ಏನಿದು ಪ್ರಕರಣ?:** ಜುಲೈ 18ರಂದು ಬೆಳಗ್ಗೆ ಪೀಣ್ಯ 2ನೇ ಹಂತದಲ್ಲಿ ಬಸ್ ಡ್ರೈವರ್ ಮತ್ತು ಕಂಡಕ್ಟರ್ ನಡುವೆ ಜಗಳವಾಗಿತ್ತು. ಈ ವೇಳೆ ಡ್ರೈವರ್ ಬಸ್‌ನಿಂದ ಕೆಳಗಿಳಿದು ಹೋಗಿದ್ದ. ಈ ವೇಳೆ ಕಂಡಕ್ಟರ್ ಬಸ್ ಚಲಾಯಿಸಿದ್ದ. ಈ ಸಂದರ್ಭ ಬಸ್ ನಿಯಂತ್ರಣ ತಪ್ಪಿ, ಫುಟ್‌ಪಾತ್ ಏರಿ ಹೋಟೆಲ್‌ಗೆ ಡಿಕ್ಕಿಯಾಗಿದೆ. ಅಪಘಾತದಲ್ಲಿ ಹೋಟೆಲ್ ಬಳಿ ನಿಂತಿದ್ದ ಓರ್ವ ಯುವತಿ ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದರು.

## ಭೂ ಸ್ವಾಧೀನ ಪ್ರಶ್ನಿಸಿದ್ದ ಅರ್ಜಿ ವಜಾ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಹಿಂದಿನ ಪ್ರಾಧಿಕಾರವಾಗಿದ್ದ ಹಿಂದಿನ ನಗರ ಸುಧಾರಣಾ ಟ್ರಸ್ಟ್ ಮಂಡಳಿಯು ಆರಂಭಿಕ ಅಧಿಸೂಚನೆ ಹೊರಡಿಸಿದ 53 ವರ್ಷಗಳ ನಂತರ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ವಜಾಗೊಳಿಸಿದೆ. ಅರ್ಜಿದಾರರು ಸೈಟ್‌ನ ಯಾವುದೇ ಹಕ್ಕು ಪತ್ರವನ್ನು ತೋರಿಸಿಲ್ಲ ಅಥವಾ ಸೈಟ್ ಅನ್ನು ಸ್ವಾಧೀನದಿಂದ ಹೊರಗಿಡಲಾಗಿದೆ ಎಂದು ತೋರಿಸಿಲ್ಲ ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಹೇಳಿದರು. ಶೇಷಾದ್ರಿಪುರಂ ನಿವಾಸಿ ವೇಣು,



ಎಚ್‌ಎಎಲ್ ಹಂತ 3 ಲೇಔಟ್‌ನಲ್ಲಿ ಸುಮಾರು 1,950 ಚದರ ಅಡಿ ಅಳತೆಯ ಆಸ್ತಿಗಾಗಿ ಸೆಪ್ಟೆಂಬರ್ 16, 2023 ರಂದು ಬಿಡಿಎ ಹೊರಡಿಸಿದ ಇ-ಹರಾಜು ಅಧಿಸೂಚನೆಯನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದರು. ಅಕ್ಟೋಬರ್ 4, 1995 ರಂದು ಖರೀದಿಸಿದ ನಂತರ ಆಸ್ತಿ ತನ್ನ ಸ್ವಾಧೀನದಲ್ಲಿದೆ ಎಂದು ಅವರು ಹೇಳಿದರು. ಎಚ್‌ಎಎಲ್ ಹಂತ 3 ರ ರಚನೆಗೆ ಸೆಪ್ಟೆಂಬರ್ 22, 1970 ರಂದು ಅಧಿಸೂಚನೆ ಹೊರಡಿಸಲಾಯಿತು ಮತ್ತು ಜುಲೈ 15, 1971 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಯಿತು. ಅರ್ಜಿದಾರರು ಈ ಭೂಮಿಯನ್ನು ಎಂದಿಗೂ ಖರೀದಿಸಿಲ್ಲ, 1971 ರಲ್ಲಿ 2023 ರಲ್ಲಿ ಸ್ವಾಧೀನಪಡಿಸಿಕೊಂಡದ್ದನ್ನು ಅವರು ಪ್ರಶ್ನಿಸುತ್ತಿದ್ದಾರೆ ಎಂದು ಬಿಡಿಎ ವಾದಿಸಿದೆ. ಅರ್ಜಿಯೊಂದಿಗೆ ಲಗತ್ತಿಸಲಾದ ದಾಖಲೆಗಳಲ್ಲಿ ಮೂಲ ಭೂಮಾಲೀಕರಾದ ಕೆಂಚಮ್ಮ ಈ ಭೂಮಿಯನ್ನು ಅರ್ಜಿದಾರರಿಗೆ ಮಾರಾಟ ಮಾಡಿದ್ದಾರೆ ಎಂದು ಎಲ್ಲಿಯೂ ಸೂಚಿಸಲಾಗಿಲ್ಲ ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ತಿಳಿಸಿದ್ದಾರೆ.

# ಮುಂಗಾರು ಶುರು ಸಮಸ್ಯೆ ಹಲವಾರು

• ಉದಯವಾಹಿನಿ, ನವದೆಹಲಿ

ಪೆಹಲ್ಗಾಮ್ ದಾಳಿ ಬಗ್ಗೆ ಪ್ರಧಾನಿ ಮೋದಿ ಹೇಳಿಕೆ, ಆಪರೇಷನ್ ಸಿಂಧೂರ, ಭಾರತ-ಪಾಕ್ ಕದನ ವಿರಾಮ ಕುರಿತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪದೇ ಪದೇ ನೀಡುತ್ತಿರುವ ಹೇಳಿಕೆಗಳು ಮತ್ತು ಬಿಹಾರದಲ್ಲಿ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ (ಎಸ್ ಐಆರ್) ಸೇರಿದಂತೆ ಹಲವು ವಿಷಯಗಳನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಲು ವಿರೋಧ ಪಕ್ಷಗಳು ಸಜ್ಜಾಗಿವೆ. ಸೋಮವಾರ ಆರಂಭವಾಗಲಿರುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಕಾವೇರಿದ ಚರ್ಚೆ, ಕೋಲಾಹಲ ನಡೆಯುವ ಎಲ್ಲಾ ಸಾಧ್ಯತೆಗಳಿವೆ. ಸಂಸತ್ತಿನ ಕಲಾಪ ಸುಗಮವಾಗಿ ನಡೆಯಲು ಸರ್ಕಾರವು ವಿರೋಧ ಪಕ್ಷಗಳ ಸಹಕಾರ ಕೋರಿದೆ. ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ನೇತೃತ್ವದಲ್ಲಿ ಭಾನುವಾರ ನಡೆದ ಸರ್ವಪಕ್ಷಗಳ ಸಭೆಯಲ್ಲಿ


- **ಸಂಸತ್ ಮುಂಗಾರು ಅಧಿವೇಶನ: ಕಾವೇರಿದ ಚರ್ಚೆಗೆ ವಿಪಕ್ಷ ಸಜ್ಜು**
- **ಇಂದಿನಿಂದ ಸಂಸತ್ ಅಧಿವೇಶನ ಜುಲೈ 21**
- **ಸರ್ವಪಕ್ಷ ಸಭೆಯಲ್ಲಿ ಚರ್ಚೆ**
- **ಟ್ರಂಪ್‌ರ ವಿವಾದಾತ್ಮಕ ಹೇಳಿಕೆ**
- **ಆಪರೇಷನ್ ಸಿಂದೂರ್‌ನ ಮಹತ್ವ**

1 ವಿಪಕ್ಷಗಳ ಸವಾಲು ಸ್ವೀಕರಿಸಿದ ಕೇಂದ್ರ ಸರ್ಕಾರ
2 ಸಂಸತ್ತಿನ ಕಲಾಪ ಸುಗಮವಾಗಿ ನಡೆಯಲು ಸರ್ಕಾರವು ವಿರೋಧ ಪಕ್ಷಗಳ ಸಹಕಾರ
3 ಕಾವೇರಿದ ಚರ್ಚೆ, ಕೋಲಾಹಲ ನಡೆಯುವ ಎಲ್ಲಾ ಸಾಧ್ಯತೆ ಹೆಚ್ಚು

ವಿರೋಧ ಪಕ್ಷಗಳು ಹಲವು ವಿಷಯಗಳನ್ನು ಪ್ರಸ್ತಾಪಿಸಿ, ಚರ್ಚೆಗೆ ಅವಕಾಶ ನೀಡಬೇಕೆಂದು ಕೋರಿವೆ. ಅಹಮದಾಬಾದ್ ವಿಮಾನ ದುರಂತ, ಕೊಳೆಗೇರಿಗಳ ತೆರವು ಕಾರ್ಯಾಚರಣೆ, ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಬಂಗಾಳಿ ಭಾಷಿಕರನ್ನು ಗುರಿಯಾಗಿ ಸುವುದು, ಒಡಿಶಾದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವ ವಿಷಯಗಳ ಕುರಿತೂ ಚರ್ಚೆಗೆ ಅವಕಾಶ ನೀಡುವಂತೆ ವಿಪಕ್ಷಗಳು ಒತ್ತಾಯಿಸಿವೆ.

ಸರ್ವ ಪಕ್ಷಗಳ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಸಭೆ ಅತ್ಯಂತ ರಚನಾತ್ಮಕವಾಗಿ ನಡೆಯಿತು. ಆಡಳಿತ ಪಕ್ಷ, ವಿರೋಧ ಪಕ್ಷಗಳು ಸಮನ್ವಯದೊಂದಿಗೆ ಒಟ್ಟಾಗಿ ಕೆಲಸ ಮಾಡಬೇಕಿದೆ ಎಂದು ಹೇಳಿದರು. ವಿವಿಧ ಪಕ್ಷಗಳು ಸಭೆಯಲ್ಲಿ ಹಲವು ವಿಷಯಗಳನ್ನು ಎತ್ತಿವೆ. ಆಪರೇಷನ್ ಸಿಂಧೂರದಂತಹ ವಿಷಯಗಳ ಕುರಿತು ಸರ್ಕಾರ ಮುಕ್ತ ಮನಸ್ಸಿನೊಂದಿಗೆ ಚರ್ಚೆಗೆ ಸಿದ್ದವಾಗಿದೆ ಎಂದು ತಿಳಿಸಿದರು. ಸರ್ವಪಕ್ಷಗಳ ಸಭೆಯಲ್ಲಿ 51 ಪಕ್ಷಗಳ 54 ಪ್ರತಿನಿಧಿಗಳು ಭಾಗವಹಿಸಿದ್ದು, ಅವರಲ್ಲಿ 40 ಮಂದಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ ಎಂದು ಮಾಹಿತಿ ನೀಡಿದರು. ಗಲಭೆಪೀಡಿತ ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ವಿಸ್ತರಿಸುವ ನಿರ್ಣಯದ ಜತೆ, ಸರ್ಕಾರವು ಎಂಟು ಹೊಸ ಮಸೂದೆಗಳನ್ನು ಮಂಡಿಸುವ ಉದ್ದೇಶವನ್ನು ಹೊಂದಿದೆ. ನ್ಯಾಯಮೂರ್ತಿ





### ನ್ಯಾಯಮೂರ್ತಿ ವರ್ಮಾ ಅವರ ವಿರುದ್ಧ ದೋಷಾರೋಪಣೆ

ಈ ಸಭೆಯಲ್ಲಿ, ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ವಿರುದ್ಧ ದೋಷಾರೋಪಣೆಯ ಪ್ರಸ್ತಾಪವನ್ನು 100ಕ್ಕೂ ಹೆಚ್ಚು ಸಂಸದರು ಬೆಂಬಲಿಸಿದ್ದಾರೆ ಎಂದು ರಿಜಿಜು ತಿಳಿಸಿದ್ದಾರೆ. ಈ ಪ್ರಸ್ತಾಪವು ಭ್ರಷ್ಟಾಚಾರ ಆರೋಪಗಳಿಗೆ ಸಂಬಂಧಿಸಿದ್ದು, ಸಂಸತ್‌ನ ಈ ಅಧಿವೇಶನದಲ್ಲಿ ಚರ್ಚೆಗೆ ಬರಲಿದೆ ಎಂದು ತಿಳಿದುಬಂದಿದೆ. ಈ ಅಧಿವೇಶನದಲ್ಲಿ ಸರ್ಕಾರವು 17 ಹೊಸ ವಿಧೇಯಕಗಳನ್ನು ಪರಿಚಯಿಸಲಿದ್ದು, ಇದರಲ್ಲಿ ಕ್ರೀಡಾ ಆಡಳಿತ, ಭೂವೈಜ್ಞಾನಿಕ ತಾಣಗಳು ಮತ್ತು ಗಣಿಗಾರಿಕೆ ನಿಯಮಗಳಿಗೆ ಸಂಬಂಧಿಸಿದ ವಿಧೇಯಕಗಳು ಸೇರಿವೆ. ಜೊತೆಗೆ, ಬಿಹಾರದ ಚುನಾವಣಾ ಪಟ್ಟಿ ಪರಿಷ್ಕರಣೆ, ಅಹಮದಾಬಾದ್ ವಿಮಾನ ದುರಂತ ಮತ್ತು ಮಣಿಪುರದ ರಾಜಕೀಯ ಪರಿಸ್ಥಿತಿಯೂ ಚರ್ಚೆಗೆ ಬರಲಿದೆ.

### ಸಂಸತಿನಲ್ಲಿ ಚರ್ಚಿಸಲು ಬದ್ಧ: ರಿಜಿಜು

ಕಿರಣ್ ರಿಜಿಜು, ಸಂಸತ್‌ನ ನಿಯಮಗಳು ಮತ್ತು ಸಂಪ್ರದಾಯಗಳಿಗೆ ಬದ್ಧವಾಗಿ ಈ ವಿಷಯಗಳ ಮೇಲೆ ಚರ್ಚೆಗೆ ಸರ್ಕಾರ ಒಪ್ಪಿಗೆ ನೀಡಿದೆ ಎಂದು ಹೇಳಿದ್ದಾರೆ. ನಾವು ಆಪರೇಷನ್ ಸಿಂದೂರ್‌ನಂತಹ ಪ್ರಮುಖ ವಿಷಯಗಳನ್ನು ಸಂಸತ್ತಿನಲ್ಲಿ ಚರ್ಚಿಸಲು ಸಂಪೂರ್ಣವಾಗಿ ಸಿದ್ಧರಿದ್ದೇವೆ. ಸರ್ಕಾರ ಮತ್ತು ವಿರೋಧ ಪಕ್ಷಗಳ ನಡುವೆ ಸಮನ್ವಯದೊಂದಿಗೆ ಸಂಸತ್ ಕಾರ್ಯವೈಖರಿಯನ್ನು ಸುಗಮವಾಗಿ ನಡೆಸಲು ನಾವು ಬಯಸುತ್ತೇವೆ, ಎಂದು ರಿಜಿಜು ಮಾಧ್ಯಮದೊಂದಿಗೆ ಹೇಳಿದ್ದಾರೆ.

ಯಶವಂತ್ ವರ್ಮಾ ಅವರನ್ನು ಪದಚ್ಯುತಗೊಳಿಸುವ ನಿರ್ಣಯವನ್ನು ಮಂಡಿಸುವ ಯೋಚನೆಯೂ ಇದೆ ಎಂದರು. ವಿರೋಧ ಪಕ್ಷಗಳ ನಾಯಕರಾದ ಕಾಂಗ್ರೆಸ್‌ನ ಗೌರವ್ ಗೊಗೊಯ್, ಸಮಾಜವಾದಿ ಪಕ್ಷದ ರಾಮಗೋಪಾಲ್ ಯಾದವ್, ಸಿಪಿಎಂನ ಜಾನ್ ಬ್ರಿಟ್ಟಾಸ್ ಮತ್ತು ಸಿಪಿಐನ ಪಿ.ಸಂತೋಷ್ ಕುಮಾರ್ ಅವರು ಪೆಹಲ್ಗಾಮ್ ಭಯೋತ್ಪಾದಕ ದಾಳಿ, ಟ್ರಂಪ್ ಹೇಳಿಕೆ ಹಾಗೂ ಎಸ್‌ಐಆರ್ ಕುರಿತು ಸಂಸತ್ತಿನಲ್ಲಿ ನಡೆಯುವ ಚರ್ಚೆಗಳಿಗೆ ಪ್ರಧಾನಿ ಮೋದಿ ಅವರು ಪ್ರತಿಕ್ರಿಯಿಸಬೇಕು ಎಂದು ಒತ್ತಾಯಿಸಿದ್ದಾರೆ.

**ಆಪರೇಷನ್ ಸಿಂದೂರ್‌ನ ಮಹತ್ವ:** ಏಪ್ರಿಲ್ 22, 2025 ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 26 ಜನರು ಸಾವನ್ನಪ್ಪಿದ್ದರು. ಈ ದಾಳಿಗೆ ಪ್ರತಿಕ್ರಿಯೆಯಾಗಿ ಕೇಂದ್ರ ಸರ್ಕಾರವು ಆಪರೇಷನ್ ಸಿಂದೂರ್ ಎಂಬ ಕಾರ್ಯಾಚರಣೆಯನ್ನು ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಭಯೋತ್ಪಾದಕ ಶಿಬಿರಗಳ ವಿರುದ್ಧ ಆರಂಭಿಸಿತ್ತು. ಈ ಕಾರ್ಯಾಚರಣೆಯು ಪಾಪಿ ಪಾಕಿಗಳ ಭಯೋತ್ಪಾದಕ ತಾಣಗಳು ಮತ್ತು ಸೈನಿಕ ಸೌಲಭ್ಯಗಳಿಗೆ ಗಣನೀಯ ಹಾನಿಯನ್ನುಂಟುಮಾಡಿದೆ ಎಂದು ಸರ್ಕಾರ ಹೇಳಿಕೊಂಡಿದೆ.

**ಸರ್ವಪಕ್ಷ ಸಭೆಯಲ್ಲಿ ಚರ್ಚೆ:** ಮುಂಗಾರು ಅಧಿವೇಶನದ ಮುನ್ನಾದಿನವಾದ ಜು. 20 ರಂದು ನಡೆದ ಸರ್ವಪಕ್ಷ ಸಭೆಯಲ್ಲಿ, ವಿರೋಧ ಪಕ್ಷಗಳು ಹಲವು ವಿಷಯಗಳನ್ನು ಚರ್ಚೆಗೆ ಒತ್ತಾಯಿಸಿವೆ. ಈ ಸಭೆಯನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ ನಡೆಸಲಾಯಿತು, ಇದರಲ್ಲಿ ಕಿರಣ್ ರಿಜಿಜು, ಜೆ.ಪಿ. ನಡ್ಡಾ, ಅರ್ಜುನ್ ರಾಮ್ ಮೇಘವಾಲ್ ಮತ್ತು ಇತರ ಸಚಿವರು ಭಾಗವಹಿಸಿದ್ದರು. ವಿರೋಧ ಪಕ್ಷಗಳಾದ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ , ಡಿಎಂಕೆ, ಎಸ್‌ಪಿ ಇತರ ಪಕ್ಷಗಳು ಆಪರೇಷನ್ ಸಿಂದೂರ್, ಬಿಹಾರದ ಚುನಾವಣಾ ಪಟ್ಟಿ ಪರಿಷ್ಕರಣೆ , ಟ್ರಂಪ್‌ರ ಭಾರತ-ಪಾಕಿಸ್ತಾನ ಸಂಘರ್ಷದಲ್ಲಿ ಮಧ್ಯಸ್ಥಿಕೆ ವಹಿಸಿದೆ .

## ಪುತ್ರನ ವಿರುದ್ಧ ಅತ್ಯಾಚಾರ ಆರೋಪಕ್ಕೆ ಸ್ಪಷ್ಟನೆ ನೀಡಿದ ಚೌಹಾಣ್

• ಉದಯವಾಹಿನಿ, ಬೀದರ್



ಉದಯವಾಹಿನಿ ಚಿತ್ರ

ನಿಶ್ಚಿತಾರ್ಥ ಮಾಡಿಕೊಂಡು ಮದುವೆ ಮಾಡಿಕೊಳ್ಳದೇ ಮೋಸ ಮಾಡಿದ ಆರೋಪ ಔರಾದ್ ಕ್ಷೇತ್ರದ ಬಿಜೆಪಿ ಶಾಸಕ ಪ್ರಭು ಚೌಹಾಣ್ ಪುತ್ರ ಪ್ರತೀಕ್ ವಿರುದ್ಧ ಕೇಳಿಬಂದಿದ್ದು, ಈ ಸಂಬಂಧ ಯುವತಿ, ಮಹಿಳಾ ಆಯೋಗಕ್ಕೆ ದೂರು ನೀಡಿದ್ದಾಳೆ. ಈ ಸಂಬಂಧ ಇದೀಗ ಶಾಸಕ ಪ್ರಭು ಚೌಹಾಣ್ ಸ್ಪಷ್ಟನೆ ನೀಡಿದ್ದು, ಮದುವೆ ಕ್ಯಾನ್ಸಲ್ ಮಾಡಿಕೊಂಡಿರುವುದಕ್ಕೆ ಕಾರಣವನ್ನೂ ಸಹ ನೀಡಿದ್ದಾರೆ. ಅಲ್ಲದೇ ನನ್ನ ಕುಟುಂಬದ ಹೆಸರು ಕೆಡಿಸಲು 1 ಗ್ಯಾಂಗ್ ಕೆಲಸ ಮಾಡುತ್ತಿದೆ. ಅದೇ ಕೇಂದ್ರ ಮಾಜಿ ಸಚಿವ ಭಗವಂತ ಖೂಬಾ ಆ್ಯಂಡ್ ಗ್ಯಾಂಗ್ ಎಂದು ಸ್ವಪಕ್ಷದ ನಾಯಕನ ವಿರುದ್ಧವೇ ಗಂಭೀರ ಆರೋಪ ಮಾಡಿದ್ದಾರೆ.

ಬೀದರ್‌ನಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಭು ಚೌಹಾಣ್, ಪುತ್ರ ಪ್ರತೀಕ್ ವಿರುದ್ಧ ಮಹಿಳಾ ಆಯೋಗಕ್ಕೆ ಯುವತಿ ದೂರು ನೀಡಿದ್ದಾಳೆ. ಆಕೆ ಬೇರೆಯೊಬ್ಬರ ಜತೆ ಮೆಸೇಜ್, ವಿಡಿಯೋ ಕಾಲ್ ಮಾಡುತ್ತಿದ್ದಳು. ಹೀಗೆ ಮಾಡಿದ್ರೆ ಮಗ ಹೇಗೆ ಮದುವೆಯಾಗಲು ಸಾಧ್ಯ ನೀವೇ ಹೇಳಿ ನಿಶ್ಚಿತಾರ್ಥವಾದ ದಿನದಿಂದಲೂ ಯುವತಿಗೆ ಬುದ್ಧಿವಾದ ಹೇಳಿದ್ದೇನೆ. ಹುಡುಗಿಯ ಸೋದರ ಮಾವನ ಕರೆದು ಸರಿ ಮಾಡುವಂತೆ ಹೇಳಿದ್ದೆ. ಆದರೆ ಆ ಹುಡುಗಿ ವಿಡಿಯೋ ಕಾಲ್ ಹಾಗೂ ಚಾಟಿಂಗ್‌ನಿಲ್ಲಿಸಿಲ್ಲ. ಹೀಗಾಗಿ ನಮ್ಮ ಹುಡುಗ ಆಕೆ ಜತೆ ಮದುವೆ ಬೇಡ ಅಂತಾ ಹೇಳಿದ್ದಾನೆ.

ಬಂಜಾರ ಮುಖಂಡರು ಜೊತೆಗೆ ಸಭೆ ಬಳಿಕ ಮದುವೆ ರದ್ದಾಯಿತು. 30 ವರ್ಷದ ರಾಜಕೀಯ ಜೀವನದಲ್ಲಿ ಇಂತಹ ಆರೋಪ ಬಂದಿಲ್ಲ, ಯುವತಿಯ ಆರೋಪ ಕೇಳಿ ನನಗೆ ತುಂಬಾ ನೋವಾಗಿದೆ. ನಾನೇ ನಿಂತು ನೂರಾರು ಮದುವೆ ಮಾಡಿದ್ದೇನೆ, ಅನ್ಯಾಯ ಮಾಡಿಲ್ಲ. ಕೆಲವರು ಅಡೆತಡೆ ಮಾಡಿದರೂ ನಾವು ನಿಶ್ಚಿತಾರ್ಥ ಮಾಡಿದ್ದೇವೆ. ಆಕೆ ನನ್ನ ಮಗಳ ರೀತಿ, ತಪ್ಪು ಮಾಡಿದರೂ ನಾನು ಸುಮ್ಮನಿದ್ದೆ ಎಂದು ಹೇಳಿದರು.

> ನನ್ನ ಕುಟುಂಬದ ಹೆಸರು ಕೆಡಿಸಲು 1 ಗ್ಯಾಂಗ್ ಕೆಲಸ ಮಾಡುತ್ತಿದೆ. ಅದೇ ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಆ್ಯಂಡ್ ಗ್ಯಾಂಗ್. ಯಾವುದೇ ಕೆಲಸ ಮಾಡಿದರೂ ಅದಕ್ಕೆ ಆ ಗ್ಯಾಂಗ್ ಅಡ್ಡಿಪಡಿಸುತ್ತೆ. 2014ರಿಂದಲೂ ಆ ಗ್ಯಾಂಗ್ ನನ್ನ ವಿರುದ್ಧ ಕೆಲಸ ಮಾಡುತ್ತಿದೆ. ಆ ಯುವತಿಯನ್ನು ಕರೆದೊಯ್ದು ಮಹಿಳಾ ಆಯೋಗಕ್ಕೆ ದೂರು ಕೊಡಿಸಿದ್ದೇ ಆ ಗ್ಯಾಂಗ್. ಆ ಯುವತಿ ಮೂಲಕ ನಮ್ಮ ಹೆಸರು ಕೆಡಿಸುವ ಕೆಲಸ ಮಾಡುತ್ತಿದ್ದಾರೆ. ನನ್ನ ಮಗ, ಸೊಸೆ ಹಾಗೂ ಅವರ ಸಹೋದರಿ ಶಿರಡಿಗೆ ಹೋಗಿದ್ದಾರೆ. ನನ್ನ ಮಗ ಯಾವುದೇ ಉಲ್ಟಾಪಲ್ಟಾ ಕೆಲಸ ಮಾಡಿಲ್ಲ. ನನ್ನ ಮಗನಿಗೆ ಬೇಕಾದರೆ ವೈದ್ಯಕೀಯ ತಪಾಸಣೆ ಮಾಡಿಸಲಿ -ಪ್ರಭು ಚೌಹಾಣ್, ಬಿಜೆಪಿ ಶಾಸಕ

## ಸಣ್ಣ ವ್ಯಾಪಾರಿಗಳಿಗೆ ಜಿಎಸ್‌ಟಿ ನೋಟಿಸ್ ಗೊಂದಲಕ್ಕೆ ಕೇಂದ್ರ ಸರ್ಕಾರವೇ ಹೊಣೆ : ಸಿಎಂ ಸ್ಪಷ್ಟನೆ

• ಉದಯವಾಹಿನಿ, ಬೆಂಗಳೂರು

ಸಣ್ಣ ವ್ಯಾಪಾರಿಗಳಿಗೆ ಜಿಎಸ್‌ಟಿ ತೆರಿಗೆಯ ನೋಟಿಸ್ ನೀಡಿರುವ ಸಂಬಂಧ ಪಟ್ಟಂತೆ ರಾಜ್ಯ ಸರ್ಕಾರ ಯಾವುದೇ ಜವಾಬ್ದಾರಿ ಹೊಂದಿಲ್ಲ . ಕೇಂದ್ರ ಸರ್ಕಾರವೇ ಹೊಣೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ. ಜಿಎಸ್‌ಟಿ ಕಾಯ್ದೆ ಮಾಡಿರುವುದು ಕೇಂದ್ರ ಸರ್ಕಾರ. ಜಿಎಸ್‌ಟಿ ಕೌನ್ಸಿಲ್ ಕೂಡ ರಾಜ್ಯ ಸರ್ಕಾರದ ಅಧೀನದಲ್ಲಿ ಇಲ್ಲ. ಹೀಗಾಗಿ ಕೇಂದ್ರ ಸರ್ಕಾರವೇ ಹೊಣೆಗಾರಿಕೆ ಹೊಂದಿದೆ ಎಂದರು. ರಾಜ್ಯ ಸರ್ಕಾರದಿಂದ ಸಣ್ಣ ವ್ಯಾಪಾರಿಗಳಿಗೆ ಅನುಕೂಲ ಮಾಡಲು ಯಾವುದಾದರೂ ಅವಕಾಶಗಳು ಇದ್ದರೆ ಅದರ ಬಗ್ಗೆ ರಾಜ್ಯ ಸರ್ಕಾರದ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡುತ್ತೇವೆ. ಕೇಂದ್ರ ಸರ್ಕಾರದ ಜೊತೆಗೂ ಈ ಬಗ್ಗೆ ಸಮಾಲೋಚನೆ ನಡೆಸುವುದಾಗಿ ಹೇಳಿದರು.

**ಡಿ.ಕೆ.ಶಿ ಅಪಮಾನ ಮಾಡಿಲ್ಲ:** ನಿನ್ನೆ ಮೈಸೂರಿನಲ್ಲಿ ನಡೆದ ಸಾಧನ ಸಮಾವೇಶದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಅಪಮಾನ ಮಾಡಿಲ್ಲ. ಬಿಜೆಪಿ ಈ ವಿಚಾರವನ್ನು ದುರ್ಬಳಕೆ ಮಾಡಿಕೊಂಡು ರಾಜಕೀಯ ಲಾಭ ಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ. ಆದರೆ ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ ಎಂದರು. ಡಿ.ಕೆ. ಶಿವಕುಮಾರ್ ಅವರು ಕಾರ್ಯಕ್ರಮದಲ್ಲಿ ಇರಲಿಲ್ಲ. ಅವರ ಹೆಸರನ್ನು ಕರೆಯಲಿಲ್ಲ. ಬಿಜೆಪಿ ಮೊಸರಲ್ಲಿ ಕಲ್ಲು ಹುಡುಕುವ ಪ್ರಯತ್ನ ಮಾಡುತ್ತಿದೆ. ಯಾರು ಇರುತ್ತಾರೋ ಅವರ ಹೆಸರನ್ನು ಕರೆಯುವುದು ರೂಢಿ ಎಂದರು. ಇದೇ ವೇಳೆ ಸಿದ್ದರಾಮಯ್ಯ ಅವರ ಪಕ್ಕದಲ್ಲೇ ಇದ್ದ ಡಿ.ಕೆ. ಶಿವಕುಮಾರ್ ನಾನು ಅಲ್ಲಿ ಇರಲೇ ಇಲ್ಲ ಎಂದು ಮುಖ್ಯಮಂತ್ರಿ ಅವರಿಗೆ ಬೆಂಬಲ ಸೂಚಿಸಿದರು. ಮಾತು ಮುಂದುವರೆಸಿದ ಮುಖ್ಯಮಂತ್ರಿ ಅವರು, ಬಿಜೆಪಿ ನಮಿಬ್ಬರ ನಡುವೆ ಒಡಕು ಮೂಡಿಸಿ, ರಾಜಕೀಯ ಲಾಭ ಪಡೆದುಕೊಳ್ಳುವ ಪ್ರಯತ್ನ ಮಾಡುತ್ತಿದೆ. ಆದರೆ ಅದು ಯಶಸ್ವಿಯಾಗುವುದಿಲ್ಲ. ಬಿಜೆಪಿ ಅವರು ಯಾವಾಗಲೂ ಭ್ರಮೆಯಲ್ಲೇ ಇರುತ್ತಾರೆ ಎಂದರು.

**ಬಿಜೆಪಿ ಅವರು ಭ್ರಮೆಯಲ್ಲೇ ಇರುತ್ತಾರೆ**



# ಬಾಯ್ಮುಚ್ಚಿಕೊಂಡಿರಿ: ಕಾಂಗ್ರೆಸ್ ಸಚಿವರು, ಶಾಸಕರಿಗೆ ಖರ್ಗೆ ವಾರ್ನಿಂಗ್

## ಮಂತ್ರಿಗಳೇ ಗೊಂದಲದ ಹೇಳಿಕೆ ನಿಲ್ಲಿಸಿ ಕೆಲಸ ಮಾಡಿ, ನಾಯಕತ್ವ ಕುರಿತು ಹೈಕಮಾಂಡ್‌ನಿಂದಲೇ ನಿರ್ಧಾರ

• ಉದಯವಾಹಿನಿ, ಬೆಂಗಳೂರು

**ಖರ್ಗೆ ಖಡಕ್ ಎಚ್ಚರಿಕೆ**


ನಾಯಕತ್ವದ ಬಗ್ಗೆ ಗೊಂದಲ ಮೂಡಿಸುವ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು. ಈ ವಿಚಾರವನ್ನು ಹೈಕಮಾಂಡ್ ನೋಡಿಕೊಳ್ಳುತ್ತದೆ ಎಂದು ರಾಜ್ಯ ಕಾಂಗ್ರೆಸಿಗರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಖಡಕ್ ವಾರ್ನಿಂಗ್ ಕೊಟ್ಟಿದ್ದಾರೆ.

ತಾವೇ ಪೂರ್ಣಾವಧಿ ಮುಖ್ಯಮಂತ್ರಿಯೆಂದು ದಿಲ್ಲಿಯಲ್ಲಿ ಸಿದ್ದರಾಮಯ್ಯ ಅವರು ನೀಡಿದ ಹೇಳಿಕೆ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ನಡೆಸಿದ ಸಭೆಗಳಿಂದ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಏನೋ ಆಗುತ್ತಿದೆ ಎಂಬ ಚರ್ಚೆಗೆ ಆಸ್ಪದವಾಗಿದೆ. ಪಕ್ಷ, ಸರಕಾರಕ್ಕೆ ಮುಜುಗರ ತರುವ ಹೇಳಿಕೆ ನೀಡದಂತೆ ಹೈಕಮಾಂಡ್ ಹತ್ತಾರು ಬಾರಿ ಕಟ್ಟಪ್ಪಣೆ ಮಾಡಿದರೂ ಬಣ ರಾಜಕೀಯದ ತಾಕಲಾಟ ನಿಂತಿಲ್ಲ.

ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ನಡೆದ ಸಭೆಯ ನೇಪಥ್ಯದಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಇಬ್ಬರಿಗೂ ಎಐಸಿಸಿ ಅಧ್ಯಕ್ಷರು ಕಿವಿಮಾತು ಹೇಳಿದ್ದಾರೆ. ಚುನಾವಣಾ ಪೂರ್ವ ಭರವಸೆ ಈಡೇರಿಸುವುದು ಮತ್ತು ಉತ್ತಮ ಆಡಳಿತ ನೀಡುವುದು ಸರಕಾರದ ಆದ್ಯತೆಯಾಗಬೇಕು. ಪಕ್ಷದಲ್ಲಿ ಗುಂಪುಗಾರಿಕೆ, ಸ್ಥಾನಮಾನಕ್ಕಾಗಿ ಪೈಪೋಟಿ ನಡೆಯುತ್ತಿದ್ದರೆ ಜನರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಆಗುವುದಿಲ್ಲಎಂದು ನೇರವಾಗಿ ಹೇಳಿದ್ದಾರೆ ಎನ್ನಲಾಗಿದೆ. ರಾಜ್ಯ ಸರಕಾರದ ಮೇಲೆ ಹೈಕಮಾಂಡ್ ಬಹಳ ನಿರೀಕ್ಷೆ ಇರಿಸಿಕೊಂಡಿದೆ.

ಹಾಗಿರುವಾಗ ಕುರ್ಚಿ ಕಲಹ ಮುಂದುವರಿದರೆ ಸರಕಾರದ ಸ್ಥಿರತೆಯ ಪ್ರಶ್ನೆಯೂ ಉದ್ಭವವಾಗುತ್ತದೆ. ಇಂಥದ್ದಕ್ಕೆ ಅವಕಾಶ ನೀಡಲೇಬಾರದು. ಯಾವ ಕಾಲದಲ್ಲಿಯಾವ ನಿರ್ಧಾರ ಕೈಗೊಳ್ಳಬೇಕು ಎಂಬುದನ್ನು ಹೈಕಮಾಂಡ್ ನಿರ್ಣಯಿಸುತ್ತದೆ. ಅದರ ಬಗ್ಗೆ ರಾಜ್ಯ ಘಟಕ ತಲೆಕೆಡಿಸಿಕೊಳ್ಳುವುದು ಬೇಡ ಖರ್ಗೆ ಸೂಚನೆ ಕೊಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ಸಚಿವ ಸಂಪುಟದ ಸದಸ್ಯರಿಗೂ ಎಚ್ಚರಿಕೆ ನೀಡಿರುವ ಎಐಸಿಸಿ ಅಧ್ಯಕ್ಷರು, ಸಚಿವರುಗಳು ಬಾಯ್ಮುಚ್ಚಿಕೊಂಡು ತಮ್ಮ ಇಲಾಖೆಯ ಕೆಲಸ ಮಾಡುವ ಮೂಲಕ ಸರಕಾರ, ಪಕ್ಷದ ವರ್ಚಸ್ಸು ಹೆಚ್ಚಿಸಬೇಕು. ಅದನ್ನು ಬಿಟ್ಟು ನಾಯಕತ್ವದ ಚರ್ಚೆಯನ್ನು ಚಾಲ್ತಿಯಲ್ಲಿಟ್ಟರೆ ಹೈಕಮಾಂಡ್ ಗಂಭೀರವಾಗಿ ಪರಿಗಣಿಸುತ್ತದೆ. ಇಂಥವರನ್ನು ಮುಲಾಜಿಲ್ಲದೇ ಸಂಪುಟದಿಂದ ಹೊರಗಟ್ಟಲು ಸೂಚಿಸಲಾಗುತ್ತದೆ. ಎಷ್ಟೇ ದೊಡ್ಡ ನಾಯಕರಾದರೂ ಹೈಕಮಾಂಡ್ ಈ ವಿಚಾರದಲ್ಲಿ ಕ್ರಮ ಕೈಗೊಳ್ಳುತ್ತದೆ ಎಂದಿದ್ದಾರೆ ಎಂದು ಹೇಳಲಾಗಿದೆ.



- ಕರ್ನಾಟಕ ಸಿಎಂ ಬದಲಾವಣೆ ವಿಚಾರವಾಗಿ ಕಾಂಗ್ರೆಸ್ ಶಾಸಕರು, ಸಚಿವರು ಹಾಗೂ ನಾಯಕರು ಬಾಯ್ಮುಚ್ಚಿಕೊಂಡಿರಿ ಎಂದ ಮಲ್ಲಿಕಾರ್ಜುನ ಖರ್ಗೆ.
- ಮಂತ್ರಿಗಳೇ ಗೊಂದಲದ ಹೇಳಿಕೆ ನಿಲ್ಲಿಸಿ ಕೆಲಸ ಮಾಡಿ ಎಂದ ಎಐಸಿಸಿ ಅಧ್ಯಕ್ಷ.
- ನಾಯಕತ್ವ ಕುರಿತು ಹೈಕಮಾಂಡ್ ನಿಂದಲೇ ನಿರ್ಧಾರ ಎಂದು ಸ್ಪಷ್ಟಪಡಿಸಿದ ಖರ್ಗೆ.

ನಾಯಕತ್ವದ ವಿಚಾರವನ್ನು ಹೈಕಮಾಂಡ್ ನೋಡಿಕೊಳ್ಳುತ್ತದೆ ಎಂದು ಖರ್ಗೆ ಅವರೇ ಇತ್ತೀಚೆಗೆ ಬೆಂಗಳೂರಿನಲ್ಲಿಹೇಳಿಕೆ ನೀಡಿದ್ದರು. ಅದಾದ ಬಳಿಕ ಪ್ರದೇಶ ಕಾಂಗ್ರೆಸ್‌ನಲ್ಲಿ ಸಾಕಷ್ಟು ಬೆಳವಣಿಗೆಗಳಾಗಿವೆ. ಸಿದ್ದರಾಮಯ್ಯ ಅವರು ದಿಲ್ಲಿಗೆ ಹೋಗಿ ತಾವೇ 5 ವರ್ಷ ಸಿಎಂ ಎಂದು ಹೇಳಿಕೊಂಡಿದ್ದಾರೆ.

ಮತ್ತೊಂದೆಡೆ ಉಸ್ತುವಾರಿ ಸುರ್ಜೇವಾಲಾ 103 ಶಾಸಕರ ಸಭೆ ನಡೆಸಿದ್ದಾರೆ. ಸಚಿವರನ್ನೂ ಕರೆಸಿಕೊಂಡು ಸುರ್ಜೇವಾಲಾ ಮಾತನಾಡಿದ್ದಾರೆ. ಇದೀಗ ನಾಯಕತ್ವದ ಬಗ್ಗೆ ಗೊಂದಲ ಮೂಡಿಸದಂತೆ ಖರ್ಗೆ ಅವರು ತಾಕೀತು ಮಾಡಿರುವುದು ಕೂಡ ಮಹತ್ವ ಪಡೆದುಕೊಂಡಿದೆ. ಇಷ್ಟಾದರೂ ಹೈಕಮಾಂಡ್ ಮನಸ್ಸಿನಲ್ಲಿ ಏನಿರಬಹುದು ಎಂಬ ಚರ್ಚೆ ಪ್ರದೇಶ ಕಾಂಗ್ರೆಸ್‌ನ ಆಂತರಿಕ ವಲಯದಲ್ಲಿ ಮುಂದುವರಿದಿದೆ.

### ಆಗಸ್ಟ್‌ನಲ್ಲಿ ಸಿದ್ದರಾಮಯ್ಯ ದೆಹಲಿ ಪ್ರವಾಸ

ಈ ನಡುವೆ ಸಿಎಂ ಸಿದ್ದರಾಮಯ್ಯ ಅವರು ಎಐಸಿಸಿ ಆಯೋಜಿಸಿರುವ ಅಧಿಕೃತ ಕಾರ್ಯಕ್ರಮದಲ್ಲಿಭಾಗಿಯಾಗಲು ಆಗಸ್ಟ್ ಮೊದಲವಾರ ದಿಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಸಂದರ್ಭದಲ್ಲಿಅವರು ವರಿಷ್ಠರನ್ನು ಭೇಟಿ ಮಾಡಲಿದ್ದು, ಹಲವು ಪ್ರಮುಖ ವಿಚಾರದ ಬಗ್ಗೆ ಪ್ರಸ್ತಾಪವಾಗುವ ಸಾಧ್ಯತೆಯಿದೆ. ಸಂಪುಟ ಪುನಾರಚನೆಯನ್ನು ಅಪೇಕ್ಷಿಸಿರುವ ಸಿಎಂ ಈ ಬಗ್ಗೆ ಹೈಕಮಾಂಡ್ ಮುಂದೆ ಬೇಡಿಕೆ ಇಡಬಹುದು ಎಂದು ಹೇಳಲಾಗುತ್ತಿದೆ.

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹10,004 /Gram(24ct) ₹9,170/Gram(22ct) | ಬೆಳ್ಳಿ: ₹116.00/Gram

# ಗ್ರೇಟರ್ ಬೆಂಗಳೂರಿನಲ್ಲಿ ಪಂಚ ಪಾಲಿಕೆಗಳ ಗಡಿ ಫಿಕ್ಸ್

## ಬಿಬಿಎಂಪಿಯಲ್ಲಿ ಅಧಿಕಾರಿಗಳ ಆಡಳಿತವೇ ಜಾರಿ, ಅಧಿಸೂಚನೆಗೆ ಸಂಬಂಧಿಸಿದಂತೆ ಆಕ್ಷೇಪಣೆ ಅಥವಾ ಸಲಹೆ

• **ಉದಯವಾಹಿನಿ, ಬೆಂಗಳೂರು**

ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಐದು ಪಾಲಿಕೆಗಳನ್ನು ರಚಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದ ಬೆನ್ನಲ್ಲೇ, ಪಂಚ ಪಾಲಿಕೆಗಳ ಗಡಿಗಳನ್ನು ಗುರುತಿಸಿ ಕರಡು ಅಧಿಸೂಚನೆ ಹೊರಡಿಸಲಾಗಿದೆ. ಈ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಸಾರ್ವಜನಿಕರಿಗೆ 30 ದಿನಗಳ ಕಾಲಾವಕಾಶ ನೀಡಲಾಗಿದೆ. ಮೇ 15ರಿಂದ ಜಾರಿಗೆ ಬಂದಿರುವ ಗ್ರೇಟರ್ ಬೆಂಗಳೂರು ಆಡಳಿತ ಕಾಯಿದೆ-2024ರಂತೆ ಬೆಂಗಳೂರು ಪಶ್ಚಿಮ ದಕ್ಷಿಣ, ಉತ್ತರ, ಪೂರ್ವ ಮತ್ತು ಕೇಂದ್ರ ನಗರ ಪಾಲಿಕೆಗಳನ್ನು ರಚಿಸಲು ಸಚಿವ ಸಂಪುಟದ ಉಪ ಸಮಿತಿ ವರದಿ ಸಲ್ಲಿಸಿತ್ತು. ಇದನ್ನು ಆಧರಿಸಿ ಸಚಿವ ಸಂಪುಟ ಅನುಮೋದನೆ ನೀಡಿತ್ತು.

ಗ್ರೇಟರ್ ಬೆಂಗಳೂರು ಪಂಚ ಪಾಲಿಕೆಗಳ ಗಡಿ ಗುರುತಿಸಿ ರಾಜ್ಯ ಸರಕಾರ ಅಧಿಸೂಚನೆ ಹೊರಡಿಸಿದೆ. ಇದರಿಂದಾಗಿ ಕಳೆದ 5 ವರ್ಷಗಳಿಂದ ಚುನಾವಣೆಯ ಕನವರಿಕೆಯಲ್ಲಿದ್ದ ಆಕಾಂಕ್ಷಿ ಅಭ್ಯರ್ಥಿಗಳು ನಿಟ್ಟುಸಿರು ಬಿಡುವಂತಾಗಿದೆ.

2020ರ ಸೆ.10ರಂದು ಚುನಾಯಿತ ಕೌನ್ಸಿಲರ್‌ಗಳ ಅವಧಿ ಅಂತ್ಯಗೊಂಡಿತು.

ಆಗಿನಿಂದಲೂ ಬಿಬಿಎಂಪಿಯಲ್ಲಿ ಅಧಿಕಾರಿಗಳ ಆಡಳಿತವೇ ಜಾರಿಯಲ್ಲಿತ್ತು. ಇದೀಗ ಚುನಾವಣೆಗೆ ಕ್ಷಣಗಣನೆ ಆರಂಭವಾಗಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯಿದೆ-2024ರಡಿ ಜನಸಾಂದ್ರತೆ, ವಿಸ್ತೀರ್ಣ, ಜನಸಂಖ್ಯೆ, ಆದಾಯ, ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು, ಆರ್ಥಿಕ ಪ್ರಾಮುಖ್ಯತೆ, ಪ್ರದೇಶದಲ್ಲಿಲಭ್ಯವಿರುವ ಮೂಲಸೌಕರ್ಯ ಸೌಲಭ್ಯಗಳನ್ನು ಪರಿಗಣಿಸಿ ಐದು ಪಾಲಿಕೆಗಳನ್ನಾಗಿ ರಚಿಸಲಾಗಿದೆ. ಅಧಿಸೂಚನೆಗೆ ಸಂಬಂಧಿಸಿದಂತೆ ಆಕ್ಷೇಪಣೆ ಅಥವಾ ಸಲಹೆಗಳನ್ನು ಸಲ್ಲಿಸಲು 30 ದಿನಗಳ ಕಾಲಾವಕಾಶ ನೀಡಲಾಗಿದೆ. ಆನಂತರವೇ ಪ್ರಸ್ತಾವನೆಯನ್ನು ಪರಿಗಣಿಸಲಾಗುತ್ತದೆ. ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕೊಠಡಿ ಸಂಖ್ಯೆ 436, 4ನೇ ಮಹಡಿ ವಿಕಾಸಸೌಧ, ಡಾ. ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560001 ಈ ವಿಳಾಸಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ರಾಜ್ಯ ಸಚಿವ ಸಂಪುಟವು ಇತ್ತೀಚಿಗೆ ಗ್ರೇಟರ್ ಬೆಂಗಳೂರಿಗೆ ಚುನಾವಣೆ ನಡೆಸುವ ತೀರ್ಮಾನ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. **ಪಶ್ಚಿಮ ನಗರ ಪಾಲಿಕೆ:** ಗಡಿಗಳು: ಪಶ್ಚಿಮ-ಉತ್ತರ ತುಮಕೂರು ರಸ್ತೆ, ವಿದ್ಯಾರಣ್ಯಪುರ-ನಂಜನಗೂಡು ರಸ್ತೆ, ಮತ್ತಿಕೆರೆ ಮುಖ್ಯ ರಸ್ತೆ, ಎಚ್‌ಎಂಟಿ ಮುಖ್ಯರಸ್ತೆ, ನ್ಯೂ ಬಿಇಎಲ್ ರಸ್ತೆ, 80 ಅಡಿ ರಸ್ತೆ, ಸಂಜಯನಗರ ಮುಖ್ಯ ರಸ್ತೆ.

**ಗಡಿಗಳು: ಪಶ್ಚಿಮ-ಕೇಂದ್ರ:** ಜಯಮಹಲ್ ಮುಖ್ಯರಸ್ತೆ, ಅರಮನೆ ರಸ್ತೆ, ಶೇಷಾದ್ರಿಪುರಂ ಮುಖ್ಯರಸ್ತೆ, ನಾಗಪ್ಪ ಬೀದಿ, ಸಂಪಿಗೆ ರಸ್ತೆ, ಎಂಕೆಕೆ ರಸ್ತೆ, ರೈಲ್ವೆಹಳಿ, ಪುಟ್ಟಸ್ವಾಮಿ ರಸ್ತೆ, ಮಾಗಡಿ ಮುಖ್ಯರಸ್ತೆ, ಪೈಪ್‌ಲೈನ್ ರಸ್ತೆ, ರಾಜೀವ್‌ಗಾಂಧಿ ಕ್ರೀಡಾ ಸಂಕೀರ್ಣ, ಸಮೀರ್‌ಪುರ ಮುಖ್ಯರಸ್ತೆ, ದೇವನಾಥಾಚಾರ್ ಬೀದಿ, ಲಕ್ಷ್ಮೀಪುರ ಮುಖ್ಯರಸ್ತೆ, ಕುಮಾರಸ್ವಾಮಿ ದೇವಸ್ಥಾನ ರಸ್ತೆ, ಮೌಂಟ್ ಜಾಯ್ ರಸ್ತೆ, ಕೆ.ಆರ್.ರಸ್ತೆ, ದಿವಾನ್ ಮಾಧವ ರಾವ್ ರಸ್ತೆ, ಪಟಾಲಮ್ಮ ದೇವಸ್ಥಾನ, 15ನೇ ಮುಖ್ಯರಸ್ತೆ.

**ಗಡಿಗಳು: ಪಶ್ಚಿಮ-ದಕ್ಷಿಣ:** ಅರಬಿಂದೋ ಮಾರ್ಗ, ಕೆ.ಆರ್. ರಸ್ತೆ, 27ನೇ ಅಡ್ಡರಸ್ತೆ, ಕನಕಪುರ ಮುಖ್ಯರಸ್ತೆ, ಸುಬ್ರಹ್ಮಣ್ಯಪುರ ಮುಖ್ಯರಸ್ತೆ, ಹೊರ ವರ್ತುಲ ರಸ್ತೆ, ಕಾಮಾಕ್ಯ ಮುಖ್ಯರಸ್ತೆ, ಕೆಂಗಲ್ ಹನುಮಂತಯ್ಯ ಪಾರ್ಕ್, ನೈಸ್ ರಸ್ತೆ.

**ಬೆಂಗಳೂರು ದಕ್ಷಿಣ ನಗರ ಪಾಲಿಕೆ:** ಗಡಿಗಳು: ದಕ್ಷಿಣ-ಪಶ್ಚಿಮ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇ ಲಿಂಕ್ ರಸ್ತೆ, ಸತ್ಯ ನಾರಾಯಣ ದೇವಸ್ಥಾನ ರಸ್ತೆ, ವಿನಾಯಕ ದೇವಸ್ಥಾನ ರಸ್ತೆ, ಕುವೆಂಪು ರಸ್ತೆ, ಚಿಕ್ಕಲ್ಲಸಂದ್ರ ಮುಖ್ಯ ರಸ್ತೆ, ಸುಬ್ರಮಣ್ಯಪುರ ಮುಖ್ಯರಸ್ತೆ, ಕನಕಪುರ ಮುಖ್ಯರಸ್ತೆ, ಕೆ.ಆರ್.ರಸ್ತೆ.



ಉದಯವಾಹಿನಿ ಚಿತ್ರ

**ಸಚಿವ ಸಂಪುಟ ಸಭೆ ಒಪ್ಪಿಗೆ**

- **ಗ್ರೇಟರ್ ಬೆಂಗಳೂರು ಪಂಚ ಪಾಲಿಕೆಗಳ ಗಡಿಗಳನ್ನು ಗುರುತಿಸಿ ಕರಡು ಅಧಿಸೂಚನೆ.**
- **ಪಂಚ ಪಾಲಿಕೆ ಗುಡಿ ಕುರಿತ ಆಕ್ಷೇಪಣೆ ಸಲ್ಲಿಕೆಗೆ ಸಾರ್ವಜನಿಕರಿಗೆ 30 ದಿನಗಳ ಕಾಲಾವಕಾಶ.**

### ಗಡಿಗಳು: ಪಶ್ಚಿಮ ನಗರ ಪಾಲಿಕೆ-ಬಿಡಿಎ

**ಎಚ್.ಗೊಲ್ಲಹಳ್ಳಿ ಸರೋವರ, ಎಚ್.ಗೊಲ್ಲಹಳ್ಳಿ ರಸ್ತೆ, ನೈಸ್ ರಿಂಗ್ ರಸ್ತೆ, ಕೆಂಗೇರಿ ಕೊಮ್ಮಘಟ್ಟ ರಸ್ತೆ, 100 ಅಡಿ ರಸ್ತೆ, ಸೊನ್ನೇನಹಳ್ಳಿ ಪಾರ್ಕ್, ಸೊನ್ನೇನಹಳ್ಳಿ ಮುಖ್ಯರಸ್ತೆ, ವಿಶ್ವೇಶ್ವರಯ್ಯ ನಗರ ಮುಖ್ಯರಸ್ತೆ, ದ್ವಾರಕವಾಸ ರಸ್ತೆ, ನೈಸ್ ರಸ್ತೆ, ಕೊಡಿಗೇಹಳ್ಳಿ ಮುಖ್ಯರಸ್ತೆ, ಅಂಚೆಪಾಳ್ಯ ಸರೋವರ, ಜೆಎನ್‌ಐ ರಸ್ತೆ, ಸಿದ್ಧಿ ವಿನಾಯಕ ರಸ್ತೆ, ತುಮಕೂರ ರಸ್ತೆ.**

# 9ನೇ ವಾರ್ಷಿಕೋತ್ಸವದ ಸಾಂಸ್ಕೃತಿಕ ಸಂಭ್ರಮ




ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

9ನೇ ವಾರ್ಷಿಕೋತ್ಸವದ ಸಾಂಸ್ಕೃತಿಕ ಸಂಭ್ರಮದ ಪ್ರಯುಕ್ತ ಉದಯ ಭಾನು ಸಭಾಂಗಣದಲ್ಲಿ ಶ್ರೀ ಚೈತನ್ಯ ಇಂಟರ್ನ್ಯಾಷನಲ್ ಆರ್ಟ್ಸ್ ಅಕಾಡೆಮಿ (ರಿ.) ಸಂಸ್ಥೆಯ ಮೂಲಕ ಕ್ರೀಡೆ, ಸಮಾಜ ಸೇವೆಯನ್ನು ಗುರುತಿಸಿ ಕರುನಾಡ ಪದ್ಮ-2025 ಪ್ರಶಸ್ತಿ ಪುರಸ್ಕಾರವನ್ನು ಚನ್ನೇಗೌಡ ಉಜ್ಜನಿ ಚಲುವಯ್ಯರವರಿಗೆ ಹಲವಾರು ಗಣ್ಯರ ಸಮ್ಮುಖದಲ್ಲಿ ನೀಡಿ ಗೌರವಿಸಿದ್ದಾರೆ.

# ಮಹಾಭಾರತ-ಭೀಷ್ಮಪರ್ವ

• **ಉದಯವಾಹಿನಿ, ಬೆಂಗಳೂರು**



ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ವತಿಯಿಂದ ಜುಲೈ 21ರಿಂದ 27ರ ವರೆಗೆ ಪ್ರತಿದಿನ ಸಂಜೆ 6-30ಕ್ಕೆ ಶ್ರೀ ಪ್ರಭಂಜನಾಚಾರ್ಯ ವಿದ್ಯಾಪತಿ ಇವರಿಂದ ಮಹಾಭಾರತ- ಭೀಷ್ಮಪರ್ವ ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಬೆಮೆಲ್ ಲೇಔಟ್, ರಾಜರಾಜೇಶ್ವರಿನಗರ, ಬೆಂಗಳೂರು

# ಸಾರಿಗೆ ನೌಕರರ ಬೇಡಿಕೆ ಈಡೇರಿಸಿ: ವೆಂಕಟೇಶ್

• **ಉದಯವಾಹಿನಿ, ಬೆಂಗಳೂರು**

2020ರ ಜನವರಿ 1ರಿಂದ ಜಾರಿಗೆ ತಂದಿರುವ ವೇತನ ಪರಿಷ್ಕರಣೆ ಬಾಕಿಯನ್ನು 38 ತಿಂಗಳಿಂದಲೂ ಪಾವತಿ ಮಾಡಿಲ್ಲ.

ಸುಮಾರು 1,700 ಕೋಟಿ ಬಿಡುಗಡೆ ಮಾಡುವುದು ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಬಿಎಂಟಿಸಿ ಮಾಜಿ ಉಪಾಧ್ಯಕ್ಷ ಎಂ.ಆರ್. ವೆಂಕಟೇಶ್ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, ನಾಲ್ಕು ಸಾರಿಗೆ ನಿಗಮಗಳಲ್ಲಿನ ಮೂಲಸೌಕರ್ಯ ಕೊರತೆ, ಪಿ.ಎಫ್. ಇತ್ಯರ್ಥ, ನೌಕರರ ವಿರುದ್ಧ ದಾಖಲಾಗಿರುವ ಪ್ರಕರಣಗಳ ಬಗ್ಗೆ ಉಲ್ಲೇಖಿಸಿ, ಸಮಸ್ಯೆ ಪರಿಹರಿಸುವಂತೆ ಮನವಿ ಮಾಡಿದ್ದಾರೆ.



ಉದಯವಾಹಿನಿ ಚಿತ್ರ

ಬಿಎಂಟಿಸಿಯಲ್ಲೇ ಸುಮಾರು 1,631 ವಿದ್ಯುತ್ ಚಾಲಿತ ಬಸ್‌ಗಳಿದ್ದು, ಈ ಬಸ್‌ಗಳ ಕಂಪನಿಗಳಿಗೆ ಮೂರು ತಿಂಗಳಿನಿಂದ ರೂ.200 ಕೋಟಿ ಬಿಲ್ ಪಾವತಿ ಮಾಡಿಲ್ಲ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ನೌಕರರ ಗ್ರಾಚ್ಯುಟಿ, ರಜೆ ನಗದೀಕರಣ ಬಾಕಿ ರೂ. 315 ಕೋಟಿ ಬಿಡುಗಡೆ ಮಾಡುವಂತೆಯೂ ಒತ್ತಾಯಿಸಿದ್ದಾರೆ.

**2ನಾಲ್ಕು ಸಾರಿಗೆ ನಿಗಮಗಳಲ್ಲಿ 1 ಲಕ್ಷಕ್ಕೂ ಹೆಚ್ಚು ನೌಕರರಿದ್ದಾರೆ. ಸರ್ಕಾರಿ ನೌಕರರಿಗೆ ಮೂಲ ವೇತನವನ್ನು ತುಟ್ಟಿ ಭತ್ಯೆಯೊಂದಿಗೆ ವಿಲೀನಗೊಳಿಸಿ 2024ರಿಂದ ಹೊಸ ವೇತನ ಪರಿಷ್ಕರಣೆ ಮಾಡಿದೆ. ಅದರ ಪ್ರಕಾರ ಸಾರಿಗೆ ನಿಗಮದ ನೌಕರರಿಗೂ ಸರ್ಕಾರಿ ನೌಕರರ ವೇತನದಂತೆ ಮೂಲವೇತನಕ್ಕೆ ತುಟ್ಟಿಭತ್ಯೆ ವಿಲೀನಗೊಳಿಸಿ ನೀಡಬೇಕಿದೆ. ಇದರ ಮೊತ್ತ ಅಂದಾಜು 10 ಕೋಟಿ ಆಗಬಹುದು ಎಂದು ಹೇಳಿದ್ದಾರೆ.**

# ರೂ. 40 ಕೋಟಿ ಮೌಲ್ಯದ ಕೊಕೇನ್ ಜಪ್ತಿ

• **ಉದಯವಾಹಿನಿ, ಬೆಂಗಳೂರು**

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕತಾರ್‌ನ ರಾಜಧಾನಿ ದೋಹಾದಿಂದ ಬಂದ ಪ್ರಯಾಣಿಕನ ಬಳಿ 4 ಕೆ.ಜಿ 6 ಗ್ರಾಂ ಕೊಕೇನ್ ಪತ್ತೆಯಾಗಿದ್ದು, ಆರೋಪಿಯನ್ನು ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ರಾತ್ರಿ ಬಂಧಿಸಿದ್ದಾರೆ.

ಡಿಆರ್‌ಐನ ಬೆಂಗಳೂರು ವಿಭಾಗದ ಅಧಿಕಾರಿಗಳು ರಾತ್ರಿ ದೋಹಾದಿಂದ ಬಂದ ಪ್ರಯಾಣಿಕರನ್ನು ಖಚಿತ ಮಾಹಿತಿ ಮೇರೆಗೆ ತಪಾಸಣೆಗೆ ಒಳಪಡಿಸಿದಾಗ ಆತನ ಬಳಿ ಅಪಾರ ಪ್ರಮಾಣದ ಕೊಕೇನ್ ಪತ್ತೆಯಾಗಿತ್ತು. ತಕ್ಷಣವೇ ಆರೋಪಿಯನ್ನು ವಶಕ್ಕೆ ಪಡೆದು. ಆತನ ಬಳಿಯಿದ್ದ ಮಾದಕ ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ. ಆರೋಪಿಯಿಂದ ವಶಪಡಿಸಿಕೊಂಡ ಕೊಕೇನ್‌ಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ರೂ.40 ಕೋಟಿ ಬೆಲೆಯಿದೆ ಎಂದು ಮೂಲಗಳು ತಿಳಿಸಿವೆ.

ಆರೋಪಿಯು ತನ್ನ ಲಗೇಜ್‌ನೊಂದಿಗೆ ಸೂಪರ್ ಹೀರೊಗಳ ಕಾಮಿಕ್ಸ್ ಪುಸ್ತಕವನ್ನು ಇರಿಸಿದ್ದ. ಪುಸ್ತಕದ ಹಾಳೆಗಳ ಮೇಲೆ ಕೊಕೇನ್‌ನ ಬಿಳಿ ಬಣ್ಣದ ಪುಡಿಯನ್ನು ಹಾಕಿಕೊಂಡು ಸಾಗಾಟ ಮಾಡುತ್ತಿದ್ದ. ಪುಸ್ತಕದ ಹಾಳೆಗಳ ಮೇಲಿದ್ದ ಬಿಳಿ ಪುಡಿ ಕಂಡು ಅನುಮಾನಗೊಂಡ ಅಧಿಕಾರಿಗಳು ಅದನ್ನು ಪರೀಕ್ಷಿಸಿದಾಗ, ಆ ಬಿಳಿ ಪುಡಿ ಕೊಕೇನ್ ಎಂದು ದೃಢಪಟ್ಟಿತ್ತು. ಆರೋಪಿಯ ವಿರುದ್ಧ ಮಾದಕ ದ್ರವ್ಯ ನಿಗ್ರಹ ಕಾಯ್ದೆ ಎನ್‌ಡಿಪಿಎಸ್ ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದ್ದು, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಡಿಆರ್‌ಐ ಅಧಿಕಾರಿಗಳು ತಿಳಿಸಿದ್ದಾರೆ.



# ಜಿಎಸ್‌ಟಿ ನೋಟಿಸ್: ಸಣ್ಣ ವ್ಯಾಪಾರಿಗಳ ಬೆನ್ನಿಗೆ ನಿಂತ ಬಿಜೆಪಿ ಸಹಾಯವಾಣಿ ಆರಂಭ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

ಜಿಎಸ್‌ಟಿ ನೋಂದಾಯಿಸದೆ ಯುಪಿಐ ಮೂಲಕ 40 ಲಕ್ಷ ರೂ. ಗಿಂತ ಹೆಚ್ಚು ಹಣ ವರ್ಗಾವಣೆ ಮಾಡಿರುವ ಬೆಂಗಳೂರಿನ ಸಣ್ಣ ವ್ಯಾಪಾರಿಗಳಿಗೆ ವಾಣಿಜ್ಯ ತೆರಿಗೆ ಇಲಾಖೆ ನೋಟಿಸ್ ನೀಡಿದ್ದು, ದಂಡ ಪಾವತಿಸುವಂತೆ ಸೂಚಿಸಿದೆ.

ಈ ವಿಚಾರ ಇದೀಗ ರಾಜಕೀಯ ತಿರುವು ಪಡೆದಿದ್ದು ನೋಟಿಸ್ ಪಡೆದಿರುವ ಸಣ್ಣ ವ್ಯಾಪಾರಿಗಳ ನೆರವಿಗೆ ಬಿಜೆಪಿ ಮುಂದಾಗಿದೆ.

ಬೇಕರಿ, ಕಾಂಡಿಮೆಂಟ್ಸ್, ಕಾಫಿ-ಟೀ ಅಂಗಡಿಗಳು, ಹೂವಿನ ವ್ಯಾಪಾರಿಗಳಿಗೆ ನೋಟಿಸ್ ಜಾರಿ ಮಾಡಿರುವುದರಿಂದ ವರ್ತಕರಲ್ಲಿ ಭಯ, ಗೊಂದಲದ ವಾತಾವರಣ ಸೃಷ್ಟಿಯಾಗಿದ್ದು, ನಿಮ್ಮೊಂದಿಗೆ ನಾವಿದ್ದೇವೆ ಎಂದು ರಾಜ್ಯ ಬಿಜೆಪಿ ತಿಳಿಸಿದೆ. ಇದೇ ವೇಳೆ ಸಣ್ಣ ವ್ಯಾಪಾರಸ್ಥರ ಹಿತರಕ್ಷಣೆಗಾಗಿ ಸಹಾಯವಾಣಿ (88842 45123)ಸಂಖ್ಯೆಯನ್ನು ಆರಂಭಿಸಿದೆ

ಕೇಂದ್ರದ ಮೂಲಕ ರಾಜ್ಯ ಸರಕಾರಕ್ಕೆ ಇರುವ ಮಾಹಿತಿಯ ಪ್ರಕಾರ ವಾರ್ಷಿಕ ವಹಿವಾಟು 40 ಲಕ್ಷ ರೂ. ಮೀರಿದರೆ ಅವರು ಜಿಎಸ್‌ಟಿಯಡಿ ನೋಂದಾಯಿಸಿಕೊಳ್ಳಬೇಕು. ಜಿಎಸ್‌ಟಿ ವಾರ್ಷಿಕ ವಹಿವಾಟು 20 ಲಕ್ಷ ರೂ. ಮೀರಿರುವ ಸೇವಾ ಪೂರೈಕೆದಾರರು ತೆರಿಗೆ ಕಟ್ಟಬೇಕು ಎಂದು ವ್ಯಾಪಾರಿಗಳಿಗೆ ನೋಟಿಸ್ ಕಳುಹಿಸಿದ್ದಾರೆ.

ಆದರೆ ಇದು ಸಲ್ಲದು ಎಂದು ಅವರು ಆಕ್ಷೇಪಿಸಿದರು. ವ್ಯಾಪಾರಿಗಳು ಯಾವುದೇ ಕಾರಣಕ್ಕೂ ಕಳ್ಳರಲ್ಲ ಮತ್ತು ತೆರಿಗೆಯನ್ನು ವಂಚಿಸುವವರಲ್ಲ. ಆದರೆ ತೆರಿಗೆಯ ಪರಿಸ್ಥಿತಿ ಅವರಿಗೆ ಅರ್ಥವಾಗಿಲ್ಲ ಮತ್ತು ಸರಕಾರದವರು ಅವರಿಗೆ ಅರ್ಥ ಮಾಡಿಸಿಲ್ಲ. ಬಡ ವ್ಯಾಪಾರಿಗಳು ಗೊಂದಲದಲ್ಲಿದ್ದಾರೆ ಹಾಗೂ ಆತಂಕಗೊಂಡಿದ್ದಾರೆ.

ಆದ್ದರಿಂದ ಸರಕಾರ ಇದನ್ನು ಗಮನಿಸಿ, ಬಡಜನರ ರಕ್ಷಣೆಗೆ ಧಾವಿಸಬೇಕು ಎಂದು ಅವರು ಆಗ್ರಹಿಸಿದರು. ಶೇ.90ರಷ್ಟು ವರ್ತಕರಿಗೆ ರಾಜ್ಯ ಜಿಎಸ್‌ಟಿ ಘಟಕದ ವತಿಯಿಂದ ಯಾವುದೇ ಮಾಹಿತಿ ನೀಡದೆ ಮತ್ತು ತೆರಿಗೆ ಮಾಹಿತಿಯನ್ನು ಕೊಡದೆ ಸಣ್ಣ ವ್ಯಾಪಾರಿಗಳಲ್ಲಿ ಆತಂಕ ಸೃಷ್ಟಿಸಿದ್ದಾರೆ. ಆದ್ದರಿಂದ ಅಧಿಕಾರಿಗಳು ವ್ಯಾಪಾರಿಗಳಿಗೆ ನೀಡಿರುವ 14,000 ನೋಟಿಸ್ ಕಾನೂನಿಗೆ ವಿರುದ್ಧವಾಗಿದೆ ಸಂವಿಧಾನ ವಿರುದ್ಧವಾಗಿದೆ ಎಂದು ಅವರು ಆಕ್ಷೇಪಿಸಿದರು.

**ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು, ಜಿಎಸ್‌ಟಿ ನೋಟಿಸ್ ವಿಚಾರದಲ್ಲಿ ಗೊಂದಲ ಶುರುವಾಗಿದ್ದು, ಬಡ ವ್ಯಾಪಾರಿಗಳಲ್ಲಿ ಆತಂಕದ ಛಾಯೆ ಮೂಡಿದೆ. ಇದರ ಪರಿಹಾರೋಪಾಯಗಳನ್ನು ಸರಕಾರ ಮಾಡಬೇಕಿತ್ತು. ಆದರೆ, ರಾಜ್ಯ ಸರಕಾರ ಎಲ್ಲಿಯೂ ನಿಜವಾದ ತೆರಿಗೆ ಮೊತ್ತ ಯಾವುದು ಮತ್ತು ವಿಧಿಸಲಾಗದ ತೆರಿಗೆ ಮೊತ್ತ ಯಾವುದು ಎಂದು ಕೂಲಂಕಶ ಚರ್ಚೆ ಮಾಡಿಲ್ಲ ಮತ್ತು ವ್ಯಾಪಾರಿಗಳಿಗೆ ಮಾಹಿತಿ ನೀಡಿಲ್ಲ ಎಂದು ಆರೋಪಿಸಿದರು.**

# ಬಂಜರು ಭೂಮಿ- ನಕ್ಸಲ್ ಚಟುವಟಿಕೆಯ ಕೇಂದ್ರವಾಗಿದ್ದ ಈಗ ಹಸಿರಿನಿಂದ ಸಮೃದ್ಧ

• **ಉದಯವಾಹಿನಿ, ಬೆಂಗಳೂರು**

ಒಂದು ಕಾಲದಲ್ಲಿ ಅತಿ ಹೆಚ್ಚಿನ ಫ್ಲೋರೈಡ್ ಮಟ್ಟ, ನಕ್ಸಲ್ ಭಯೋತ್ಪಾದನೆಯಿಂದ ಕುಖ್ಯಾತಿ ಪಡೆದಿದ್ದ ದಕ್ಷಿಣ ಕರ್ನಾಟಕದ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದಾದ ಪಾವಗಡ ಈಗ ಪರಿವರ್ತನೆಯ ಕೇಂದ್ರಬಿಂದುವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಹೆಲಿಕಾಪ್ಟರ್ ಮೂಲಕ ಪಾವಗಡಕ್ಕೆ ತಲುಪಲಿದ್ದಾರೆ. ಈ ಪ್ರದೇಶಕ್ಕೆ ಅವಳಿ ಜೀವನಾಡಿಯಾದ ಕುಡಿಯುವ ನೀರಿನ ಯೋಜನೆ ಮತ್ತು ಸೌರಶಕ್ತಿ ಸೌಲಭ್ಯವನ್ನು ಉದ್ಘಾಟಿಸಲಿದ್ದಾರೆ. ಕೆಲವೇ ವರ್ಷಗಳ ಹಿಂದೆ, ಪಾವಗಡದ ಅಂತರ್ಜಲವು ತುಂಬಾ ವಿಷಕಾರಿಯಾಗಿತ್ತು, ಇಲ್ಲಿನ ನೀರು ಹಲ್ಲುಜ್ಜಲು ಸಹ ಯೋಗ್ಯವಾಗಿರಲಿಲ್ಲ. ಫ್ಲೋರೈಡ್ ಮಟ್ಟವು ಸುರಕ್ಷತಾ ಮಿತಿಗಳಿಗಿಂತ ಐದು ಪಟ್ಟು ಹೆಚ್ಚಾಗಿತ್ತು ಎಂದು ವರದಿಯಾಗಿದೆ, ಇದರಿಂದಾಗಿ ಇಲ್ಲಿನ ನಿವಾಸಿಗಳಲ್ಲಿ ಹಲ್ಲಿನ ಸಮಸ್ಯೆ ಹೆಚ್ಚಾಗಿತ್ತು. ಇಲ್ಲಿ ಒಬ್ಬ ನಿವಾಸಿಯೂ ಮತ್ತೆ ವಿಷ ಸೇವಿಸಬಾರದು ಎಂದು ಖಚಿತಪಡಿಸಿಕೊಳ್ಳಲು ನಾವು ತುಂಗಭದ್ರಾ ನದಿಯಿಂದ 230 ಕಿ.ಮೀ. ದೂರದಲ್ಲಿರುವ ಶುದ್ಧ, ಸಂಸ್ಕರಿಸಿದ ನೀರನ್ನು ಪಂಪ್ ಮಾಡುತ್ತಿದ್ದೇವೆ ಎಂದು ಗೃಹ ಸಚಿವ ಮತ್ತು ತುಮಕೂರು ಜಿಲ್ಲಾ ಸಚಿವ ಡಾ. ಜಿ. ಪರಮೇಶ್ವರ ಹೇಳಿದ್ದರು. ಮಧುಗಿರಿ, ಪಾವಗಡ ಮತ್ತು ಸುತ್ತಮುತ್ತಲಿನ ಬರಪೀಡಿತ ಪ್ರದೇಶಗಳು ಈಗ ಈ ಜೀವರಕ್ಷಕ ನೀರನ್ನು ಪೈಪ್‌ಲೈನ್‌ಗಳ ಮೂಲಕ ಪಡೆಯಲಿವೆ , ಇದು ತನ್ನದೇ ಆದ ಎಂಜಿನಿಯರಿಂಗ್ ಸಾಧನೆಯಾಗಿದೆ. ಈ ಯೋಜನೆಯು ಈ ಪ್ರದೇಶದ ಕುಡಿಯುವ ನೀರಿನ ಬಿಕ್ಕಟ್ಟನ್ನು ಶಾಶ್ವತವಾಗಿ ಪರಿಹರಿಸುತ್ತದೆ ಎಂದು ಮಧುಗಿರಿಯ ಶಾಸಕರಾಗಿ ಅಲ್ಪಾವಧಿಗೆ ಸೇವೆ ಸಲ್ಲಿಸಿದ್ದ ಡಾ. ಪರಮೇಶ್ವರ ತಿಳಿಸಿದ್ದರು. ಮುಖ್ಯಮಂತ್ರಿಗಳು ಶಕ್ತಿ ಸ್ಥಳ ಸೌರ ಉದ್ಯಾನವನವನ್ನು ಉದ್ಘಾಟಿಸಲಿದ್ದಾರೆ, ಅಂತಿಮ ಹಂತಗಳು ಕಾರ್ಯರೂಪಕ್ಕೆ ಬಂದ ನಂತರ, ವಿಶ್ವದ ಅತಿದೊಡ್ಡ ಸೌರ ವಿದ್ಯುತ್ ಸ್ಥಾವರ ಎಂಬ ಬಿರುದನ್ನು ಮರಳಿ ಪಡೆಯಲಿದೆ.

# ಧರ್ಮಸ್ಥಳ ಪ್ರಕರಣ: ಧ್ವನಿಯೆತ್ತಿದ ನಟಿ ರಮ್ಯಾ; ನ್ಯಾಯಯುತ ತನಿಖೆಗೆ ಆಗ್ರಹ

• **ಉದಯವಾಹಿನಿ, ಬೆಂಗಳೂರು**

ಧರ್ಮಸ್ಥಳ ದೂರು ಪ್ರಕರಣಕ್ಕೆ ಸಂಬಂಧಿಸಿ ನಟಿ, ಮಾಜಿ ಸಂಸದೆ ರಮ್ಯಾ ಅವರು ಧ್ವನಿ ಎತ್ತಿದ್ದು, ನ್ಯಾಯಯುತ ತನಿಖೆ ನಡೆಸಬೇಕೆಂದು ಆಗ್ರಹಿಸಿದ್ದಾರೆ.



ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದಿರುವ ಅವರು, ಧರ್ಮಸ್ಥಳದಲ್ಲಿ ಸಾಮೂಹಿಕ ಅಂತ್ಯಕ್ರಿಯೆ ಮತ್ತು ಮಹಿಳೆಯರ ನಾಪತ್ತೆ ಘಟನೆಗಳ ಬಗ್ಗೆ ತಿಳಿದು ನನಗೆ ಆಘಾತವಾಗಿದೆ.

ಧರ್ಮಸ್ಥಳ ಪೂಜಾ ಸ್ಥಳವಾಗಿದ್ದು, ಕರ್ನಾಟಕದ ಜನರು ಇದನ್ನು ಹೆಚ್ಚು ಪೂಜಿಸುತ್ತಾರೆ. ಹೀಗಾಗಿ ನ್ಯಾಯಯುತ ತನಿಖೆ ನಡೆಯುತ್ತದೆ ಎಂದು ನಾನು ಭಾವಿಸುತ್ತೇನೆ. ನಾವು ಸತ್ಯವನ್ನು ತಿಳಿದುಕೊಳ್ಳಬೇಕು ಎಂದು ಹೇಳಿದ್ದಾರೆ. ನಟ ಪ್ರಕಾಶ್ ರಾಜ್ ಅವರೂ ಕೂಡ ಪ್ರತಿಕ್ರಿಯೆ ನೀಡಿದ್ದು, ಧರ್ಮಸ್ಥಳ ಸರಣಿ ಹತ್ಯೆ ಆರೋಪ ಪ್ರಕರಣ ಸಂಬಂಧ ಎಸ್‌ಐಟಿ ರಚಿಸಿ ಮತ್ತು ಈವರೆಗೆ ದಾರಿ ತಪ್ಪಿಸಿದ ಅಧಿಕಾರಿಗಳ ಮೇಲೆ ತೀವ್ರ ಕ್ರಮ ಕೈಗೊಳ್ಳಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.

# ರೈತ ಹುತಾತ್ಮರ ದಿನಾಚರಣೆ ನಾಳೆ: ಕೋಡಿಹಳ್ಳಿ ಚಂದ್ರಶೇಖರ್


• **ಉದಯವಾಹಿನಿ, ಬೆಂಗಳೂರು**

ರೈತ ಹುತಾತ್ಮ ದಿನಾಚರಣೆಯ ಅಂಗವಾಗಿ ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆಯಿಂದ ಇದೇ 21ರಂದು ಹುಬ್ಬಳ್ಳಿಯ ಕಿತ್ತೂರು ರಾಣಿ ಚನ್ನಮ್ಮ ವೃತ್ತದಿಂದ ಧಾರವಾಡ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ಆಯೋಜಿಸಲಾಗಿದೆ' ಎಂದು ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತ ಹುತಾತ್ಮ ದಿನದ ಪ್ರಯುಕ್ತ, ನವಲಗುಂದ, ಚಿಕ್ಕನರಗುಂದ ಹಾಗೂ ಅಳಗವಾಡಿಯಲ್ಲಿರುವ ಹುತಾತ್ಮ ರೈತರ ವೀರಗಲ್ಲುಗಳಿಗೆ ಗೌರವ ಸಲ್ಲಿಸಲಾಗುವುದು.

ಮಹದಾಯಿ ವಿಚಾರದಲ್ಲಿ ಎರಡು ರಾಷ್ಟ್ರೀಯ ಪಕ್ಷಗಳು ರಾಜಕೀಯ ಮಾಡುತ್ತಿದ್ದು, ಇದನ್ನು ಖಂಡಿಸಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ' ಎಂದು ಹೇಳಿದರು.

# ಪ್ರೀತಿಸುವಂತೆ ಮಹಿಳೆಗೆ ಕಿರುಕುಳ: ಮಾತುಕತೆಗೆ ಕರೆದವರಿಗೆ ಹೀಗಾ ಮಾಡೋದು?

• **ಉದಯವಾಹಿನಿ, ಬೆಂಗಳೂರು**



ಶ್ರೀ ಮಾತುಕತೆಗೆಂದು ಬಂದವನು ಕೊಲೆ ಮಾಡಲು ಯತ್ನಿಸಿರುವ ಘಟನೆ ಬೆಂಗಳೂರಿನ ಹೆಚ್‌ಎಎಲ್‌ನಲ್ಲಿ ನಡೆದಿದೆ. ಜುಲೈ 17ರಂದು ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಸೆಲ್ವ ಕಾರ್ತಿಕ್ ಕೊಲೆ ಮಾಡಲು ಯತ್ನಿಸಿದ ಆರೋಪಿ. ತಮಿಳುನಾಡು ಮೂಲದ ಆರೋಪಿ ಸೆಲ್ವ ಕಾರ್ತಿಕ್‌ಗೆ ಕರ್ನಾಟಕದ ಓರ್ವ ವಿವಾಹಿತ ಮಹಿಳೆ ಇನ್‌ಸ್ಟಾಗ್ರಾಂ ಮೂಲಕ ಪರಿಚಯವಾಗಿದ್ದಾಳೆ.

ಆರೋಪಿ ಸೆಲ್ವ ಕಾರ್ತಿಕ್ ಇನ್‌ಸ್ಟಾಗ್ರಾಂನಲ್ಲೇ ಮಹಿಳೆಗೆ ಮೆಸೇಜ್ ಮಾಡಿ ಪ್ರೀತಿಸು ಅಂತ ಪೀಡಿಸುತ್ತಿದ್ದನು.

ಈ ವಿಚಾರವನ್ನು ಮಹಿಳೆ ಗಂಡನಿಗೆ ಹೇಳದೆ ತನ್ನ ತಂದೆಗೆ ತಿಳಿಸಿದ್ದಾಳೆ. ಆಗ, ಮಹಿಳೆಯ ತಂದೆ ಮಾತುಕತೆಗೆಂದು ಹೆಚ್‌ಎಎಲ್‌ಗೆ ಕಾರ್ತಿಕ್‌ನನ್ನು ಕರೆಸಿಕೊಂಡಿದ್ದಾರೆ.

ಹೆಚ್‌ಎಲ್‌ಗೆ ಬಂದ್ ಕಾರ್ತಿಕ್‌ನನ್ನು ಮಹಿಳೆಯ ತಮ್ಮ ಪ್ರಶಾಂತ್‌ನು ತನ್ನ ಬೈಕ್‌ನಲ್ಲಿ ಹಿಂದೆ ಕೂರಿಸಿಕೊಂಡು ಹೋಗುತ್ತಿದ್ದನು. ಈ ವೇಳೆ, ಆರೋಪಿ ಕಾರ್ತಿಕ್‌ನು ಹಿಂದಿನಿಂದ ಪ್ರಶಾಂತ್‌ನ ಕತ್ತುಕೊಯ್ದು ಕೊಲೆ ಮಾಡಲು ಯತ್ನಿಸಿದ್ದಾನೆ.

ಗಾಯಾಳು ಪ್ರಶಾಂತ್‌ನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಪಿ ಸೆಲ್ವ ಕಾರ್ತಿಕ್‌ನನ್ನು ಹೆಚ್‌ಎಎಲ್ ಪೊಲೀಸರು ಬಂಧಿಸಿದ್ದಾರೆ.

**ಹನಿಟ್ರ್ಯಾಪ್ ಆರೋಪಿಗಳ ಬಂಧನ:** ಹನಿಟ್ರ್ಯಾಪ್ ಮಾಡಿ ತಲೆಮರೆಸಿಕೊಂಡಿದ್ದ ಇಬ್ಬರು ಆರೋಪಿಗಳನ್ನು ಪಿರಿಯಾಪಟ್ಟಣ ತಾಲ್ಲೂಕಿನ ಬೈಲಕುಪ್ಪೆ ಠಾಣೆ ಪೊಲೀಸರು ಬಂಧಿಸಿದ್ದಾರೆ.ಆರೋಪಿಗಳಾದ ಕವನ ಸೈಫ್‌ರನ್ನು ಪೊಲೀಸರು ಕೇರಳದ ಕಣ್ಣೂರಿನ ಲಾಡ್ಜ್‌ನಲ್ಲಿ ಬಂಧಿಸಿದ್ದಾರೆ. ಆರೋಪಿಗಳು ಕಂಪಲಾಪುರದ ಬಟ್ಟೆ ಅಂಗಡಿ ಮಾಲೀಕ ದಿನೇಶ್ ಅವರನ್ನು ತಮ್ಮ ಹನಿಟ್ರ್ಯಾಪ್ ಜಾಲಕ್ಕೆ ಬೀಳಿಸಿಕೊಂಡು 10 ಲಕ್ಷ ರೂಪಾಯಿಗೆ ಬೇಡಿಕೆ ಇಟ್ಟಿದ್ದರು. ಇದೇ ಪ್ರಕರಣದಲ್ಲಿ ಹುಣಸೂರು ಪೊಲೀಸ್ ಪೇದೆ ಸಹ ಶಿವಣ್ಣ ಭಾಗಿಯಾಗಿದ್ದನು. ಪ್ರಕರಣ ಸಂಬಂಧ ಬೈಲಕುಪ್ಪೆ ಠಾಣೆ ಪೊಲೀಸರು ಈಗಾಗಲೆ ಪೊಲೀಸ್ ಪೇದೆ ಶಿವಣ್ಣ, ಆನಂದ್, ಮೂರ್ತಿಯನ್ನು ಬಂಧಿಸಿದ್ದಾರೆ.

ಇದೀಗ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಪೊಲೀಸ್ ಪೇದೆ ಶಿವಣ್ಣ ಸುಂದರ ಯುವತಿಯನ್ನು ಮುಂದೆ ಬಿಟ್ಟು ಶ್ರೀಮಂತ ವ್ಯಕ್ತಿಗಳನ್ನು ತನ್ನ ಬಲೆಯಲ್ಲಿ ಬೀಳಿಸಿಕೊಂಡು ಹಣ ವಸೂಲಿ ಮಾಡುತ್ತಿದ್ದನು.

ಪ್ರಕರಣದಲ್ಲಿ ಎ1 ಮೂರ್ತಿ, ಎ2 ಪೊಲೀಸ್ ಪೇದೆ ಶಿವಣ್ಣ ಹಾಗೂ ಕವನ, ಸೈಫರ್. ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಗಳ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಪಿರಿಯಾಪಟ್ಟಣ ತಾಲ್ಲೂಕಿನ ಕಂಪಲಾಪುರ ಗ್ರಾಮದ ನಿವಾಸಿಯಾದ ದಿನೇಶ್ ಕುಮಾರ್ ವಂಚನೆಗೆ ಒಳಗಾದವರು.

# ಉಚಿತ ಆರೋಗ್ಯ ತಪಾಸಣೆ ಶಿಬಿರ ಸಚಿವ ರಾಮಲಿಂಗಾರೆಡ್ಡಿರವರು ಚಾಲನೆ

## ಪ್ರತಿಯೊಬ್ಬರು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ, ಆರೋಗ್ಯವಂತರಾಗಿ ಇರಿ- ಸಚಿವ ರಾಮಲಿಂಗಾರೆಡ್ಡಿ

• **ಉದಯವಾಹಿನಿ, ಬೆಂಗಳೂರು**

ಮಹಾಲಕ್ಷ್ಮಿಲೇಔಟ್ ವಿಧಾನಸಭಾ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಕುರುಬರಹಳ್ಳಿ ಬಯಲು ರಂಗ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಮತ್ತು ಕಣ್ಣಿನ ತಪಾಸಣೆ ಶಿಬಿರ, ಉಚಿತ ಔಷಧಿ ವಿತರಣೆ ಕಾರ್ಯಕ್ರಮ. ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾರೆಡ್ಡಿರವರು, ಕಾಂಗ್ರೆಸ್ ಪಕ್ಷದ ಮುಖಂಡರು, ನಿಕಟಪೂರ್ವ ಬಿಬಿಎಂಪಿ ಸದಸ್ಯರಾದ ಎಸ್.ಕೇಶವಮೂರ್ತಿರವರು, ಮಾಜಿ ಮಹಾಪೌರರಾದ ಜೆ.ಹುಚ್ಚಪ್ಪ, ಆಡಳಿತ ಪಕ್ಷದ ಮಾಜಿ ನಾಯಕ ಎಮ್. ಶಿವರಾಜುರವರು ದೀಪ ಬೆಳಗಿಸಿ ಉದ್ಘಾಟನೆ ಮಾಡಿದರು.

ಸಚಿವ ರಾಮಲಿಂಗಾರೆಡ್ಡಿ ರವರು ಮಾತನಾಡಿ ಪ್ರತಿಯೊಬ್ಬರು ದೇಹದಲ್ಲಿ ಸಮಸ್ಯೆ ಇರಲಿ ಅಥವಾ ಇಲ್ಲದಿರಲಿ ವೈದ್ಯರ ಬಳಿ ಹೋಗಿ ತಪಾಸಣೆ ಮಾಡಿಸಿಕೊಳ್ಳಿ ವೈದ್ಯರ ಸಲಹೆ ಪಡೆದುಕೊಳ್ಳಿ ಅಗತ್ಯ ಬಿದ್ದರೆ ಚಿಕಿತ್ಸೆ ಪಡೆದುಕೊಳ್ಳಿ. ಆರೋಗ್ಯವಂತ ಸಮಾಜವಿದ್ದಾಗ ಸಮಾಜದ ಅಭಿವೃದ್ಧಿ ಸಾಧ್ಯ. ಈನಿಟ್ಟಿನಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಬಡವರಿಗೆ ಹೈಟೆಕ್ ವೈದ್ಯಕೀಯ ಸೌಲಭ್ಯಗಳು ಕಾಂಗ್ರೆಸ್ ಪಕ್ಷದ ಸರ್ಕಾರ ನೀಡುತ್ತಿದೆ. ಶಕ್ತಿ ಯೋಜನೆಯಿಂದ 500ಕೋಟಿ ಬಾರಿ ಮಹಿಳೆಯರು ಪ್ರಯಾಣಿಸಿ, ದೇಶದಲ್ಲಿಯೆ ವಿನೂತನ ದಾಖಲೆಯಾಗಿದೆ.

ಶಕ್ತಿ ಯೋಜನೆಯಿಂದ ನಾಡಿನ ಎಲ್ಲಾ ದೇವಸ್ಥಾನದಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗಿದೆ ಮತ್ತು ದೇವಸ್ಥಾನಕ್ಕೆ ಆದಾಯ ಹೆಚ್ಚಳದ ಜೊತೆಗೆ ದೇವಸ್ಥಾನದ ಸುತ್ತಮುತ್ತಲು ವ್ಯಾಪಾರ, ವಹಿವಾಟುಗಳು ಭರದಿಂದ ವ್ಯಾಪಾರ ಮಾಡಿ ಆರ್ಥಿಕವಾಗಿ ಸಧೃಡರಾಗಿದ್ದಾರೆ ಎಂದು ಹೇಳಿದರು.

**ವಿಧಾನಸಭಾ ಬ್ಲಾಕ್ ಕಾಂಗ್ರೆಸ್ ಸಮಿತಿ**




ಉದಯವಾಹಿನಿ ಚಿತ್ರ

**ಮಹಾಲಕ್ಷ್ಮಿಲೇಔಟ್ ವಿಧಾನಸಭಾ ಕ್ಷೇತ್ರದ ಜನರ ಆರೋಗ್ಯ ರಕ್ಷಣೆಗಾಗಿ ಸತತವಾಗಿ ಆರೋಗ್ಯ ತಪಾಸಣೆ ಶಿಬಿರಗಳನ್ನು ನಾನು ಮತ್ತು ಎಸ್.ಕೇಶವಮೂರ್ತಿರವರು ಆಯೋಜಿಸಿಕೊಂಡು ಬರುತ್ತಿದ್ದೇವೆ. ಜನರು ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ, ಸಮಸ್ಯೆ ಇದ್ದಲ್ಲಿ ತಜ್ಞ ವೈದ್ಯರುಗಳಿಂದ ಸಲಹೆ ಪಡೆದು ಚಿಕಿತ್ಸೆ ಪಡೆದುಕೊಳ್ಳಿ, ಪ್ರತಿದಿನ ಒಂದು ಗಂಟೆ ವಾಕಿಂಗ್, ಯೋಗ ಮತ್ತು ಧ್ಯಾನದಲ್ಲಿ ತೊಡಗಿ ಎಂದು ಹೇಳಿದರು. ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ಪುಣ್ಯ ಆಸ್ಪತ್ರೆ, ನೇತ್ರಧಾಮ ಆಸ್ಪತ್ರೆ ವೈದ್ಯರು ಸಿಬ್ಬಂದಿಗಳು ಭಾಗವಹಿಸಿದ್ದರು.**

**-ಎಮ್.ಶಿವರಾಜುರವರು**

ಶಿಬಿರದಲ್ಲಿ ಕಿವಿ,ಮೂಗು, ಗಂಟಲು ಜನರಲ್ ತಪಾಸಣೆ, ಸ್ತ್ರೀ ರೋಗ ತಪಾಸಣೆ ಮಧುಮೇಹ, ಬಿಪಿ ಮತ್ತು ಇಸಿಜಿ, ಹಿಮೋಗ್ಲೋಬಿನ್ ಪರೀಕ್ಷೆ ನೂರಾರು ಜನರಿಗೆ ತಪಾಸಣೆ ಮಾಡಲಾಯಿತು.

ಕಾಂಗ್ರೆಸ್ ಪಕ್ಷದ ಮುಖಡರಾದ ವಿ.ಎಸ್.ಆರಾಧ್ಯ, ಶಿವಕುಮಾರ್ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರುಗಳಾದ ಸುಧೀಂದ್ರ, ಪರಿಸರ ರಾಮಕೃಷ್ಣ,ಗ್ಯಾರಂಟಿ ಯೋಜನೆಗಳ ನಗರ ಉಪಾಧ್ಯಕ್ಷ ಜನಾರ್ಧನ್, ಸೇವಾದಳ ಬ್ಲಾಕ್ ಅಧ್ಯಕ್ಷರಾದ ಕೃಷ್ಣ ಬಿಸ್ಟ್ ಮತ್ತು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರುಗಳು, ಕಾರ್ಯಕರ್ತರು ಭಾಗವಹಿಸಿದ್ದರು.

**ಕಾಂಗ್ರೆಸ್ ಪಕ್ಷದ ಸರ್ಕಾರ ಬಡವರ ಪರ ಕಾಳಜಿ ಇಟ್ಟುಕೊಂಡು 5ಗ್ಯಾರಂಟಿ ಯೋಜನೆಗಳನ್ನು ನಾಡಿನ ಜನತೆಗೆ ನೀಡಿದರು, ಬಡವರ ಆರೋಗ್ಯ ಸುರಕ್ಷತೆ ಹೆಚ್ಚಿನ ಅನುದಾನ ನೀಡಿದ್ದಾರೆ, ಸರ್ಕಾರ ಜೊತೆಯಲ್ಲಿ ಬ್ಲಾಕ್ ಕಾಂಗ್ರೆಸ್ ಸಮಿತಿಯು ಸಹ ಜನರ ಆರೋಗ್ಯವಂತರಾಗಬೇಕು ಎಂದು ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿದೆ. ಮಹಾಲಕ್ಷ್ಮಿಪುರ, ಶಕ್ತಿ ಗಣಪತಿನಗರ, ಶಂಕರ ಮಠ ವಾರ್ಡ್‌ಗಳಲ್ಲಿ ಉಚಿತ ಆರೋಗ್ಯ ಶಿಬಿರಗಳನ್ನು ಆಯೋಜಿಸಿಕೊಂಡು ಬರಲಾಗುತ್ತಿದೆ. ಕಣ್ಣಿನ ತಪಾಸಣೆಯಲ್ಲಿ ದೃಷ್ಟಿದೋಷ ಇರುವವರಿಗೆ ಕನ್ನಡಕ, ಅಪರೇಷನ್ ಅವಶ್ಯಕತೆ ಇರುವವರಿಗೆ ಉಚಿತವಾಗಿ ಮಾಡಿಸಲಾಗುತ್ತಿದೆ ಎಂದು ಹೇಳಿದರು.**

**-ಎಸ್.ಕೇಶವಮೂರ್ತಿ**

# ಕಬಿನಿ ಜಲಾಶಯಕ್ಕೆ ಬಾಗಿನ ಸಮರ್ಪಣೆ, ದಿಲ್ಲಿ ಭೇಟಿ ವಿಚಾರಕ್ಕೆ ಫುಲ್ ಸ್ಟಾಪ್ ಇಟ್ಟ ಡಿಸಿಎಂ ಡಿಕೆಶಿ

• **ಉದಯವಾಹಿನಿ, ಮೈಸೂರು**

ಕಬಿನಿ ಜಲಾಶಯಕ್ಕೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ ಕೆ ಶಿವಕುಮಾರ್ ಅವರು ಬಾಗಿನ ಸಮರ್ಪಣೆ ಮಾಡಿದರು. ಸಚಿವ ಡಾ. ಹೆಚ್ ಸಿ ಮಹದೇವಪ್ಪ, ಶಾಸಕ ಅನಿಲ್ ಚಿಕ್ಕಮಾದು ಭಾಗಿಯಾದರು. ಮೈಸೂರು ಜಿಲ್ಲೆ ಹೆಚ್ ಡಿ ಕೋಟೆ ತಾಲ್ಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯಕ್ಕೆ ಬಾಗಿನ ಸಲ್ಲಿಸಲಾಯಿತು. ಬಾಗಿನ ಸಮರ್ಪಿಸಿ ನಾಡಿನ ಒಳಿತಿಗಾಗಿ ನಾಯಕರು ಪ್ರಾರ್ಥನೆ ಸಲ್ಲಿಸಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಡಿಸಿಎಂ ಡಿಕೆ ಶಿವಕುಮಾರ್, ದಿಲ್ಲಿ ಭೇಟಿ ವಿಚಾರವನ್ನು ಪ್ರಸ್ತಾಪಿಸಿದರು. ಸಿಎಂಗೆ ಹೇಳಿಯೇ ನಿನ್ನೆ ದೆಹಲಿಗೆ ಹೋಗಿದ್ದೆ. ನಾನು ನನ್ನ ವೈಯುಕ್ತಿಕ ಕೆಲಸಕ್ಕೆ ದೆಹಲಿಗೆ ಹೋಗಿದ್ದೆ. ಯಾವ ರಾಜಕೀಯಕ್ಕೂ ಹೋಗಿರಲಿಲ್ಲ.



ದೆಹಲಿಯಲ್ಲಿ ವಕೀಲರ ಜೊತೆ ಸಮಯ ನಿಗದಿಯಾಗಿತ್ತು. ಅದಕ್ಕಾಗಿ ಹೋಗಿ ಬಂದೆ. ಅದನ್ನು ಮುಗಿಸಿಕೊಂಡು ರಾತ್ರಿಯೇ ವಾಪಸ್ ಬಂದಿದ್ದೇನೆ. ಯಾವ ರಾಜಕಾರಣಕ್ಕೂ ನಾನು ದೆಹಲಿಗೆ ಹೋಗಿರಲಿಲ್ಲ. ಬಿಜೆಪಿಯವರಿಗೆ ನನ್ನ ಬಗ್ಗೆ ಪ್ರೀತಿ ಜಾಸ್ತಿ. ಮೋರ್ ಸ್ಟ್ರಾಂಗ್ ಮೋರ್ ಲವ್ ಆಲ್ಸೋ. ನಿನ್ನೆ ನನ್ನ ಬೆಂಗವಾಲು ವಾಹನ ಪಲ್ಟಿ ಆಯ್ತು. ಬಹಳ ಸೀರಿಯಸ್ ಅಪಘಾತ ಆಯ್ತು. ಚಾಮುಂಡೇಶ್ವರಿ ದೇವಿಯ ಕೃಪೆಯಿಂದ ದೊಡ್ಡ ಅನಾಹುತ ಆಗಲಿಲ್ಲ ಎಂದರು. ಇನ್ನು ಡಿಸಿಎಂ ಡಿ ಕೆ ಶಿವಕುಮಾರ್ ಮಾತು ಮುಗಿಯುವವರೆಗೂ ಸಿಎಂ ಸಿದ್ದರಾಮಯ್ಯ ಕಾದು ನಿಂತರು. ನಂತರ ಮಾತನಾಡದೇ ಹೊರಡಲು ಮುಂದಾಗಿ ಅವರೇ ಮಾತ್ನಾಡಿದ್ದಾರೆ ಸಾಕು ಎಂದರು. ಬಳಿಕ ಒಲ್ಲದ ಮನಸ್ಸಿನಿಂದಲೇ ಬಂದು ಮಾಧ್ಯಮಗಳಿಗೆ ಹೇಳಿಕೆ ಕೊಟ್ಟರು.

## ಮಿನಿ ನ್ಯೂಸ್

### ವಿದ್ಯಾರ್ಥಿಗಳ ಪುನಶ್ಚತನ ಕಾರ್ಯಕ್ರಮ

• **ಉದಯವಾಹಿನಿ, ಕನಕಪುರ**

ಕಾಲೇಜಿಗೆ ಹೊಸದಾಗಿ ದಾಖಲಾಗಿ ಬಂದ ವಿದ್ಯಾರ್ಥಿಗಳನ್ನು ಪುನಃಶ್ಚತನಗೊಳಿಸುವ ಕಾರ್ಯಕ್ರಮ ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಬಿ.ಶ್ಯಾಮಲಾ ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕಾಲೇಜು ಹಾಗೂ ಉಪನ್ಯಾಸಕರು ಶ್ರಮಿಸುತ್ತಿರುವುದಾಗಿ ತಿಳಿಸಿದರು. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿ ಪ್ರತಿಯೊಬ್ಬರಿಗೂ ಉದ್ಯೋಗ ಸಿಗುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮ ಮುಗಿದ ನಂತರ ಬಿ.ಎ, ಬಿ.ಕಾಂ, ಬಿಬಿಎ, ಬಿಸಿಎ, ಬಿಎಸ್ಸಿ ತರಗತಿ ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳನ್ನಾಗಿ ಮಾಡಿ ಹಲವು ಚಟುವಟಿಕೆ ನಡೆಸಲಾಯಿತು. ವಿದ್ಯಾರ್ಥಿಗಳ ಮುಂದಿನ ಗುರಿ, ಹವ್ಯಾಸ, ಶಿಕ್ಷಣ ನೀತಿ ಬಗ್ಗೆ ಅನಿಸಿಕೆ ಮತ್ತು ಆದರ್ಶ ವ್ಯಕ್ತಿ ಹಾಗೂ ಹಲವು ವಿಷಯಗಳ ಬಗ್ಗೆ ಅಭಿಪ್ರಾಯ ಸಂಗ್ರಹಿಸಲಾಯಿತು. ಐಕ್ಯೂಎಸಿ ಸಂಚಾಲಕಿ ಅಕ್ಷತಾ ಪರಂಜ್ಯೋತಿ ಕುಮಾರ್ ಕಾರ್ಯಕ್ರಮ ಕುರಿತು ಮಾತನಾಡಿದರು. ಕನ್ನಡ ವಿಭಾಗದ ಮುಖ್ಯಸ್ಥ ವಿಶ್ವಾರಾಧ್ಯ ಸ್ವಾಗತಿಸಿದರು. ನಿರ್ವಹಣಾ ಶಾಸ್ತ್ರ ವಿಭಾಗದ ಮುಖ್ಯಸ್ಥ ಮುಜೀಬ್ ಖಾನ್ ಕಾಲೇಜಿನ ಸಂಪೂರ್ಣ ಮಾಹಿತಿ ತಿಳಿಸಿಕೊಟ್ಟರು.

### 6 ದಿನ ಮೊಟ್ಟೆ ವಿತರಣೆಗೆ ಆದೇಶ

• **ಉದಯವಾಹಿನಿ, ಚಿಂತಾಮಣಿ**

ಜಿಲ್ಲೆಯ ಸರ್ಕಾರಿ, ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಸರ್ಕಾರದ ಆದೇಶದಂತೆ ವಾರದ ಆರು ದಿನ ಮಕ್ಕಳಿಗೆ ಮೊಟ್ಟೆ ನೀಡಬೇಕು. ಮೊಟ್ಟೆ ಸೇವಿಸದೇ ಇರುವವರಿಗೆ ಮಾತ್ರ ಬಾಳೆಹಣ್ಣು ವಿತರಣೆ ಮಾಡಬೇಕು ಎಂದು ಜಿಲ್ಲಾ ಪಂಚಾಯಿತಿ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಿದೆ. ಸರ್ಕಾರಿ ಆದೇಶ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಕೆಲವು ಶಾಲೆಗಳಲ್ಲಿ ಎಸ್‌ಡಿಎಂಸಿ ನಡವಳಿ ರೂಪಿಸಿಕೊಂಡು ತಮ್ಮಲ್ಲೇ ಬದಲಾವಣೆ ಮಾಡಿಕೊಂಡು 3 ದಿನ ಮೊಟ್ಟೆ 3 ದಿನ ಬಾಳೆಹಣ್ಣು ವಿತರಣೆ ಮಾಡುವುದು. ಇನ್ನೂ ಕೆಲವು ಶಾಲೆಗಳಲ್ಲಿ ಸೋಮವಾರ, ಮೊಟ್ಟೆ ವಿತರಣೆ ಮಾಡದಿರುವುದು ಗಮನಕ್ಕೆ ಬಂದಿದೆ. ವಾರದ 6 ದಿನ ಮೊಟ್ಟೆ ನೀಡುವ ಕುರಿತು ತಾಲ್ಲೂಕಿನ ಎಲ್ಲಾ ಶಾಲೆಗಳ ಎಸ್‌ಡಿಎಂಸಿ ಸಭೆಕರೆದು ಮಾಹಿತಿ ನೀಡಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ಅಕ್ಷರದಾಸೋಹ ಸಹಾಯಕ ನಿರ್ದೇಶಕರಿಗೆ ಆದೇಶ ನೀಡಲಾಗಿದೆ. ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳಿಗೂ ತಿಳಿಸಬೇಕು. ಎಲ್ಲಾ ಶಾಲೆಗಳ ಎಸ್‌ಡಿಎಂಸಿ ಸಭೆ ನಡೆಸಿ ಮಾಹಿತಿ ತಿಳಿಸಿರುವ ಕುರಿತು ವರದಿಯನ್ನು ಜಿಲ್ಲಾ ಶಿಕ್ಷಣಾಧಿಕಾರಿ ಅಕ್ಷರ ದಾಸೋಹ ವಿಭಾಗ ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಕಚೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

### ಮಾಲೂರು ತಾಲ್ಲೂಕಿನಲ್ಲಿ ಅಕ್ರಮ ಗಣಿಗಾರಿಕೆ; ಕ್ರಮಕ್ಕೆ ಆಗ್ರಹ

• **ಉದಯವಾಹಿನಿ, ಕೋಲಾರ**

ಮಾಲೂರು ತಾಲ್ಲೂಕಿನಲ್ಲಿ ವಿವಿಧೆಡೆ ಅಕ್ರಮವಾಗಿ ಗಣಿಗಾರಿಕೆ ನಡೆಸಿ ಕೋಟ್ಯಂತರ ಹಣ ಲೂಟಿ ಮಾಡುತ್ತಿದ್ದು, ಪರಿಸರ ಹಾಳಾಗುತ್ತಿದೆ. ಅಲ್ಲದೇ, ಸರ್ಕಾರಕ್ಕೆ ಬರಬೇಕಾಗಿದ್ದ ಹಣ ಕೈತಪ್ಪಿ ಹೋಗುತ್ತಿದೆ' ಎಂದು ಸಾಮಾಜಿಕ ಹೋರಾಟಗಾರರಾದ ಡಿ.ಮುನೇಶ್ ಹಾಗೂ ನವೀನ್ ಕುಮಾರ್ ಆರೋಪಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗಣಿ ಭೂವಿಜ್ಞಾನ ಇಲಾಖೆ ಅಧಿಕಾರಿಗಳ ಬೆಂಬಲದಿಂದ ಈ ಕೃತ್ಯ ನಡೆಯುತ್ತಿದೆ. ಹೀಗಾಗಿ, ಜಿಲ್ಲಾಧಿಕಾರಿಯು ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯದೆ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಟೇಕಲ್ ಹೋಬಳಿಯ ತಿಮ್ಮನಾಯಕನಹಳ್ಳಿ ಅಗ್ರಹಾರದಲ್ಲಿ ಕಾನೂನು ಬಾಹಿರವಾಗಿ ಬಂಡೆಯನ್ನು ಕಬಳಿಸಿ ಅಲ್ಪಸ್ವಲ್ಪ ರಾಜಧನ (ರಾಯಲ್ಟಿ) ಪಾವತಿಸಿ, ಸರ್ಕಾರಕ್ಕೆ ವಂಚನೆ ಮಾಡಲಾಗುತ್ತಿದೆ. ಅಧಿಕಾರಿಗಳು ಮಾಲೀಕರ ಜೊತೆ ಭಾಗಿಯಾಗಿದ್ದು, ಇದರಲ್ಲಿ ರೂ.50 ಕೋಟಿಗೂ ಹೆಚ್ಚು ಹಗರಣ ನಡೆದಿದೆ. ಇದೇ ರೀತಿ ತಾಲ್ಲೂಕು ವ್ಯಾಪ್ತಿಯಲ್ಲಿ 100 ಎಕರೆಗೂ ಹೆಚ್ಚು ಬಫರ್ ಜೋನ್ನಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, ಸುಮಾರು ರೂ. 3 ಸಾವಿರ ಕೋಟಿ ಹಗರಣ ನಡೆದಿದೆ' ಎಂದು ದೂರಿದರು. 'ಈಗಾಗಲೇ ಉಪಲೋಕಾಯುಕ್ತ ಬಿ.ವೀರಪ್ಪ ಸ್ಥಳ ಪರಿಶೀಲನೆ ನಡೆಸಿ ಪರಿಸರ ಉಲ್ಲಂಘನೆ ವಿರುದ್ಧ ಕ್ರಮ ಕೈಗೊಳ್ಳಲು ಕೂಡ ಸೂಚಿಸಿದ್ದಾರೆ. ಕ್ರಷರ್ ಘಟಕ ಬಂದ್ ಮಾಡಲು ನೋಟಿಸ್ ಜಾರಿ ಮಾಡಿದ್ದಾರೆ. ಕ್ರಷರ್ ಸ್ಥಗಿತಗೊಳಿಸಿ ಏರ್ ಚೆಕಿಂಗ್ ಮಾಡುತ್ತಿದ್ದು, ಸುಳ್ಳು ವರದಿ ಸಿದ್ಧಪಡಿಸಲು ಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು.ಗಣಿಗಾರಿಕೆ ವೇಳೆ ಕಾರ್ಮಿಕರು ಮೃತಪಟ್ಟರೂ ಪೊಲೀಸ್ ಇಲಾಖೆ ತನಿಖೆ ನಡೆಸದೆ ಕಾರ್ಮಿಕರ ಮೇಲೆಯೇ ಕೇಸು ದಾಖಲಿಸುತ್ತಿದೆ. ಈ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ರಮ ಜರುಗಿಸಬೇಕು' ಎಂದು ಮನವಿ ಮಾಡಿದರು.

### ಭೂಪರಿವರ್ತನೆಗೆ ಲಂಚ; ಶಿರಸ್ತೇದಾರ ಅಮಾನತು

• **ಉದಯವಾಹಿನಿ, ಕೋಲಾರ**

ಭೂಪರಿವರ್ತನೆಗಾಗಿ ಅರ್ಜಿದಾರರಿಂದ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಪ್ರಕರಣದಲ್ಲಿ ಜಿಲ್ಲಾಧಿಕಾರಿ ಕಚೇರಿಯ ಶಿರಸ್ತೇದಾರ ಡಿ.ಜಿ.ಚಂದ್ರಪ್ಪ ಅವರನ್ನು ಅಮಾನತುಗೊಳಿಸಿ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ಆದೇಶ ಹೊರಡಿಸಿದ್ದಾರೆ. ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದು, ಬಂಧಿತರಾಗಿದ್ದ ಚಂದ್ರಪ್ಪ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಭೂಪರಿವರ್ತನೆ ಮಾಡಿಕೊಡಲು ಲಂಚಕ್ಕೆ ಬೇಡಿಕೆ ಇಟ್ಟ ಬಗ್ಗೆ ಬೆಂಗಳೂರಿನ ದೊಡ್ಡ ಬಿದರಕಲ್ಲು ನಿವಾಸಿ ಬಿ.ಮಂಜುನಾಥ್ ಎಂಬುವರು ಕೋಲಾರ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಮಾಲೂರಿನ ಸರ್ವೆ ನಂ. 198, 203, 204, 205, 206ರ ಜಮೀನುಗಳಿಗೆ ಸಂಬಂಧಿಸಿದಂತೆ ಭೂಪರಿವರ್ತನೆ ಆದೇಶ, ನಕ್ಷೆ ಮತ್ತು ಕಡತದ ಇತರೆ ದಾಖಲೆಗಳನ್ನು ದೃಢೀಕರಿಸಿ ನೀಡುವಂತೆ ಸಲ್ಲಿಸಿದ್ದ ಅರ್ಜಿ ಸಂಬಂಧ ಹಣಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಅರ್ಜಿದಾರ ಆರೋಪಿಸಿದ್ದರು. ಈ ಸಂಬಂಧ ಜೂನ್ 10 ರಂದು ಲೋಕಾಯುಕ್ತ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಚಂದ್ರಪ್ಪ ಅವರನ್ನು ಬಂಧಿಸಿದ್ದರು. ಬಳಿಕ 48 ಗಂಟೆಗೂ ಮೀರಿದ ಅವಧಿ ನ್ಯಾಯಾಂಗ ಬಂಧನದಲ್ಲಿದ್ದರು.

# ಪಾವಗಡ ಅಭಿವೃದ್ಧಿಗೆ ಅನುದಾನ ನೀಡಲು ಸಿಎಂಗೆ ಒತ್ತಾಯ

• **ಉದಯವಾಹಿನಿ, ಪಾವಗಡ**

ತಾಲ್ಲೂಕಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಿ ಮುಖ್ಯಮಂತ್ರಿಗಳು ತಾಲ್ಲೂಕಿನ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ಆಮ್ ಆದ್ಮಿ ಪಕ್ಷದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರಾಮಾಂಜಿನಪ್ಪ ಒತ್ತಾಯಿಸಿದರು. ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆ ಇದೆ. ಇದರಿಂದ ಬಡ ರೋಗಿಗಳಿಗೆ ಸಮಸ್ಯೆಯಾಗುತ್ತಿದೆ.



74 ಹುದ್ದೆ ಖಾಲಿ ಇವೆ. ತಾಲ್ಲೂಕಿನ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ.

ಉನ್ನತ ಶಿಕ್ಷಣಕ್ಕೆ ತುಮಕೂರು ಬೆಂಗಳೂರು, ಇತರೆಡೆ ಹೋಗಲಾಗದೆ ಶಿಕ್ಷಣ ಮೊಟಕುಗೊಳಿಸಲಾಗುತ್ತಿದೆ. ಹೀಗಾಗಿ ತಾಲ್ಲೂಕಿನಲ್ಲಿ ಪಾಲಿಟೆಕ್ನಿಕ್, ಎಂಜನಿಯರಿಂಗ್, ನರ್ಸಿಂಗ್ ಕಾಲೇಜು ಆರಂಭಿಸಬೇಕು ಎಂದು ಒತ್ತಾಯಿಸಿದರು. ತಾಲ್ಲೂಕು ಬರಪೀಡಿತ ಪ್ರದೇಶವಾಗಿರುವುದರಿಂದ ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ವೇಗ ಹೆಚ್ಚಿಸಬೇಕು. ಎತ್ತಿನಹೊಳೆ ಯೋಜನೆಯಲ್ಲಿ ತಾಲ್ಲೂಕಿಗೆ ಆಗಿರುವ ಅನ್ಯಾಯ ಸರಿಪಡಿಸಬೇಕು ಎಂದು ಒತ್ತಾಯಿಸಿದರು. ಜಿಲ್ಲಾ ಘಟಕದ ಎಚ್ ಜಯರಾಮಯ್ಯ, ತಾಲ್ಲೂಕಿಗೆ ಮಾರುಕಟ್ಟೆ ಸೌಲಭ್ಯ ಕಲ್ಪಿಸಬೇಕು. ಸಮರ್ಪಕ ರಸ್ತೆ, ಸಾರಿಗೆ ಸಂಪರ್ಕ ಕಲ್ಪಿಸಬೇಕು. ದೊಮ್ಮತಮರಿಯಲ್ಲಿ ಪೊಲೀಸ್ ಠಾಣೆ ಆರಂಭಿಸಬೇಕು. ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಸೋಲಾರ್ ಯೋಜನೆಯಡಿ ಸೋಲಾರ್ ಪಂಪ್ ಸೆಟ್ ನೀಡಬೇಕು. ಬಾಬು ಜಗಜೀವನರಾಮ್ ಭವನ ನಿರ್ಮಾಣ ಮಾಡಿ, ಪಟ್ಟಣದ ಸಂಚಾರ ವ್ಯವಸ್ಥೆ ಸುಗಮಗೊಳಿಸಲು ಬೈಪಾಸ್ ನಿರ್ಮಿಸಬೇಕು.

# ಸಂವಿಧಾನ ಓದು ಅಧ್ಯಯನ ಶಿಬಿರ ಉದ್ಘಾಟಣೆ

## ಸಂವಿಧಾನ ಕಳೆದುಕೊಂಡರೆ ಪಂಚಾಂಗ ತಂದಿಡುತ್ತಾರೆ: ನಾಗಮೋಹನದಾಸ್ ಎಚ್ಚರಿಕೆ

• **ಉದಯವಾಹಿನಿ, ಕೋಲಾರ**

ಅಂಬೇಡ್ಕರ್ ರಚಿಸಿರುವ ಸಂವಿಧಾನ ಕಳೆದುಕೊಂಡರೆ ಪಂಚಾಂಗ ತಂದಿಡುವ ಸಾಧ್ಯತೆಗಳಿವೆ. ಆ ಪಂಚಾಂಗದಿಂದ ವರ್ಷಗಳ ಕಾಲ ಜಾತಿ ವ್ಯವಸ್ಥೆ, ಅಸಮಾನತೆ, ದಬ್ಬಾಳಿಕೆ ಶೋಷಣೆ, ಹಿಂಸೆ ಅನುಭವಿಸಲಾಗಿದೆ.

ಅದನ್ನು ಕೊನೆಗಾಣಿಸಲು ಹಿರಿಯರು ಸಂವಿಧಾನ ತಂದುಕೊಟ್ಟಿದ್ದಾರೆ. ಅದಕ್ಕೆ ಅಪಾಯ ಬಾರದಂತೆ ನೋಡಿಕೊಳ್ಳಬೇಕು ಎಂದು ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್. ಎನ್.ನಾಗಮೋಹನದಾಸ್ ಎಚ್ಚರಿಸಿದರು. ನಗರದ ಸುವರ್ಣ ಕನ್ನಡ ಭವನದಲ್ಲಿ ಸಂವಿಧಾನ ಓದು ಅಭಿಯಾನ ಕರ್ನಾಟಕ ಮತ್ತು ಜಿಲ್ಲೆಯ ಸಮಾನ ಮನಸ್ಕ ಸಂಘಟನೆಗಳು ಆಯೋಜಿಸಿದ್ದ ಜಿಲ್ಲಾ ಮಟ್ಟದ ಸಂವಿಧಾನ ಓದು ಅಧ್ಯಯನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಸಂವಿಧಾನ ಬದಲಾಯಿಸಬೇಕು. ಜಾತ್ಯತೀತ, ಸಮಾಜವಾದ ತೆಗೆಯಬೇಕು, ಸಂವಿಧಾನ ಅಪ್ರಸ್ತುತ ಎಂಬ ಕೂಗನ್ನು ಕೆಲವರು ಎಬ್ಬಿಸಿದ್ದಾರೆ. ಸಂವಿಧಾನ ಕಳೆದುಕೊಂಡರೆ ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ, ಕುವೆಂಪು ಅವರನ್ನು ಕಳೆದುಕೊಂಡಂತೆ. ಏಕೆಂದರೆ ಈ ದಾರ್ಶನಿಕರ ಸಂದೇಶ ಸಂವಿಧಾನದಲ್ಲಿ ಅಡಗಿದೆ' ಎಂದು ಪ್ರತಿಪಾದಿಸಿದರು. ಸಮಾಜದಲ್ಲಿ ಅಸಮಾನತೆ, ಅನ್ಯಾಯ, ದೌರ್ಜನ್ಯ ಇರುವವರೆಗೆ ಈ ವಿಚಾರಗಳ ಬಗ್ಗೆ ಮಾತನಾಡುತ್ತಲೇ ಇರಬೇಕಾಗುತ್ತದೆ.

ಸಂಪೂರ್ಣ ಆದರ್ಶಯುತ ಸಮಾಜ ಇರಲು ಅಸಾಧ್ಯ ಆದರೆ, ಸಮಾಜದ ಓರೆಕೋರೆ ಕಡಿಮೆ ಮಾಡಲು ಸಾಕಷ್ಟು ಅವಕಾಶಗಳನ್ನು ಸಂವಿಧಾನ, ಕಾನೂನು ನೀಡಿವೆ ಎಂದು ಹೇಳಿದರು.

**ಸಂವಿಧಾನ ಓದು ಕಾರ್ಯಕ್ರಮ**

ಸಮಾಜದಲ್ಲಿ ವಿಚಾರಗಳ ಸಂಬಂಧ ಹೊಂದಾಣಿಕೆ ಇರಬಹುದು. ಆದರೆ ಆಚರಣೆ, ಕಟ್ಟುಪಾಡುಗಳಲ್ಲಿ, ಸಂಪ್ರದಾಯಗಳಲ್ಲಿ ಹೊಂದಾಣಿಕೆ ಇಲ್ಲ. ಶತಮಾನಗಳಿಂದ



ಆಚರಣೆ, ಕಟ್ಟುಪಾಡುಗಳನ್ನು ಮನಸ್ಸಿನಲ್ಲಿ ಬಿತ್ತಿದ್ದಾರೆ ಎಂದು ವಿಷಾದಿಸಿದರು. ದೇಶದಲ್ಲಿ ನೂರಾರು ಜಾತಿಗಳು, ನೂರೆಂಟು ನಾಯಕರು ಇದ್ದಾರೆ. ಆದರೆ ನಾಯಕತ್ವ ಇಲ್ಲ.

ಹೀಗಾಗಿ, ಎಲ್ಲರನ್ನೂ ಪ್ರೀತಿಯಿಂದ ನಡೆಸಿಕೊಳ್ಳುವ ನಾಯಕರು ಬೇಕಾಗಿದ್ದಾರೆ. ಸಹಿಷ್ಣುತೆ ಬೆಳೆಯಬೇಕಿದೆ' ಎಂದು ನುಡಿದರು.

ರೈತ ಮುಖಂಡ ಪಿ.ಆರ್.ಸೂರ್ಯನಾರಾಯಣ, ಎಲ್ಲರನ್ನೂ ಒಳಗೊಂಡ ಸಮಾಜ ಆಗಿರಬೇಕಿತ್ತು. ಆದರೆ, ಆ ರೀತಿ ಆಗುತ್ತಿಲ್ಲ. ಸಂವಿಧಾನ ಧಿಕ್ಕರಿಸುವ ರೀತಿಯಲ್ಲಿ ಸಾಮಾಜ ಸಾಗುತ್ತಿದೆ. ಅಂತರ ಸೃಷ್ಟಿಯಾಗುತ್ತಿದೆ. ಸಂವಿಧಾನ ಅರ್ಥೈಸುವ ಇಂಥ ಕೆಲಸಗಳು ಹೆಚ್ಚು ನಡೆಯಬೇಕಿದೆ ಎಂದರು.

ಶಿಬಿರದಲ್ಲಿ ಮೊದಲ ದಿನ ಸಂವಿಧಾನದ ರಚನೆ ಮೂಲತತ್ವಗಳ ಕುರಿತು ನಾಗಮೋಹನದಾಸ್, ಸಂವಿಧಾನ, ಮಹಿಳೆ ಕುರಿತು ಶಾಂತಿ ನಾಗಲಾಪುರ, ಸಂವಿಧಾನ ಮತ್ತು ಅಸ್ಪೃಶ್ಯತೆ ನಿರ್ಮೂಲನೆ ಕುರಿತು ಅರಿವು ಶಿವಪ್ಪ ಮಾತನಾಡಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಗೋಪಾಲಗೌಡ ಸ್ವಾಗತಿಸಿದರು. ಮಂಜುಳಾ ಕೊಂಡರಾಜನಹಳ್ಳಿ ನಿರೂಪಿಸಿದರು ಮತ್ತು ತಿಪ್ಪಸಂದ್ರ

> ಜಿಲ್ಲಾಧಿಕಾರಿ ಎಂ.ಆರ್.ರವಿ ಮಾತನಾಡಿ, 'ಸಂವಿಧಾನವು ಅತ್ಯಂತ ಅರ್ಥಪೂರ್ಣ ಪುಸ್ತಕ. ಆರ್ಥಿಕ ಹಾಗೂ ಸಾಮಾಜಿಕವಾಗಿ ಅಲ್ಲದೇ ಸಾಂಸ್ಕೃತಿಕ ಜೀವನದ ಮೇಲೂ ಪರಿಣಾಮ ಬೀರುವಂಥದ್ದು. ಈ ಪುಸ್ತಕ 20 ಲಕ್ಷ ಮಂದಿಗೆ ತಲುಪಿರುವುದು ದಾಖಲೆಯೇ ಸರಿ. ವಿಪರ್ಯಾಸವೆಂದರೆ ಸಂವಿಧಾನ ಎಂದರೇನು ಎಂಬುದೇ ಇನ್ನೂ ಹಲವರಿಗೆ ಅರ್ಥವಾಗಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

> ಸಂವಿಧಾನ ಓದು ಅಭಿಯಾನದ ಸಂಚಾಲಕ ಬಿ.ರಾಜಶೇಖರಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಾಮಾಜಿಕ ನ್ಯಾಯ ಎಂದರೇನು ಎಂಬುದನ್ನು ನಾಗಮೋಹನದಾಸ್ ತಿಳಿಸಿಕೊಡುತ್ತಿದ್ದಾರೆ. ಸಂವಿಧಾನ ಓದು ಕಾರ್ಯಕ್ರಮವನ್ನು ಮುಂದಿನ ದಿನಗಳಲ್ಲಿ ಹಳ್ಳಿಹಳ್ಳಿಗೆ ಕೊಂಡೊಯ್ಯುತ್ತೇವೆ' ಎಂದು ಹೇಳಿದರು.

ಶ್ರೀನಿವಾಸ್ ವಂದಿಸಿದರು. ಜಿಲ್ಲಾ ಪಂಚಾಯಿತಿ ಸಿಇಒ ಪ್ರವೀಣ್ ಪಿ.ಬಾಗೇವಾಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ., ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಆರ್.ನಟೇಶ್, ವಕೀಲರ ಸಂಘದ ಕೆ.ಆರ್.ವೆಂಕಟೇಶ್ ಗೌಡ, ದಲಿತ ಮುಖಂಡ ಟಿ.ವಿಜಯಕುಮಾರ್, ಅರಿವು ಭಾರತದ ಅರಿವು ಶಿವಪ್ಪ, ವಕೀಲ ಸತೀಶ್, ಮುಬಾರಕ್ ಬಗ್ವಾನ್, ಗಮನ ಶಾಂತಮ್ಮ, ವಿವಿಧೆಡೆಯಿಂದ ಬಂದಿದ್ದ ಪ್ರತಿನಿಧಿಗಳು, ವಿದ್ಯಾರ್ಥಿಗಳು ಇದ್ದರು.

# ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಕಿವಿಮಾತು

• **ಉದಯವಾಹಿನಿ, ಬಿಡದಿ**

ವಿದ್ಯಾರ್ಥಿಗಳು ಪ್ರೌಢ ಶಾಲಾ ಹಂತದಲ್ಲಿಯೇ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ಮೂಲಕ ಶೈಕ್ಷಣಿಕ ಜೀವನದಲ್ಲಿ ಯಶಸ್ಸು ಸಾಧಿಸಬೇಕೆಂದು ಮಾಜಿ ಶಾಸಕ ಜ್ಞಾನವಿಕಾಸ್ ವಿದ್ಯಾ ಸಂಘದ ಅಧ್ಯಕ್ಷ ಸಿ.ಎಂ. ಲಿಂಗಪ್ಪ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಬಿಡದಿ ಹೋಬಳಿ ಜ್ಞಾನ ವಿಕಾಸ್ ವಿದ್ಯಾ ಸಂಘದ ಆಶ್ರಯದಲ್ಲಿ ನಡೆದ ಬಸವೇಶ್ವರ ಸ್ವಾಮಿ ಗ್ರಾಮಾಂತರ ಪ್ರೌಢ ಶಾಲೆ ಎನ್‌ಎಂಎಂಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಆರು ಮಂದಿ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದರು.

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ವತಿಯಿಂದ ನಡೆಯುವ ಬಡತನ ರೇಖೆಯಲ್ಲಿರುವ ಪ್ರತಿಭಾವಂತ 8ನೇ ತರಗತಿ ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ ಆರ್ಥಿಕ ನೆರವು ನೀಡುವ ಎನ್‌ಎಂಎಂಎಸ್ ನ್ಯಾಷನಲ್ ಮೀನ್ಸ್ ಕಮ್ ಮೆರಿಟ್ ಸ್ಕಾಲರ್‌ಶಿಪ್ ಸ್ಕಿಮ್ ಪರೀಕ್ಷೆಗೆ 2024-25ನೇ ಸಾಲಿಗೆ ತಾಲ್ಲೂಕಿನ ಎಲ್ಲಾ



ಪ್ರೌಢಶಾಲೆ ಹಾಗೂ ಉನ್ನತೀಕರಿಸಿದ ಪ್ರಾಥಮಿಕ ಶಾಲೆಗಳಿಂದ 8ನೇ ತರಗತಿಗೆ 17 ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಆಯ್ಕೆಯಾಗಿದ್ದರು.

ಇದರಲ್ಲಿ ಬಸವೇಶ್ವರಸ್ವಾಮಿ ಗ್ರಾಮಾಂತರ ಪ್ರೌಢ ಶಾಲೆಯೊಂದರಲ್ಲೇ ಆರು ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದು ಹೆಮ್ಮೆ ವಿಚಾರ ಎಂದು ತಿಳಿಸಿದರು. ಪರೀಕ್ಷೆಯಲ್ಲಿ ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೆ 9ನೇ ತರಗತಿಯಿಂದ ದ್ವಿತೀಯ ಪಿಯುವರೆಗೆ 4 ವರ್ಷಗಳ ಅವಧಿಯಲ್ಲಿ ವಾರ್ಷಿಕ ?12,000 ನೇರವಾಗಿ ವಿದ್ಯಾರ್ಥಿಗಳಿಗೆ ಖಾತೆಗೆ ಜಮೆಯಾಗಲಿದೆ ಎಂದು ತಿಳಿಸಿದರು.

# ಬಿಸಿಯೂಟ ತಯಾರಕರ ವೇತನ ಹೆಚ್ಚಳಕ್ಕೆ ಆಗ್ರಹ

• **ಉದಯವಾಹಿನಿ, ರಾಮನಗರ**

ಬಿಸಿಯೂಟ ತಯಾರಕರ ವೇತನ ಹೆಚ್ಚಳ ಸೇರಿ ವಿವಿಧ ಬೇಡಿಕೆ ಈಡೇರಿಕೆಗಾಗಿ ಒತ್ತಾಯಿಸಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಒಕ್ಕೂಟದ ನೌಕರರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಈ ವೇಳೆ ಸಂಘಟನೆ ಜಿಲ್ಲಾಧ್ಯಕ್ಷೆ ನಿರ್ಮಲಾ ಮಾತನಾಡಿ, ಈ ವರ್ಷ ರಾಜ್ಯದಾದ್ಯಂತ 60ವರ್ಷ ದಾಟಿ ಕೆಲಸದಿಂದ ಬಿಡುಗಡೆಯಾದ ಎಲ್ಲಾ ಬಿಸಿಯೂಟ ತಯಾರಕರಿಗೆ ರೂ.1.5ಲಕ್ಷ ಇಡಗಂಟು ಹಣ ನೀಡಬೇಕು.ರೂ.2ಲಕ್ಷ ಅಪಘಾತ ವಿಮೆ ಜಾರಿಗೆ ತರಬೇಕು. ಕೆಲಸ ಸಂದರ್ಭದಲ್ಲಿ ಆಗುವ ಅಪಘಾತ ಪರಿಹಾರ ಹಣ ಪಡೆಯಲು ಇಲಾಖೆ ಕಡ್ಡಾಯಗೊಳಿಸಿರುವ ಪೊಲೀಸ್ ಠಾಣೆ ಎಫ್‌ಐಆರ್ ರದ್ದುಗೊಳಿಸಿ ಪರಿಹಾರ ಪಡೆಯಲು ಸುಲಭಗೊಳಿಸುವಂತೆ ಘೋಷಿಸಬೇಕು ಎಂದು ಆಗ್ರಹಿಸಿದರು.

ದಸರಾ ರಜೆ, ಬೇಸಿಗೆ ರಜೆ ಸೇರಿದಂತೆ ಒಟ್ಟು



12 ತಿಂಗಳ ವೇತನ ನೀಡಬೇಕು. ನಿಯಮದಂತೆ ಪ್ರತಿ ತಿಂಗಳ 5ರೊಳಗೆ ವೇತನ ನೀಡಬೇಕು. ಅಕಾಲಿಕ ಮರಣಕ್ಕೆ ತುತ್ತಾದ ಬಿಸಿಯೂಟ ಕಾರ್ಮಿಕ ಹೆಣ್ಣು ಮಕ್ಕಳಿಗೆ ಕೂಡಲೇ ಸೇವಾ ಭದ್ರತೆ ಜಾರಿಗೆ ತರಬೇಕು. ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲ್ಲಿನ ಬಿಸಿಯೂಟ ಯೋಜನೆಯು ಖಾಸಗೀಕರಣ ಮಾಡದೆ ಸರ್ಕಾರದ ವ್ಯಾಪ್ತಿಯಲ್ಲಿಯೇ ಹೊಂದಿರಬೇಕು. ಸರ್ಕಾರಿ ಶಾಲೆಗಳಲ್ಲಿ ಮೊಟ್ಟೆ ಬಿಡಿಸಲು ಕೇವಲ ರೂ.30.ಪೈಸೆ ನೀಡುತ್ತಿದ್ದು, ಇದನ್ನು ಸಂಭಾವನೆಗೆ ಸೇರ್ಪಡೆಗೊಳಿಸಬೇಕು

> ರಾಜ್ಯದಲ್ಲಿ ಕಳೆದ 20 ವರ್ಷಗಳಿಂದ ಅಡುಗೆ ತಯಾರಕರಾಗಿ 1.20 ಲಕ್ಷ ಮಂದಿ ದುಡಿಯುತ್ತಿದ್ದಾರೆ. ಹೀಗಾಗಿ ಅಡುಗೆ ತಯಾರಕರಿಗೆ ಮಾಸಿಕ ರೂ.600 ಮಾತ್ರ ನೀಡಲಾಗುತ್ತಿದೆ. ಈ ಸಂಭಾವನೆಯಲ್ಲಿ ಬಿಸಿಯೂಟ ತಯಾರಕರು ಇಂದಿನ ಬೆಲೆ ಏರಿಕೆ ದಿನದಲ್ಲಿ ಜೀವನ ನಡೆಸಲು ಕಷ್ಟ ಸಾಧ್ಯವಾಗಲಿದೆ ಎಂದು ತಿಳಿಸಿದರು.

ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆ ಮುಖಂಡರಾದ ರೋಸ್ ಮೇರಿ ಶಂಭುಗೌಡ, ಶಶಿಕಲಾ, ಅನಸೂಯಮ್ಮ, ಮಂಗಳ, ಸುನೀತಾ, ಭಾರತಿ, ದೇವಮ್ಮ, ಸಿದ್ದರಾಜು, ಸಾಕಮ್ಮ, ಶಾಂತಮ್ಮ, ಶರ್ಮಿಳಾ, ಲಲಿತಾ, ರತ್ನಮ್ಮ ಮತ್ತಿತರರು ಇದ್ದರು.

# ಚಾಕವೇಲು ಗ್ರಾಮ ಪಂಚಾಯಿತಿ ಕೇಂದ್ರದಲ್ಲಿ ರೈತರು ಆಗ್ರಹ

• **ಉದಯವಾಹಿನಿ, ಚೇಳೂರು**

ಬೆಳೆಗಳಿಗೆ ಅವಶ್ಯಕವಾದ ಯೂರಿಯಾ ಗೊಬ್ಬರಗ ಸರಬರಾಜು ಮಾಡಬೇಕು ಎಂದು ತಾಲ್ಲೂಕಿನ ಚಾಕವೇಲು ಗ್ರಾಮ ಪಂಚಾಯಿತಿ ಕೇಂದ್ರದಲ್ಲಿ ರೈತರು ಆಗ್ರಹಿಸಿದರು. ಚಾಕವೇಲು ಗ್ರಾಮದಲ್ಲಿ ಬೆಳಿಗ್ಗೆ ಯೂರಿಯಾ ಗೊಬ್ಬರಕ್ಕಾಗಿ ಅಂಗಡಿಯ ಮುಂದೆ ರೈತರು ಸಾಲುಗಟ್ಟಿ ನಿಂತರು. ಆದರೆ ಗೊಬ್ಬರದ ಕೊರತೆ ಎದುರಾಗಿದೆ. ಸುಮಾರು ದಿನಗಳಿಂದ ಯೂರಿಯೂ ಇಲ್ಲ. ರಾಗಿ, ಶೇಂಗಾ, ಮುಸುಕಿನ ಜೋಳ ಮೊದಲಾದ ಬೆಳೆಗಳಿಗೆ ಬಿತ್ತನೆ ಮಾಡಲು ಯೂರಿಯಾ ಕೊರತೆ ಆಗಿದೆ ಎಂದು ಮರವಪಲ್ಲಿ ರೈತ ಎಂ.ಇ. ಮಂಜುನಾಥರೆಡ್ಡಿ ತಿಳಿಸಿದರು.

ಚಾಕವೇಲು, ಪುಲಗಲ್ ಸೋಮನಾಥಪುರ, ನಾರೇಮದ್ದೇಪಲ್ಲಿ, ಗ್ರಾಮಗಳಲ್ಲಿ ಯೂರಿಯಾ ಕೊರತೆ



ಹೆಚ್ಚಾಗಿದೆ. ಕೃಷಿ ಅಧಿಕಾರಿಗಳು ಗ್ರಾಮೀಣ ಭಾಗಗಳಿಗೆ ಭೇಟಿ ನೀಡಬೇಕು. ಚಾಕವೇಲು ಗ್ರಾಮದಲ್ಲಿರುವ ರಸ ಗೊಬ್ಬರಗಳ ಅಂಗಡಿಗಳಲ್ಲಿಯೂ ಕೊರತೆಯಾಗಿದೆ. ಯೂರಿಯಾ ಸರಬರಾಜು ಮಾಡಬೇಕು ಎಂದು ರೈತರು ಮನವಿ ಮಾಡಿದರು. ಚಾಕವೇಲು ಗ್ರಾಮದಲ್ಲಿ ಯೂರಿಯ ಕೊರತೆ ಇದೆ. ಹೆಚ್ಚಾಗಿ ಸರಬರಾಜು ಮಾಡಬೇಕಾಗಿದೆ. ರೈತರು ಬೆಳೆಗಳನ್ನ ನಂಬಿ ಜೀವನ ಮಾಡುತ್ತಿದ್ದಾರೆ ರಸ ಗೊಬ್ಬರಗಳು ಇಲ್ಲ ಎಂದರೆ ಹೇಗೆ? ಇದೇ ರೀತಿಯಲ್ಲಿ

> ಈ ವರ್ಷ ಯೂರಿಯಾ ಕೊರತೆ ಇದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಈಗಾಗಲೇ ಚೇಳೂರುಗೆ 800 ಮೂಟೆ ಯೂರಿಯಾ ಬಂದಿತ್ತು. ಅದು ಖಾಲಿ ಆಗಿದೆ. 30 ಟನ್ ಯೂರಿಯಾ ಬರುತ್ತದೆ. ಎಲ್ಲಾ ಕಡೆ ಸರಬರಾಜು ಮಾಡಿಸುತ್ತೇವೆ. ಯೂರಿಯಾ ಬದಲು ನ್ಯಾನೋ ಯೂರಿಯಾ ಬೆಳೆಗಳಿಗೆ ಬಳಸಬಹುದು ಎಂದು ಬಾಗೇಪಲ್ಲಿ ಸಹಾಯಕ ಕೃಷಿ ನಿರ್ದೇಶಕ ಶ್ರೀನಿವಾಸ್ ತಿಳಿಸಿದ್ದಾರೆ.

ಆದರೆ ಜಿಲ್ಲಾ ಜಂಟಿ ಕೃಷಿ ಅಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತೇವೆ ಎಂದು ಎಂ.ಇ.ಮಂಜುನಾಥರೆಡ್ಡಿ ಎಚ್ಚರಿಸಿದರು.

# ತನಿಖೆಗೆ ಕಮ್ಯುನಿಸ್ಟ್ ಪಕ್ಷ ಆಗ್ರಹ

• **ಉದಯವಾಹಿನಿ, ತುಮಕೂರು**

ಧರ್ಮಸ್ಥಳದ ಸುತ್ತಮುತ್ತಲಿನ ಪ್ರದೇಶದಲ್ಲಿ ಕಳೆದ ಕೆಲ ದಶಕಗಳಲ್ಲಿ ನಡೆದ ಅಸಹಜ ಸಾವುಗಳ ಬಗ್ಗೆ ಮರು ತನಿಖೆ ನಡೆಸಬೇಕು ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಎಂ) ಒತ್ತಾಯಿಸಿದೆ. ಧರ್ಮಸ್ಥಳ ದೇಗುಲದಲ್ಲಿ ಸ್ವಚ್ಛತಾ ಕಾರ್ಯ ಮಾಡಿಕೊಂಡಿದ್ದ ವ್ಯಕ್ತಿ ನೂರಾರು ಅಪರಿಚಿತ ಶವ ಹೂತಿದ್ದೇನೆ ಎಂದು ಹೇಳುತ್ತಿದ್ದಾರೆ. ಪೊಲೀಸರು, ನ್ಯಾಯಾಲಯದ ಮುಂದೆ ಹೇಳಿಕೆ ನೀಡಿದ ನಂತರವೂ ಸರ್ಕಾರ ಕ್ಷಿಪ್ರಗತಿಯಲ್ಲಿ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ.ಉಮೇಶ್, ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹೂತಿರುವ ಕಳೇಬರ ಹೊರ ತೆಗೆಯುವುದಾಗಿ ದೂರುದಾರ ಹೇಳಿದ್ದಾರೆ. ಈ ಬಗ್ಗೆ ಪೋಲೀಸರು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಪೊಲೀಸರು ಸಮರ್ಪಕ ತನಿಖೆಗೆ ಆಸಕ್ತಿ ತೋರದೆ, ದೂರುದಾರರ ಮಂಪರು ಪರೀಕ್ಷೆ ಮಾಡಲು ಅನುಮತಿ ಕೇಳಿರುವುದು ಆಶ್ಚರ್ಯ ಉಂಟು ಮಾಡಿದೆ. ಇದು ಯಾರನ್ನೋ ರಕ್ಷಿಸಲು ನಡೆಯುತ್ತಿರುವ ಪ್ರಯತ್ನದ ಭಾಗ ಎಂಬುವುದನ್ನು ದೃಢ ಪಡಿಸುತ್ತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.


# ಬತ್ತಿದ ಅಂತರ್ಜಲ: ನೀರಿಗೆ ಹಾಹಾಕಾರ ಪಿ.ಎಸ್.ರಾಜೇಶ್

## ಬಾಗೇಪಲ್ಲಿ ತಾಲ್ಲೂಕಿನಲ್ಲಿ ರೆಡ್ಡಿಕೆರೆಯಲ್ಲಿ ಕಳೆ, ಮುಳ್ಳಿನ ಗಿಡಗಂಟಿಗಳು ಬೆಳೆದಿರುವುದು

• **ಉದಯವಾಹಿನಿ, ಬಾಗೇಪಲ್ಲಿ**

ಯಾವುದೇ ನದಿ, ನಾಲೆ ಇಲ್ಲದ ಬಯಲುಸೀಮೆ ತಾಲ್ಲೂಕಿನಲ್ಲಿ ಕೆರೆಗಳೇ ಜಲಮೂಲಗಳಾಗಿವೆ. ಕೆರಗಳ ಅಭಿವೃದ್ಧಿ ಮತ್ತು ನೀರನ್ನು ಹಿಡಿದಿಟ್ಟುಕೊಳ್ಳುವ ಯೋಜನೆಗಳನ್ನು ರೂಪಿಸಲು ಸರ್ಕಾರದ ಮತ್ತು ಜನಪ್ರತಿನಿಧಿಗಳು ಮುಂದಾಗದ ಕಾರಣ ತಾಲ್ಲೂಕಿನಲ್ಲಿ ಅಂತರ್ಜಲ ಮತ್ತಷ್ಟು ಕುಸಿತವಾಗಿದೆ.

ಪರಗೋಡು ಚಿತ್ರಾವತಿ ಬಿಳ್ಳೂರಿನ ವಂಡಮಾನ್ ಬ್ಯಾರೇಜುಗಳಿವೆ. ಪಟ್ಟಣದ ಮೂಲಕ ಚಿತ್ರಾವತಿ ಬ್ಯಾರೇಜ್ ನೀರು ಆಂಧ್ರಪ್ರದೇಶದ ಬುಕ್ಕಪಟ್ಟಣಂ ಕೆರೆಗೆ ಹರಿಯುತ್ತದೆ. ಬಿಳ್ಳೂರಿನ ವಂಡಮಾನ್ ಬ್ಯಾರೇಜ್‌ನಿಂದ ಆಂಧ್ರಪ್ರದೇಶದ ಕಡೆಗೆ ಹರಿಯಲಿದೆ. ಈ ಎರಡು ಬ್ಯಾರೇಜುಗಳಿಂದ ನೀರು ಹರಿಯುವ ಇಕ್ಕೆಲಗಳಲ್ಲಿ ಸಣ್ಣ ಕಾಲುವೆಗಳು, ಚೆಕ್ ಡ್ಯಾಂಗಳು, ಡೈಕ್‌ಗಳನ್ನು ನಿರ್ಮಿಸಿದ್ದರೆ, ಸಾಕಷ್ಟು ನೀರನ್ನು ಸಂಗ್ರಹಿಸಬಹುದಿತ್ತು. ಆದರೆ, ಈ ಕೆಲಸ ಆಗಿಲ್ಲ. ಇದರಿಂದಾಗಿ ಕೆರೆ, ಕುಂಟೆ, ಕಾಲುವೆಗಳು, ಸಣ್ಣ ಕಾಲುವೆಗಳಲ್ಲಿ ನೀರಿನ ಸಂಗ್ರಹಣಾ ಸಾಮರ್ಥ್ಯವೇ ಇಲ್ಲವಾಗಿದ್ದು. ಅಂತರ್ಜಲದ ಮಟ್ಟ ಕುಸಿತ ಕಂಡಿದೆ. ಮಳೆ ಹಾಗೂ ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದ ಆಗುವ ಜಡಿ ಮಳೆಯೇ ಕೆರೆ, ಕಾಲುವೆಗಳು, ರಾಜಕಾಲುವೆಗಳ ನೀರಿನ ಮೂಲವಾಗಿದೆ. ತಾಲ್ಲೂಕಿನಲ್ಲಿ 400ಕ್ಕೂ ಹೆಚ್ಚು ಕೆರೆಗಳಿವೆ. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ 360 ಕೆರೆ, ಸಣ್ಣ ನೀರಾವರಿ



**ಸರ್ಕಾರ ಅನುದಾನ ಬಿಡುಗಡೆ**

ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವ್ಯಾಪ್ತಿಯಲ್ಲಿ 31 ಕೆರೆಗಳ ಪೈಕಿ ಕಸಬಾ-9, ಪಾತಪಾಳ್ಯ-9, ಗೂಳೂರು 6 ಹಾಗೂ ಚೇಳೂರು 5 ಕೆರೆಗಳಿವೆ. ತಾಲ್ಲೂಕಿನ ಬಹುತೇಕ ಕೆರೆಗಳಲ್ಲಿ ಹೂಳು ತುಂಬಿಕೊಂಡಿದೆ. ಕಳೆ, ಮುಳ್ಳುಗಳ ಗಿಡಗಂಟಿಗಳು ಬೆಳೆದಿವೆ.

ತುಂಡು ಗುತ್ತಿಗೆ ಕಾಮಗಾರಿಗೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಾರೆ. ಆದರೆ, ಕೃಷಿ ಮತ್ತು ಕುಡಿಯುವ ನೀರಿನ ಯೋಜನೆಗಳಿಗೆ ಮಾತ್ರ ಅನುದಾನವೇ ಬಿಡುಗಡೆ ಮಾಡಲ್ಲ. ಇದರಿಂದ ಕೆರೆಗಳು ಈ ದುಃಸ್ಥಿತಿಗೆ ತಲುಪಿವೆ ಎನ್ನುತ್ತಾರೆ ಗ್ರಾಮಸ್ಥರು.

**ಕ್ರಿಕೆಟ್ ವಾಲಿಬಾಲ್ ಮೈದಾನವಾದ ಕೆರೆಗಳು!**

ಅಂತರ್ಜಲ ಮಟ್ಟ ಮತ್ತು ನೀರಿನ ಸಾಮರ್ಥ್ಯ ಹೆಚ್ಚಿಸಲು 360 ವರ್ಷ ಆಳ್ವಿಕೆ ಮಾಡಿದ ಪಾಳೆಗಾರರು ಗುಮ್ಮನಾಯಕನಪಾಳ್ಯ ತುಂಗೇ ದಿನ್ನೆ ಸೇರಿ ಅನೇಕ ಕೆರೆಗಳನ್ನು ನಿರ್ಮಿಸಿದ್ದರು. ಕೆರೆಗಳಿಂದ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗಿತ್ತು. ರಾಜಮಹಾರಾಜರು ಪೂರ್ವಿಕರು ನಿರ್ಮಿಸಿದ ಕೆರೆಗಳಲ್ಲಿ ಮಣ್ಣನ್ನು ಅಕ್ರಮವಾಗಿ ತೆಗೆಯಲಾಗುತ್ತಿದೆ. ಕೆರೆಯಲ್ಲಿ ಬೃಹತ್ ಗುಂಡಿಗಳು ಬಿದ್ದಿವೆ. ಕೆರೆಯಲ್ಲಿ ನೀರು ಇಲ್ಲದೆ ಕುಡಿಯುವ ನೀರಿಗೆ ಕೃಷಿಗೆ ನೀರು ಸಿಗುತ್ತಿಲ್ಲ. ಕೆರೆ ಪಾತ್ರಗಳು ಇದೀಗ ಅಕ್ಷರಶಃ ಕ್ರಿಕೆಟ್ ವಾಲಿಬಾಲ್ ಆಟಗಳ ಮೈದಾನಗಳು ಆಗಿವೆ. ಕೆರೆಗಳ ಮಣ್ಣನ್ನು ಅಕ್ರಮವಾಗಿ ಸಾಗಿಸಿ ಇಟ್ಟಿಗೆ ಗೂಡುಗಳನ್ನು ನಿರ್ಮಿಸಲಾಗುತ್ತಿದೆ. ಕೊರ್ಲಕುಂಟೆ ಕೆರೆ ಕಲುಷಿತ ತಾಣ ಆಗಿದೆ. ಕಳೆ ಮುಳ್ಳುಗಳು ಬೆಳೆದಿವೆ. ಕೆರೆ ಸುತ್ತಲಿನ ಪ್ರದೇಶವು ಒತ್ತುವರಿಯಾಗಿದೆ. ಪಟ್ಟಣದ ಹೊರವಲಯದ ರೆಡ್ಡಿಕೆರೆ ಬಾಲಾಜಿ ಬಾಜಿರಾಯನ ಕೆರೆಗಳು ಸೇರಿದಂತೆ ತಾಲ್ಲೂಕಿನ ಕೆರೆಗಳು ಅಭಿವೃದ್ಧಿಯನ್ನೇ ಕಂಡಿಲ್ಲ.

**ಒತ್ತುವರಿ ತೆರವಿಗೆ ಕ್ರಮ**

'ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿ ಕೆರೆಗಳನ್ನು ಹಂತ ಹಂತದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಮತ್ತಷ್ಟು ಅಭಿವೃದ್ಧಿ ಹಾಗೂ ಸೂಕ್ತ ನಿರ್ವಹಣೆಗೆ ಅನುದಾನದ ಕೊರತೆ ಇದೆ. ಸರ್ಕಾರ ಅನುದಾನ ಬಿಡುಗಡೆ ಮಾಡಿದರೆ ಎಲ್ಲಾ ಕೆರೆಗಳಲ್ಲಿನ ಹೂಳು, ಕಳೆ, ಮುಳ್ಳಿನ ಗಿಡಗಳನ್ನು ತೆರವು ಮಾಡಲಾಗುವುದು. ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಸಣ್ಣ ನೀರಾವರಿ ಹಾಗೂ ಅಂತರ್ಜಲ ಅಭಿವೃದ್ಧಿ ಇಲಾಖೆ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಸುನೀಲ್ ತಿಳಿಸಿದ್ದಾರೆ.

> ಕೆರೆ ಕುಂಟೆಗಳಿಂದ ಅಕ್ರಮವಾಗಿ ಮಣ್ಣು ತೆಗೆಯಲಾಗುತ್ತಿದೆ. ಕೆರೆಯಲ್ಲಿ ಬೃಹತ್ ಗುಂಡಿಗಳು ಬಿದ್ದಿವೆ. ಅನೇಕ ಗ್ರಾಮಗಳ ಕೆರೆಗಳನ್ನು ಅಭಿವೃದ್ಧಿಪಡಿಸಬೇಕು ಕೆರೆಗಳ ಒತ್ತುವರಿ ನಿಲ್ಲಬೇಕು.
>
> ಶಿವಪ್ಪ, ರೈತ

> ಕೆರೆಗಳ ಅಚ್ಚುಕಟ್ಟು ಪ್ರದೇಶ ಮತ್ತು ಕೆರೆ ಪಾತ್ರಗಳಲ್ಲಿ ಕಳೆ ಮತ್ತು ಮುಳ್ಳಿನ ಗಿಡ ತೆರವು ಮಾಡಬೇಕು. ನೀರು ಸಂಗ್ರಹಣಾ ಸಾಮರ್ಥ್ಯ ಹೆಚ್ಚಿಸಬೇಕು. ಡೈಕ್‌ಗಳು ಚೆಕ್ ಡ್ಯಾಂ ನಿರ್ಮಾಣ ಮಾಡಬೇಕು.
>
> ಟಿ.ರಘುನಾಥರೆಡ್ಡಿ, ರೈತ ಸಂಘ, ಹಸಿರು ಸೇನೆ ತಾಲ್ಲೂಕು ಕಾರ್ಯದರ್ಶಿ

ಅಂತರಾಳದಿಂದ.. EDITORIAL

# ಧರ್ಮಸ್ಥಳ: ಸಮಾಧಿಗಳಿಂದ ಸತ್ಯದ ಅವಶೇಷಗಳು ಹೊರ ಬರುವುದೆಂದು?



ಧರ್ಮಸ್ಥಳದಲ್ಲಿ ಸರಣಿ ಹತ್ಯೆಗಳು ನಡೆದಿದ್ದು, ಆ ಹೆಣಗಳನ್ನು ಹೂತು ಹಾಕಲು ತನ್ನನ್ನು ಬಳಸಿಕೊಂಡಿದ್ದರು ಎಂದು ಆರೋಪ ಮಾಡಿದ ದೂರುದಾರ ನ್ಯಾಯಾಲಯಕ್ಕೆ ಹಾಜರಾಗಿ ತನ್ನ ಹೇಳಿಕೆಗಳನ್ನು ದಾಖಲಿಸಿ ಒಂದು ವಾರ ಕಳೆದಿದೆ. ಇನ್ನಾದರೂ ಈ ಆರೋಪದ ತನಿಖೆ ತೀವ್ರಗತಿಯನ್ನು ಪಡೆದುಕೊಳ್ಳಬಹುದು ಸತ್ಯಗಳು ಗೋರಿಗಳಿಂದ ಹೊರ ಬೀಳಬಹುದು ಎಂಬ ನಿರೀಕ್ಷೆಯಲ್ಲಿದ್ದ ರಾಜ್ಯದ ಜನತೆಗೆ ತೀವ್ರ ನಿರಾಸೆಯಾಗಿದೆ. ಒಂದೆಡೆ ತನಿಖೆಗೆ ದೂರುದಾರ ಪೂರ್ಣ ಪ್ರಮಾಣದಲ್ಲಿ ಸಹಕರಿಸಲು ಸಿದ್ದನಿದ್ದಾಗಲೂ, ತನಿಖೆಯ ಪ್ರಕ್ರಿಯೆಯ ಹೆಸರಿನಲ್ಲೇ ಪೊಲೀಸ್ ಇಲಾಖೆ ಆಮೆಗತಿಯನ್ನು ಅನುಸರಿಸುತ್ತಿದೆ.

ದೂರು ನೀಡಿದಾತ ತನ್ನ ವಕೀಲರ ಮೂಲಕ ಪೊಲೀಸರು ಅಸ್ಥಿ ಪಂಜರ ಸಿಕ್ಕಿದ ಸ್ಥಳದ ಮಹಜರು ಯಾಕೆ ಮಾಡುತ್ತಿಲ್ಲ. ಎಂದು ಪ್ರಶ್ನಿಸಿದ್ದಾರೆ ಮಾತ್ರವಲ್ಲ, ಅಸ್ಥಿ ಪಂಜರವನ್ನು ಒಪ್ಪಿಸಿದ್ದರೂ ಈವರೆಗೆ ಪೊಲೀಸರು ಸರಿಯಾದ ರೀತಿಯಲ್ಲಿ ತನಿಖೆ ಮುಂದುವರಿಸುತ್ತಿಲ್ಲ. ಅಸ್ಥಿಪಂಜರ ದೊರಕಿದ ಸ್ಥಳ ತನಿಖೆಗೆ ಈವರೆಗೆ ಕ್ರಮ ತೆಗೆದುಕೊಂಡಿಲ್ಲ ಎಂದು ಪ್ರಕಟಣೆಯಲ್ಲಿ ಆರೋಪಿಸಿದ್ದಾರೆ. ತನಿಖಾಧಿಕಾರಿ ತನಿಖೆಯ ಯಾವ ಹಂತದಲ್ಲಿ ಸಮಾಧಿ ಅಗೆಯುವ ಪ್ರಕ್ರಿಯೆ ಸೂಕ್ತವೆಂದು ನಿರ್ಧರಿಸುತ್ತಾರೆಯೋ ಆಗ ಸೂಕ್ತ ಕಾನೂನು ಪ್ರಕ್ರಿಯೆ ಅನುಸರಿಸಿಕೊಂಡು ಸಮಾಧಿ ಅಗೆಯಲಾಗುವುದು ಎಂದೂ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ದೂರುದಾರ ಸಮ್ಮತಿಸಿದಲ್ಲಿ ಆತನ ಬ್ರೈನ್ ಮ್ಯಾಪಿಂಗ್, ಫಿಂಗರ್ ಪ್ರಿಂಟ್, ನಾರ್ಕೋ ಅನಾಲಿಸಿಸ್ ಪರೀಕ್ಷೆಗಳನ್ನು ನಡೆಸುವ ಇಂಗಿತವನ್ನೂ ವ್ಯಕ್ತಪಡಿಸಿದ್ದಾರೆ. ಅಸ್ಥಿ ಪಂಜರಗಳ ಪರೀಕ್ಷೆಯ ಬಗ್ಗೆ ಮೌನವಹಿಸಿದ್ದಾರೆ. ಧರ್ಮಸ್ಥಳದಲ್ಲಿ ನೂರಾರು ಹೆಣಗಳನ್ನು ಹೂತುಹಾಕಿರುವ ವಿಷಯ ಬಹಿರಂಗವಾದುದು ಪೊಲೀಸರ ತನಿಖೆಯಿಂದಲ್ಲ. ಸಾಕ್ಷಿದಾರ ಸ್ವಯಂ ಮುಂದೆ ಬಂದು ದೂರು ನೀಡಿರುವುದರಿಂದ, ಪ್ರಕರಣ ಬೆಳಕಿಗೆ ಬಂದಿದೆ. ಮಾತ್ರವಲ್ಲ, ಇದಕ್ಕೆ ಸಂಬಂಧಿಸಿದ ಒಂದು ಅಸ್ಥಿಪಂಜರವನ್ನು ಈಗಾಗಲೇ ಆತ ಪೊಲೀಸರಿಗೆ ಒಪ್ಪಿಸಿದ್ದಾನೆ. ಜೊತೆಗೆ ತನಿಖೆಯನ್ನು ನಡೆಸಿ ಎಂದು ಆಗ್ರಹಿಸುತ್ತಿದ್ದಾನೆ. ತಲೆಮರೆಸಿಕೊಳ್ಳುವ ಉದ್ದೇಶವಿದ್ದಿದ್ದರೆ ಆತ ತನ್ನ ಜೀವವನ್ನು ಒತ್ತೆಯಿಟ್ಟು ಸ್ವ ಇಚ್ಛೆಯಿಂದ ನ್ಯಾಯಾಲಯದ ಮುಂದೆ ಹಾಜರಾಗಿ, ವಿವರಗಳನ್ನು ಬಹಿರಂಗಪಡಿಸುವ ಅಗತ್ಯವೇ ಇರುತ್ತಿರಲಿಲ್ಲ. ಸಾಕ್ಷಿದಾರ ತಾನು ಹೂತುಹಾಕಿದ್ದೇನೆ ಎನ್ನುತ್ತಿರುವ ಅಸ್ಥಿಪಂಜರಗಳು ಅಲ್ಲಿಂದ ನಾಪತ್ತೆಯಾಗದೇ ಇರಲು ಪೊಲೀಸರು ಮೊದಲು ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಈ ಅಸ್ಥಿಪಂಜರಗಳ ಹಿಂದಿರುವ ಪ್ರಮುಖ ಆರೋಪಿಗಳು ಯಾರು ಎನ್ನುವುದು ಈವರೆಗೆ ಬಹಿರಂಗವಾಗಿಲ್ಲ. ಆದರೆ ಅವರು ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನದಲ್ಲಿರುವವರು ಎನ್ನುವ ವದಂತಿ ಈಗಾಗಲೇ ಹರಡಿವೆ. ಈ ಬಗ್ಗೆ ಪೊಲೀಸರಿಗೆ ಮಾಹಿತಿಯೂ ಇದೆ. ದೂರುದಾರ ತಲೆಮರೆಸಿಕೊಳ್ಳಬಹುದು ಎಂದು ಅನುಮಾನ ವ್ಯಕ್ತಪಡಿಸುತ್ತಿರುವ ಪೊಲೀಸ್ ಇಲಾಖೆಗೆ, ಆರೋಪಿಗಳು ಸಾಕ್ಷ್ಯಗಳನ್ನು ನಾಶಮಾಡಬಹುದು ಎನ್ನುವ ಆತಂಕ ಯಾಕೆ ಕಾಡುತ್ತಿಲ್ಲ ಸಾಕ್ಷಿದಾರ ತಲೆಮರೆಸಿಕೊಳ್ಳಬಹುದು ಎಂದು ಅನುಮಾನ ಪಡುತ್ತಿರುವ ಪೊಲೀಸರಿಗೆ, ಸಾಕ್ಷಿದಾರನನ್ನು ಆರೋಪಿಗಳು ಇಲ್ಲವಾಗಿಸುವ ಬಗ್ಗೆ ಯಾಕೆ ಆತಂಕವಿಲ್ಲ ಎಂದು ಜನರು ಕೇಳುತ್ತಿದ್ದಾರೆ. ಸಾಕ್ಷಿದಾರನಿಗೆ ಜೀವ ಭಯವಿದೆ. ಸಾಕ್ಷಿಯನ್ನು ಇಲ್ಲವಾಗಿಸುವ ಸಂಚುಗಳು ನಡೆಯಬಹುದು ಎನ್ನುವುದನ್ನೇ ಪೊಲೀಸರು 'ಸಾಕ್ಷಿದಾರ ತಲೆಮರೆಸಿಕೊಳ್ಳುವ ಸಾಧ್ಯತೆಯಿದೆ' ಎಂದು ಹೇಳುತ್ತಿದ್ದಾರೆಯೆ ಎಂಬ ಪ್ರಶ್ನೆಯನ್ನು ತಿರುಗಿ ಪೊಲೀಸರಿಗೆ ಕೇಳುವಂತಾಗಿದೆ.ನೂರಾರು ಮೃತದೇಹಗಳನ್ನು ಹೂತುಹಾಕಿದ್ದೇನೆ ಎಂದು ಸಾಕ್ಷಿಯೊಬ್ಬ ನ್ಯಾಯಾಲಯದ ಮುಂದೆ ಹಾಜರಾಗುತ್ತಿದ್ದಂತೆಯೇ 22 ವರ್ಷಗಳ ಹಿಂದೆ ನಾಪತ್ತೆಯಾದ ವಿದ್ಯಾರ್ಥಿನಿಯ ತಾಯಿಯೊಬ್ಬರು ನ್ಯಾಯ ಕೇಳಿ ಮುಂದೆ ಬಂದಿದ್ದಾರೆ. ಅನನ್ಯಾ ಭಟ್ ಎಂಬ ಹೆಸರಿನ ವೈದ್ಯಕೀಯ ವಿದ್ಯಾರ್ಥಿನಿ 2003ರಲ್ಲಿ ಧರ್ಮಸ್ಥಳದಲ್ಲಿ ನಾಪತ್ತೆಯಾಗಿದ್ದು, ಈವರೆಗೆ ಆಕೆ ಏನಾದಳು ಎನ್ನುವುದರ ವಿವರಗಳಿಲ್ಲ. ಇದೀಗ ಅನಾಮಿಕನೊಬ್ಬ 'ತಾನು ನೂರಾರು ಮೃತದೇಹಗಳನ್ನು ಹೂತು ಹಾಕಿದ್ದೇನೆ' ಎಂದು ಸಾಕ್ಷ್ಯ ಹೇಳಲು ಮುಂದೆ ಬಂದಿರುವುದರಿಂದ ತನ್ನ ಮಗಳ ಮೃತದೇಹವೂ ಅದರಲ್ಲಿ ಇರಬಹುದು.

ಆದುದರಿಂದ ತನಿಖೆ ನಡೆಸಿ ತನ್ನ ಮಗಳ ಅಸ್ಥಿಪಂಜರಗಳು ಪತ್ತೆಯಾದರೆ ಅದನ್ನು ನನಗೆ ನೀಡಬೇಕು ಎಂದು ಅನನ್ಯಾ ಭಟ್ ಅವರ ತಾಯಿ ಮನವಿ ಮಾಡಿದ್ದಾರೆ. ಅಷ್ಟೇ ಅಲ್ಲ ತನಿಖೆಯ ಬಗ್ಗೆ ಪೊಲೀಸರು ಆಸಕ್ತಿ ತೋರಿಸುತ್ತಿಲ್ಲ. ಆದುದರಿಂದ ವಿಶೇಷ ತನಿಖಾ ತಂಡದಿಂದ ತನಿಖೆಯಾಗಲಿ ಎಂದೂ ಆಗ್ರಹಿಸಿದ್ದಾರೆ.

> **ಪೊಲೀಸರು ತಮ್ಮ ನಿಧಾನಗತಿಯ ತನಿಖೆಗೆ ಕುಂಟು ನೆಪವನ್ನು ಮುಂದಿಟ್ಟಿದ್ದಾರೆ. ಧರ್ಮಸ್ಥಳದಲ್ಲಿ ಸಮಾಧಿ ಅಗೆಯುವ ಪ್ರಕ್ರಿಯೆ ಆರಂಭಿಸಿದರೆ ಅದು ಮುಗಿಯುತ್ತಿದ್ದಂತೆಯೇ ಸಾಕ್ಷಿ ದೂರುದಾರ ತಲೆಮರೆಸಿಕೊಳ್ಳುವ ಸಾಧ್ಯತೆಯಿದೆ ಎಂದು ಸ್ಥಳೀಯ ವ್ಯಕ್ತಿಗಳಿಂದ ಗುಪ್ತ ಮಾಹಿತಿ ದೊರಕಿರುತ್ತದೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಎಸ್ಪಿ ಡಾ. ಅರುಣ್ ಕೆ. ಸಮರ್ಥನೆ ನೀಡಿದ್ದಾರೆ.**

# ರಾಮಾಯಣ



## ಕೌಸಲ್ಯಾದೇವಿ ಮೊದಲಾದವರ ವಿಲಾಪ

• ಹಿಂದಿನ ಸಂಚಿಕೆಯಿಂದ **101ನೆಯ ಅಧ್ಯಾಯ**

ನನ್ನ ಕುಮಾರನಾದ ಲಕ್ಷ್ಮಣನು ಒಂದು ದಿವಸವಾದರೂ ಇಂಥ ಪ್ರಯಾಸವಾದ ಕೆಲಸವನ್ನು ಮಾಡಿದವನಲ್ಲ, ಇನ್ನು ಇಂಥ ಹೀನಕೃತ್ಯವನ್ನು ಬಿಡಲಿ ಸುಮಿತ್ರಾದೇವಿ, ಭರತನು ಬಂದು ರಾಮನನ್ನು ಕಂಡು ದಶರಥರಾಯನ ನಿರಾಣವಾರ್ತೆಯನ್ನು ಹೇಳಲು ಶ್ರೀರಾಮನು ಈ ನದೀತೀರಕ್ಕೆ ಬಂದು ಸ್ನಾನವನ್ನು ಮಾಡಿ ತಿಲತರ್ಪಣವನ್ನು ಕೊಟ್ಟು ದರ್ಭೆಯಮೇಲಿಟ್ಟ ಇಂಗುದೀಪಿಕ್ಕಾಕದ ಪಾರ್ವಣಗಳನ್ನು ನೋಡು ಈ ಕಾಡಿನಲ್ಲಿರುವ ಮಂದಾಕಿನೀತೀರದಲ್ಲಿ ಶ್ರೀರಾಮನು ತನ್ನ ತಂದೆಯನ್ನು ಕುರಿತು ದರ್ಭೆಯ ಮೇಲಿಟ್ಟ ಪಿಂಡಗಳನ್ನು ಎಲ್ಲರೂ ನೋಡಿ ಸಮಸ್ತ ಭೋಗಗಳನ್ನನುಭವಿಸಿದ ದಶರಥರಾಯನಿಗೆ ಪಿಂಡಗಳು ಭೋಗಯೋಗ್ಯವೆ ಸಮುದ್ರಪರ್ಯಂತವಾದ ಭೂಮಿಯನ್ನಾಳಿದ ದಶರಥರಾಯನು ಈ ಇಂಗುದೀಪಿಕ್ಕಾಕದ ಪಿಂಡಗಳನ್ನು ಹೇಗೆ ಭುಂಜಿಸುವನು ಅಕಟಕಟಾ ನಾವು ಇಂಥ ದುಃಖವನ್ನು ನೋಡುವುದಕ್ಕೆ ಗುರಿಯಾದೆವು.

ಶ್ರೀರಾಮನು ದಶರಥರಾಯನನ್ನು ಕುರಿತು ಮಂದಾಕಿನೀತೀರದಲ್ಲಿ ದರ್ಭೆಗಳಮೇಲೆ ಇಟ್ಟಿರುವ ಈ ಇಂಗುದೀಪಿಣ್ಯಾಕದ ಪಿಂಡಗಳನ್ನು ನೋಡಿ ನಮ್ಮ ಎದೆಗಳು ಸಾವಿರ ಹೋಳಾಗಿ ಒಡೆಯಲಿಲ್ಲ ಲೌಕಿಕಬುದ್ಧಿಯಿಂದ ನೋಡಿದರೆ ಇದು ತುಚ್ಛವಾಗಿ ಇಂಗುದೀಪಿಕ್ಕಾಕವೆಂದು ಕಾಣಿಸುತ್ತಿದೆ. ಲೋಕದಲ್ಲಿ ಮನುಷ್ಯನು ತಾನು ಯಾವ ವಸ್ತುವನ್ನು ಆಹಾರಮಾಡಿಕೊಂಡಿರುವನೋ ಆ ವಸ್ತುವನ್ನೇ ದೇವತಾರ್ಪಿತ ಮಾಡಿದರೆ ದೇವತೆಗಳಿಗೂ ಆ ವಸ್ತುವೇ ಆಹಾರವಾಗುವುದೆಂಬ ಒಂದು ಸ್ಮೃತಿವಾಕ್ಯವುಂಟು ಎಂದು ಹಂಬಲಿಸುತ್ತಿದ್ದಳು. ಬಳಿಕ ಆಕೆಯ ಸವತಿಯರಾದ ರಾಜಸ್ತ್ರೀಯರು ಕೌಸಲ್ಯಾದೇವಿಯನ್ನು ಸಂತವಿಸಿ ಶ್ರೀರಾಮನ ಆಶ್ರಮಕ್ಕೆ ಹೋಗಿ ಸ್ವರ್ಗಲೋಕದಿಂದ ಬಂದ ಸಾಕ್ಷಾತ್ ದೇವೇಂದ್ರನೋ ಎಂಬಂತೆ ಒಪ್ಪುತ್ತ ಸಮಸ್ತ ಭೋಗಗಳನ್ನೂ ಬಿಟ್ಟು ಋಷಿಧರ್ಮವನ್ನು

ಕೈಕೊಂಡು ವಿರಕ್ತನಾಗಿ ದರ್ಭಾಸನದಮೇಲೆ ಕುಳಿತಿದ್ದ ಶ್ರೀರಾಮನನ್ನು ಕಂಡು ಅತ್ಯಂತ ದುಃಖಾಕ್ರಾಂತರಾಗಿ ರೋದನಮಾಡುತ್ತಿದ್ದರು. ಶ್ರೀರಾಮನು ಕೂಡಲೆ ಎದ್ದು ಕೌಸಲ್ಯಾದೇವಿ ಮೊದಲಾದ ತಾಯಂದಿರಿಗೆ ನಮಸ್ಕಾರವನ್ನು ಮಾಡಿ ಕಣ್ಣೀರು ಬಿಡುತ್ತಿರಲು ಕೌಸಲ್ಯಾದೇವಿ ಮೊದಲಾದವರು ಕೋಮಲವಾದ ಬೆರಳುಗಳುಳ್ಳ ಅತಿ ಮನೋಹರವಾದ ಅಂಗೈಗಳಿಂದ ಆತನ ಕಣ್ಣೀರನ್ನು ಒರೆಸಿ ಆತನ ಶರೀರದ ಮೇಲಿದ್ದ ಕೆಂಧೂಳಿಯನ್ನೂ ತೊಡೆದು ಸಂತವಿಸುತ್ತಿದ್ದರು. ಆಮೇಲೆ ಲಕ್ಷ್ಮಣನು ದುಃಖಾಕ್ರಾಂತನಾಗಿ ಅವರೆಲ್ಲರಿಗೂ ಯಥಾಕ್ರಮವಾಗಿ ನಮಸ್ಕಾರಮಾಡಲು ಅವರು ಶ್ರೀರಾಮನ ಕಣ್ಣೀರನ್ನು ತೊಡೆದು ಹೇಗೆ ಸಂತವಿಸಿದರೋ ಆ ರೀತಿಯಲ್ಲಿ ಲಕ್ಷ್ಮಣನನ್ನೂ ಸಂತವಿಸಿದರು. ಆಮೇಲೆ ಸೀತಾದೇವಿಯು ಅತ್ಯಂತ ದುಃಖಾಕ್ರಾಂತಳಾಗಿ ಕೌಸಲಾದೇವಿ ಮೊದಲಾದ ತನ್ನ ಅತ್ತೆಯರಿಗೆ ನಮಸ್ಕಾರಮಾಡಿ ಕಣ್ಣೀರು ಬಿಡುತ್ತ ಕೌಸಲ್ಯಾದೇವಿಯ ಸಮೀಪದಲ್ಲಿ ನಿಂತಳು. ಆ ದೇವಿಯು ತನ್ನ ಮಗಳನ್ನು ತಬ್ಬಿಕೊಂಡಂತೆ ಆ ದೇವಿಯನ್ನು ಹಿಡಿದಪ್ಪಿಕೊಂಡು ಕಣ್ಣೀರು ಬಿಡುತ್ತ ಅಕಟಕಟಾ! ಸೀತಾದೇವಿಯು ಜನಕಚಕ್ರವರ್ತಿಯ ಮಗಳು. **ಮುಂದುವರಿಯುವುದು...**

# ಮನೆಯಲ್ಲಿಯೇ ತಯಾರಿಸಿ ನೈಸರ್ಗಿಕ ಬೊಟಾಕ್ಸ್ ಫೇಸ್ ಮಾಸ್ಕ್



ಚರ್ಮದ ಹೊಳಪು ಹೆಚ್ಚಿಸಲು ನಾವು ಎಷ್ಟೆಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ. ಆದರೂ ಕೆಲವೊಮ್ಮೆ ನಮಗೆ ಸರಿಯಾದ ಫಲಿತಾಂಶ ಸಿಗುವುದಿಲ್ಲ. ಮುಖದಲ್ಲಿ ಕಲೆ, ಮೊಡವೆ ಗುರುತು, ಒರಟಾದ ಚರ್ಮದಂತಹ ಸಮಸ್ಯೆಗಳು ಕಾಡುತ್ತವೆ. ಹೊಳೆಯುವ ಚರ್ಮ ಪಡೆಯಲು ಜನರು ಕಾಸ್ಮೆಟಿಕ್ಸ್, ಬೊಟಾಕ್ಸ್, ಫಿಲ್ಲರ್ ಮತ್ತು ಇತರ ಫೇಶಿಯಲ್ ಚಿಕಿತ್ಸೆಗಳನ್ನು ಮಾಡಿಸಿಕೊಳ್ಳುತ್ತಾರೆ.

ಆದರೆ ಮುಖವನ್ನು ಹೊಳೆಯುವಂತೆ ಮಾಡುವ ನೈಸರ್ಗಿಕ ಮಾರ್ಗಗಳಿದ್ದಾಗ, ರಾಸಾಯನಿಕಗಳನ್ನು ಏಕೆ ಬಳಸಬೇಕು ರಾಸಾಯನಿಕಗಳನ್ನು ಒಳಗೊಂಡಿರುವ ಸೌಂದರ್ಯ ವರ್ಧಕ ಉತ್ಪನ್ನಗಳು ತಾತ್ಕಾಲಿಕ ಸೌಂದರ್ಯಕ್ಕೆ ಕಾರಣವಾಗಬಹುದು. ಆದರೆ ದೀರ್ಘಾವಧಿ ಬಳಸಿದಾಗ ಸಮಸ್ಯೆಗಳು ಎದುರಾಗಬಹುದು.

ಆಯುರ್ವೇದ ಡಾಕ್ಟರ್ ರೋಬಿನ್ ಶರ್ಮಾ ಒಂದು ನೈಸರ್ಗಿಕ ಬೊಟಾಕ್ಸ್ ಫೇಸ್ ಮಾಸ್ಕ್ ಅನ್ನು ಇನ್ಸ್ಟಾಗ್ರಾಮ್ ನಲ್ಲಿ ಹಂಚಿಕೊಂಡಿದ್ದಾರೆ, ಇದನ್ನು ನೀವು ಮನೆಯಲ್ಲಿ ಸುಲಭವಾಗಿ ತಯಾರಿಸಬಹುದು. ಇದು ನಿಮ್ಮ ಚರ್ಮವನ್ನು ನೈಸರ್ಗಿಕವಾಗಿ ಬೊಟಾಕ್ಸ್ ಮಾಡುವ ಕಾರ್ಯವನ್ನು ನಿರ್ವಹಿಸುತ್ತದೆ. ಬಾಳೆಹಣ್ಣುಗಳಿಂದ ತಯಾರಿಸಿದ ಈ ಮಿಶ್ರಣ ಮುಖದ ಕಲೆಗಳನ್ನು ಕಡಿಮೆಮಾಡುತ್ತದೆ ಮತ್ತು ಚರ್ಮವನ್ನು ಹೊಳೆಯುವಂತೆ ಮಾಡುತ್ತದೆ. ಇದನ್ನು ಹೇಗೆ ತಯಾರಿಸಬೇಕು ಎಂಬುದನ್ನು ತಿಳಿಯೋಣ.

**ಇದರ ಪ್ರಯೋಜನಗಳೇನು:** ಈ ನೈಸರ್ಗಿಕ ಬೊಟೊಕ್ಸ್ ಫೇಸ್ ಮಾಸ್ಕ್ ನಿಮ್ಮ ಚರ್ಮಕ್ಕೆ ನೈಸರ್ಗಿಕ ಹೊಳಪನ್ನು ತರುವುದಲ್ಲದೆ ನಿಮ್ಮ ಚರ್ಮದ ತಡೆಗೋಡೆಯನ್ನು ಸರಿಪಡಿಸುತ್ತದೆ ಎಂದು ವೈದ್ಯರು ವಿವರಿಸಿದ್ದಾರೆ. ಇದು ಮುಖದ ಮೇಲಿನ ಸುಕ್ಕುಗಳನ್ನು ಕಡಿಮೆ ಮಾಡುತ್ತದೆ ಮತ್ತು ಚರ್ಮವನ್ನು ಆರೋಗ್ಯಕರವಾಗಿಸುತ್ತದೆ.

ನಿಮ್ಮ ಚರ್ಮದ ಹೊಳಪಿಗೆ ಸಾವಿರಾರು ರೂಪಾಯಿಯ ಸೌಂದರ್ಯ ಉತ್ಪನ್ನಗಳನ್ನು ಖರೀದಿಸುತ್ತೀರಿ, ಅದನ್ನು ನೀವು ಕೇವಲ 15 ರಿಂದ 20 ರೂಪಾಯಿಗಳಿಗೆ ಮನೆಯಲ್ಲಿ ಸುಲಭವಾಗಿ ತಯಾರಿಸಬಹುದು. ಮತ್ತು ಈ ಫೇಸ್ ಮಾಸ್ಕ್ ಪ್ರಮುಖ ಅಂಶವೆಂದರೆ ಮೊದಲ ಬಳಕೆಯಿಂದಲೇ ಫಲಿತಾಂಶಗಳನ್ನು ತೋರಿಸಲು ಪ್ರಾರಂಭಿಸುತ್ತದೆ. ಫೇಸ್ ಮಾಸ್ಕ್ ತಯಾರಿಸಲು ಯಾವ ಪದಾರ್ಥಗಳು ಬೇಕಾಗುತ್ತವೆ ಎಂಬುದನ್ನು ನೋಡೋಣ.



**ಬೊಟೊಕ್ಸ್ ಫೇಸ್ ಮಾಸ್ಕ್ ತಯಾರಿಸುವುದು ಹೇಗೆ :** ಮೊದಲು, ಒಂದು ಬಟ್ಟಲನ್ನು ತೆಗೆದುಕೊಂಡು ಅದರಲ್ಲಿ ಮಾಗಿದ ಬಾಳೆಹಣ್ಣನ್ನು ಮ್ಯಾಶ್ ಮಾಡಿ. ನಂತರ ಅಲೋವೆರಾ ಜೆಲ್, ಗ್ಲಿಸರಿನ್ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಅಂತಿಮವಾಗಿ, ನಯವಾದ ಪೇಸ್ಟ್ ತಯಾರಿಸಲು ವಿಟಮಿನ್ ಇ, ಮೀನಿನ ಎಣ್ಣೆಯನ್ನು ಸೇರಿಸಿ. ಈ ಮಿಶ್ರಣ ನಿಮ್ಮ ಮುಖಕ್ಕೆ ನೈಸರ್ಗಿಕ ಹೊಳಪನ್ನು ನೀಡುತ್ತದೆ. ಇದನ್ನು ಮುಖಕ್ಕೆ ಹಚ್ಚಿಕೊಂಡು 10-15 ನಿಮಿಷ ಕಾಲ ಒಣಗಲು ಬಿಡಿ. ನಂತರ, ನಿಮ್ಮ ಮುಖವನ್ನು ತಣ್ಣೀರಿನಿಂದ ತೊಳೆಯಿರಿ.

**ಬಾಳೆಹಣ್ಣು ಏಕೆ ಉತ್ತಮ:** ಬಾಳೆಹಣ್ಣುಗಳು ನೈಸರ್ಗಿಕ ಹಣ್ಣಿನ ಆಮ್ಲಗಳನ್ನು ಹೊಂದಿರುತ್ತವೆ, ಇದು ಸತ್ತ ಚರ್ಮದ ಕೋಶಗಳನ್ನು ಹೊರಹಾಕಲು ಸಹಾಯ ಮಾಡುತ್ತದೆ, ಚರ್ಮವನ್ನು ನಯವಾಗಿಸುತ್ತದೆ ಮತ್ತು ರಿಫ್ರೆಶ್ ಮಾಡುತ್ತದೆ.

ವಿಟಮಿನ್ ಇ ಅಂಶದೊಂದಿಗೆ ರೇಖೆಗಳು ಸುಕ್ಕುಗಳ ನೋಟವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ಗ್ಲಿಸರಿನ್ ಅನ್ನು ಮುಖಕ್ಕೆ ಹಚ್ಚಿದಾಗ ಏನಾಗುತ್ತದೆ:** ಮುಖಕ್ಕೆ ಗ್ಲಿಸರಿನ್ ಹಚ್ಚುವುದು ಶುಷ್ಕತೆ ಒರಟುತನವನ್ನು ಕಡಿಮೆ ಮಾಡುವಲ್ಲಿ ಸಾಕಷ್ಟು ಪರಿಣಾಮಕಾರಿಯಾಗಿದೆ. ಇದನ್ನು ಒಣ, ಸಾಮಾನ್ಯ, ಎಣ್ಣೆ ಸೇರಿದಂತೆ ಎಲ್ಲಾ ರೀತಿಯ ಚರ್ಮದ ಮೇಲೆ ಬಳಸಬಹುದು. ಹೆಚ್ಚುವರಿಯಾಗಿ, ಇದು ಚರ್ಮವನ್ನು ಮೃದು ಮತ್ತು ಆಕರ್ಷಕವಾಗಿಸುತ್ತದೆ.

**ಫೇಸ್ ಮಾಸ್ಕ್ ತಯಾರಿಸಲು ಏನು ಬೇಕು?**

- 1 ಬಾಳೆಹಣ್ಣು
- 1 ಟೇಬಲ್ ಚಮಚ ಅಲೋವೆರಾ ಜೆಲ್
- 1 ಟೇಬಲ್ ಚಮಚ ಗ್ಲಿಸರಿನ್
- 2 ವಿಟಮಿನ್ ಇ ಕ್ಯಾಪ್ಸೂಲ್‌ಗಳು
- 1 ಫಿಶ್ ಆಯಿಲ್ ಕ್ಯಾಪ್ಸೂಲ್

# ಚೆಟ್ಟಿನಾಡ್ ಚಿಕನ್ ಮನೆಯಲ್ಲೇ ಮಾಡಿ..

## ಬಾಯಲ್ಲಿ ನೀರೂರಿಸುತ್ತೆ ಇದರ ರುಚಿ

**ಚೆಟ್ಟಿನಾಡ್ ಚಿಕನ್ ಮಾಡಲು ಬೇಕಾಗುವ ಸಾಮಗ್ರಿಗಳು**

- ಧನಿಯಾ - 1 ಚಮಚ
- ಮೆಂತ್ಯ - 2 ಚಮಚ
- ಕಾಳುಮೆಣಸು - 1 ಚಮಚ
- ಚಕ್ಕೆ - 1 ಇಂಚು
- ಒಣ ಮೆಣಸಿನಕಾಯಿ - 3
- ಕಾಶ್ಮೀರಿ ಕೆಂಪು ಮೆಣಸಿನಕಾಯಿ - 2
- ಸ್ಟಾರ್ (ನಕ್ಷತ್ರ) - 1
- ಜೀರಿಗೆ - 1 ಚಮಚ
- ಏಲಕ್ಕಿ - 2
- ಲವಂಗ - 6
- ತೆಂಗಿನಕಾಯಿ - 2 ಚಮಚ
- ಶುಂಠಿ - ½ ಇಂಚು
- ಬೆಳ್ಳುಳ್ಳಿ - 3
- ಉಪ್ಪು - ರುಚಿಗೆ ತಕ್ಕಷ್ಟು
- ಇತರೆ ಪದಾರ್ಥಗಳು
- ಚಿಕನ್ - 500 ಗ್ರಾಂ
- ಮೊಸರು - 1 ½ ಚಮಚ
- ನಿಂಬೆ ರಸ - 1 ಚಮಚ
- ತುಪ್ಪ - 1 ಚಮಚ
- ಈರುಳ್ಳಿ - 1
- ಅರಿಶಿನ ಪುಡಿ - ½ ಚಮಚ
- ಉಪ್ಪು - 1 ಚಮಚ
- ಕರಿಬೇವು - 10
- ಕೊತ್ತಂಬರಿ ಸೊಪ್ಪು - ಸ್ವಲ್ಪ

ಮಳೆಗಾಲದ ಸಂಜೆಗೆ ಚುಟುಕು ಖಾರದ ರುಚಿ ಬೇಕಾ ಚೆಟ್ಟಿನಾಡ್ ಸ್ಟೈಲ್ ಚಿಕನ್ ಓನ್ಲಿ ಫಾರ್ ಯೂ ಚೆಟ್ಟಿನಾಡ್ ಚಿಕನ್ ರುಚಿಯನ್ನು ಮಾಡಿಯೇ ಸವಿಯಬೇಕು.

ಮಳೆಗಾಲದಲ್ಲಿ ಬಿಸಿಬಿಸಿಯಾದ, ಖಾರವಾದ ಆಹಾರದ ಬಯಕೆ ಹೆಚ್ಚಾಗುತ್ತದೆ. ಚೆಟ್ಟಿನಾಡ್ ಚಿಕನ್ ಅನ್ನು ನೀವು ಮನೆಯಲ್ಲಿಯೇ ಮಾಡಬಹುದು. ಬೇಕಾಗುವ ಮಸಾಲೆ ಪದಾರ್ಥಗಳನ್ನು ರುಬ್ಬಿ, ಚಿಕನ್ ಅನ್ನು ಮ್ಯಾರಿನೇಟ್ ಮಾಡಿ, ಹುರಿದು ಬೇಯಿಸಬೇಕು. ಇದನ್ನು ಅನ್ನ, ರೊಟ್ಟಿ, ನಾನ್ ಗಳೊಂದಿಗೆ ಸವಿಯಬಹುದು. ಹಾಗಾದರೆ, ಸುಲಭವಾಗಿ ಮತ್ತು ಬಲು ರುಚಿಯಾಗಿ ಚೆಟ್ಟಿನಾಡು ಚಿಕನ್ ಮಾಡುವುದು ಹೇಗೆ ಎಂಬುದನ್ನು ಇಲ್ಲಿ ತಿಳಿಯೋಣ. ಮಳೆಗಾಲವು ಪ್ರಾರಂಭವಾದಂತೆ ಬೆಂಗಳೂರು ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುತ್ತಿದೆ.



ಇಂತಹ ಚಳಿಯ ವಾತಾವರಣದಲ್ಲಿ ಬಿಸಿಬಿಸಿಯಾದ ಖಾರವಾದ ಊಟವನ್ನು ಸವಿಯಲು ಮನಸ್ಸು ಮತ್ತು ನಾಲಿಗೆ ಬಯಸುತ್ತದೆ. ಅದರಂತೆ, ಬಿಸಿಯಾದ ರುಚಿಕರವಾದ ಚೆಟ್ಟಿನಾಡ್ ಚಿಕನ್ ಸವಿಯಲು ಹೇಳಿ ಮಾಡಿಸಿದ ತಿನಿಸು. ಈ ರೆಸಿಪಿ ದಕ್ಷಿಣ ಭಾರತದಲ್ಲಿ ಬಹಳ ಪ್ರಸಿದ್ಧವಾಗಿದೆ. ಇದನ್ನು ತಯಾರಿಸಿದರೆ ಅನ್ನದ ಜೊತೆಗೆ ರೊಟ್ಟಿ, ನಾನ್ ಗಳೊಂದಿಗೆ ಸವಿಯಲು ತುಂಬಾ ರುಚಿಕರವಾಗಿರುತ್ತದೆ. ಇದನ್ನು ಮಾಡುವುದು ಕೂಡ ತುಂಬಾ ಸುಲಭ.

**ಚೆಟ್ಟಿನಾಡ್ ಚಿಕನ್ ತಯಾರಿಸುವ ವಿಧಾನ :** ಮೊದಲಿಗೆ ಚಿಕನ್ ಅನ್ನು ಚೆನ್ನಾಗಿ ತೊಳೆಯಿರಿ. ನಂತರ ಅರಿಶಿನ, ಉಪ್ಪು ಹಾಕಿ ಮತ್ತೊಮ್ಮೆ ತೊಳೆಯಿರಿ. ಈಗ ಚೆಟ್ಟಿನಾಡ್ ಚಿಕನ್ ಮಾಡಲು ಮುಖ್ಯವಾದ ಮಸಾಲೆಯನ್ನು ತಯಾರಿಸಬೇಕು. ಅದಕ್ಕಾಗಿ ಶುಂಠಿ, ಬೆಳ್ಳುಳ್ಳಿಯನ್ನು ಹೊರತುಪಡಿಸಿ ಮೆಂತ್ಯ, ಧನಿಯಾ, ಸ್ಟಾರ್, ಒಣ ಮೆಣಸಿನಕಾಯಿ, ಕಾಶ್ಮೀರಿ ಮೆಣಸಿನಕಾಯಿ, ಏಲಕ್ಕಿ, ತೆಂಗಿನಕಾಯಿ ಚೂರು ಸೇರಿದಂತೆ ಉಳಿದೆಲ್ಲಾ ಪದಾರ್ಥಗಳನ್ನು ಹುರಿದು ಚೆನ್ನಾಗಿ ಆರಲು ಬಿಟ್ಟು ರುಬ್ಬಿಕೊಳ್ಳಿ. ಈಗ ಹುರಿದ ಮಸಾಲೆ ಪದಾರ್ಥಗಳೊಂದಿಗೆ ಶುಂಠಿ, ಬೆಳ್ಳುಳ್ಳಿ ಮತ್ತು ಮತ್ತೆ ಸ್ವಲ್ಪ ತೆಂಗಿನಕಾಯಿ ಹಾಕಿ. ಅದಕ್ಕೆ ಸ್ವಲ್ಪ ನೀರು ಸೇರಿಸಿ ಮಿಕ್ಸಿಯಲ್ಲಿ ನುಣ್ಣಗೆ ರುಬ್ಬಿಕೊಳ್ಳಿ. ಈ ಪೇಸ್ಟ್ ಅನ್ನು ಚಿಕನ್ ಜೊತೆಗೆ ಸೇರಿಸಿ. ನಿಂಬೆ ರಸ ಮತ್ತು ಮೊಸರು ಸೇರಿಸಿ ಚೆನ್ನಾಗಿ ಕಲಸಿ 60 ನಿಮಿಷಗಳ ಕಾಲ ನೆನೆಸಿಡಿ. ಬಳಿಕ ಗ್ಯಾಸ್ ಸ್ಟವ್ ಆನ್ ಮಾಡಿ. ಒಂದು ಬಾಣಲೆಯನ್ನು ಇಟ್ಟು, ಬಿಸಿಯಾದ ನಂತರ ಒಂದು ಚಮಚ ತುಪ್ಪ ಹಾಕಿ. ಇದಕ್ಕೆ ಸಣ್ಣಗೆ ಹೆಚ್ಚಿದ ಈರುಳ್ಳಿ, ಅರಿಶಿನ ಪುಡಿ ಸೇರಿಸಿ ಈರುಳ್ಳಿ ಚೆನ್ನಾಗಿ ಹುರಿಯಿರಿ. ಈರುಳ್ಳಿ ಚೆನ್ನಾಗಿ ಹುರಿದ ನಂತರ ಈಗ ಮ್ಯಾರಿನೇಟ್ ಮಾಡಿದ ಚಿಕನ್ ಹಾಕಿ, ಚೆನ್ನಾಗಿ ತಿರುಗಿಸಿ. ಅಗತ್ಯವಿರುವಷ್ಟು ನೀರು ಹಾಕಿ. ಬಳಿಕ ರುಚಿಗೆ ತಕ್ಕಷ್ಟು ಉಪ್ಪು ಬೆರೆಸಿ, ಚೆಟ್ಟಿನಾಡ್ ಮಸಾಲೆ ಪೂರ್ತಿಯಾಗಿ ಬೇಯುವವರೆಗೆ ಬೇಯಿಸಿ. ಇಷ್ಟು ಮಾಡಿದರೆ, ಈಗ ರುಚಿಕರವಾದ ಚೆಟ್ಟಿನಾಡ್ ಚಿಕನ್ ಸಿದ್ಧ. ಕೊನೆಯಲ್ಲಿ ಕರಿಬೇವು ಮತ್ತು ಕೊತ್ತಂಬರಿ ಸೊಪ್ಪನ್ನು ಉದುರಿಸಿ ಅಲಂಕರಿಸಿ. ಮಧ್ಯಾಹ್ನದ ಊಟಕ್ಕೆ ಬಿಸಿ ಅನ್ನದೊಂದಿಗೆ, ಇಲ್ಲದಿದ್ದರೆ ರಾತ್ರಿಯ ಊಟಕ್ಕೆ ಪರೋಟ, ಚಪಾತಿ, ಇಡ್ಲಿ ಅಥವಾ ರೊಟ್ಟಿಯೊಂದಿಗೆ ತಿನ್ನಲು ತುಂಬಾ ರುಚಿಯಾಗಿರುತ್ತದೆ.

# ಗರ್ಭಾವಸ್ಥೆಯಲ್ಲಿ ಮಹಿಳೆಯರು ದಿನಕ್ಕೆ ಒಂದಾದರೂ ಈ ಹಣ್ಣುಗಳನ್ನು ತಿನ್ನಬೇಕು

ಗರ್ಭಾವಸ್ಥೆಯ ಪ್ರಯಾಣದಲ್ಲಿ ಪ್ರತಿದಿನ ಒಂದು ಹಣ್ಣನ್ನು ತಿನ್ನುವ ಅಭ್ಯಾಸವು ಮಹಿಳೆಯರಿಗೆ ತುಂಬಾ ಪ್ರಯೋಜನಕಾರಿಯಾಗಿದೆ. ಈ ಸಮಯದಲ್ಲಿ ಖಂಡಿತವಾಗಿಯೂ ಡಯೆಟ್‌ನಲ್ಲಿ ಹಣ್ಣನ್ನು ಸೇರಿಸಲೇ ಬೇಕು. ಗರ್ಭಾವಸ್ಥೆಯಲ್ಲಿ ಮಹಿಳೆಯರು ಸೇವಿಸುವ ಪ್ರತಿಯೊಂದು ಆಹಾರವನ್ನು ತಾಯಿ ಮಗುವಿನ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಸೇವಿಸಬೇಕಾಗುತ್ತದೆ.

ಹಾಗಾಗಿ ಗರ್ಭಿಣಿಯರು ತಾವು ಸೇವಿಸುವ ಆಹಾರದ ಬಗ್ಗೆ ವಿಶೇಷ ಕಾಳಜಿವಹಿಸಬೇಕು. ಮಹಿಳೆಯರು ಆಹಾರದಲ್ಲಿ ಹಣ್ಣುಗಳು, ತರಕಾರಿಗಳು, ಬೀಜಗಳು ಮತ್ತು ಬೀಜಗಳನ್ನು ಸೇರಿಸಿಕೊಳ್ಳಬೇಕು.

ತಾಜಾ ಮತ್ತು ಕಾಲೋಚಿತ ಹಣ್ಣುಗಳ ಸೇವನೆ ಗರ್ಭಾವಸ್ಥೆಯಲ್ಲಿ ಮಹಿಳೆಯರಿಗೆ ಪ್ರಯೋಜನಕಾರಿ.

**ಗರ್ಭಾವಸ್ಥೆಯಲ್ಲಿ ಮಹಿಳೆಯರು ಯಾವೆಲ್ಲಾ ಹಣ್ಣುಗಳನ್ನು ತಿನ್ನಬೇಕು:** ಗರ್ಭಿಣಿಯರು ಹಣ್ಣುಗಳನ್ನು ತಿನ್ನುವುದು ದೇಹಕ್ಕೆ ಪೋಷಣೆಯನ್ನು ಒದಗಿಸುತ್ತದೆ. ಆದರೆ ಕೆಲವೊಂದು ಹಣ್ಣುಗಳನ್ನು ತಿನ್ನಬಾರದು. ಗರ್ಭಾವಸ್ಥೆಯಲ್ಲಿ ವಾರದ ಏಳು ದಿನಗಳೂ ಒಂದೊಂದು ಹಣ್ಣನ್ನು ತಿನ್ನೋದು ಬಹಳ ಒಳ್ಳೆಯದು. ಹಣ್ಣುಗಳ ಸೇವನೆಯು ಹೆಚ್ಚು ಪ್ರಯೋಜನಕಾರಿಯಾಗಿದೆ ಎಂದು ಪೌಷ್ಟಿಕತಜ್ಞೆ ನಂದಿನಿ ಹೇಳುತ್ತಾರೆ.

**ಸೇಬು:** ಸೇಬಿನಲ್ಲಿ ಕಬ್ಬಿಣ, ನಾರು ಮತ್ತು ವಿಟಮಿನ್ ಸಿ ಸಮೃದ್ಧವಾಗಿದೆ. ಇದು ಜೀರ್ಣಕ್ರಿಯೆಯನ್ನು ಸುಧಾರಿಸುವುದು, ಮಲಬದ್ಧತೆಯನ್ನು ತೆಗೆದುಹಾಕುವುದು ಮತ್ತು ರೋಗನಿರೋಧಕ ಶಕ್ತಿಯನ್ನು ಬಲಪಡಿಸುವುದು ಸೇರಿದಂತೆ ಇನ್ನೂ ಹಲವಾರು ಪ್ರಯೋಜನಗಳನ್ನು ಹೊಂದಿದೆ.

**ಮಗು ಪ್ಲ್ಯಾನ್ ಮಾಡಿಕೊಳ್ಳುವವರಿಗೆ ಟಿಪ್ಸ್**

**ದಾಳಿಂಬೆ**

**ಮಹಿಳೆಯರು ಗರ್ಭಾವಸ್ಥೆಯಲ್ಲಿ ದಾಳಿಂಬೆಯನ್ನು ತಿನ್ನಬೇಕು. ಇದು ದೇಹದಲ್ಲಿನ ರಕ್ತದ ಕೊರತೆಯನ್ನು ನಿವಾರಿಸುತ್ತದೆ. ದಾಳಿಂಬೆಯಲ್ಲಿ ವಿಟಮಿನ್ ಕೆ, ಕ್ಯಾಲ್ಸಿಯಂ, ಪ್ರೋಟೀನ್ ಮತ್ತು ಕಬ್ಬಿಣ ಸಮೃದ್ಧವಾಗಿದೆ. ದಾಳಿಂಬೆ ದೇಹಕ್ಕೆ ಶಕ್ತಿಯನ್ನು ನೀಡುತ್ತದೆ ಮತ್ತು ಮೂಳೆಗಳನ್ನು ಬಲಪಡಿಸಲು ಸಹಾಯ ಮಾಡುತ್ತದೆ.**


**ಬಾಳೆಹಣ್ಣು:** ಗರ್ಭಿಣಿಯರು ಖಂಡಿತವಾಗಿಯೂ ವಾರಕ್ಕೊಮ್ಮೆಯಾದರೂ ಬಾಳೆಹಣ್ಣು ತಿನ್ನಬೇಕು. ಬಾಳೆಹಣ್ಣಿನಲ್ಲಿ ಪೊಟ್ಯಾಸಿಯಮ್ ಫೈಬರ್ ವಿಟಮಿನ್ ಬಿ6 ಇರುತ್ತದೆ. ಇದು ವಾಕರಿಕೆ ಸಮಸ್ಯೆಯನ್ನು ಸಹ ತೆಗೆದುಹಾಕುತ್ತದೆ. ಇದು ದೇಹಕ್ಕೆ ಶಕ್ತಿಯನ್ನು ನೀಡುತ್ತದೆ ಮತ್ತು ಮಲಬದ್ಧತೆಯನ್ನು ಸಹ ತೆಗೆದುಹಾಕುತ್ತದೆ.

**ಕಿತ್ತಳೆ:** ವಿಟಮಿನ್ ಸಿ ಮತ್ತು ಫೋಲಿಕ್ ಆಮ್ಲ ಸಮೃದ್ಧವಾಗಿರುವ ಕಿತ್ತಳೆ, ದೇಹಕ್ಕೆ ಜಲಸಂಚಯನವನ್ನು ನೀಡುತ್ತದೆ ಮತ್ತು ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ. ಇದರಲ್ಲಿರುವ ವಿಟಮಿನ್ ಸಿ ಮತ್ತು ದೇಹದಲ್ಲಿ ಕಬ್ಬಿಣದ ಹೀರಿಕೊಳ್ಳುವಿಕೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

ಮಾವು: ಮಾವಿನ ಸೀಜನ್‌ನಲ್ಲಿ ಮಾವಿನಹಣ್ಣು ತಿನ್ನೋದು ಆರೋಗ್ಯಕರ. ಇದು ವಿಟಮಿನ್ ಎ ಮತ್ತು ವಿಟಮಿನ್ ಸಿ ಯಲ್ಲಿ ಸಮೃದ್ಧವಾಗಿದೆ ಮತ್ತು ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ.



# ಫ್ರಿಡ್ಜ್‌ನಿಂದ ತೆಗೆದು ತಕ್ಷಣ ಮೊಟ್ಟೆಗಳನ್ನು ಬೇಯಲು ಇಡಬಾರದು! ಯಾಕೆ ಗೊತ್ತಾ?



ಮೊಟ್ಟೆಗಳು ಆರೋಗ್ಯಕ್ಕೆ ಒಳ್ಳೆಯದು ಕೂಡ.ಹೀಗಾಗಿ ದಿನಾ ಒಂದು ಬೇಯಿಸಿದ ಮೊಟ್ಟೆ ತಿನ್ನಬೇಕು ಎನ್ನುವುದು ತಜ್ಞರ ಸಲಹೆ, ಆದರೆ ನಮ್ಮಲ್ಲಿ ಬಹುತೇಕರು ಮೊಟ್ಟೆ ಬೇಯಿಸುವಾಗ ಮಾಡುವ ಕೆಲವೊಂದು ತಪ್ಪುಗಳಿಂದಾಗಿ ಮೊಟ್ಟೆಯ ರುಚಿಯೇ ಹಾಳಾಗಿಬಿಡುತ್ತದೆ ನೋಡಲು ಗುಂಡಗೆ ಹಾಗೂ ಬೆಳ್ಳಗೆ ಇರುವ ಮೊಟ್ಟೆಗಳಲ್ಲಿ ಮನುಷ್ಯ ದೇಹದ ಅಗತ್ಯಕ್ಕೆ ಬೇಕಾಗುವಷ್ಟು ಪೌಷ್ಟಿಕ ಸತ್ವಗಳು ಕಂಡು ಬರುವುದರಿಂದ ಸಮತೋಲನ ಆಹಾರ ಪದ್ಧತಿಯಲ್ಲಿ ಮೊಟ್ಟೆಗಳಿಗೂ ಕೂಡ ವಿಶೇಷ ಸ್ಥಾನಮಾನ ನೀಡಲಾಗಿದೆ.ಪ್ರಮುಖವಾಗಿ ಮೊಟ್ಟೆಗಳಲ್ಲಿ ಪ್ರೋಟೀನ್ ಅಂಶ ಅಗಾಧ ಪ್ರಮಾಣದಲ್ಲಿ ಕಂಡು ಬರುವುದರ ಜೊತೆಗೆ ಹೃದಯದ ಆರೋಗ್ಯಕ್ಕೆ ಸಹಕಾರಿಯಾಗಿರುವ ಅಪರ್ಯಾಪ್ತ ಕೊಬ್ಬಿನ ಅಂಶಗಳು ಈ ಆಹಾರದಲ್ಲಿ ಅಗಾಧ ಪ್ರಮಾಣದಲ್ಲಿ ಸಿಗುತ್ತದೆ. ಹಾಗಾಗಿ ದಿನಾ ಒಂದು ಬೇಯಿಸಿದ ಮೊಟ್ಟೆ ತಿನ್ನಿ ಎಂದು ತಜ್ಞರು ಕೂಡ ಸಲಹೆ ನೀಡುತ್ತಾರೆ.

**ಮೊಟ್ಟೆ ಬೇಯಿಸುವಾಗ ಮಾಡಬಾರದ ಕೆಲವೊಂದು ತಪ್ಪುಗಳು:** ಅಗಾಧ ಪ್ರಮಾಣದಲ್ಲಿ ಪೋಷಕಾಂಶಗಳು ಇರುವ ಆಹಾರಗಳಲ್ಲಿ ಮೊಟ್ಟೆಯೂ ಕೂಡ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ. ನಮ್ಮಲ್ಲಿ ಹೆಚ್ಚಿನವರು ಮೊಟ್ಟೆಯನ್ನು ಬೇಯಿಸಿ ಅಥವಾ ಬೇಯಿಸಿದ ಮೊಟ್ಟೆಯಿಂದ ಅಡುಗೆ ಮಾಡಿ ಸೇವಿಸುವವರೇ ಹೆಚ್ಚು.

ಆದರೆ ಮೊಟ್ಟೆಯನ್ನು ಬೇಯಿಸುವಾಗ ಯಾವಾಗಲೂ ಅಂದುಕೊಂಡಷ್ಟು ಸುಲಭವಲ್ಲ! ಮೊಟ್ಟೆಗಳನ್ನು ಸರಿಯಾಗಿ ಬೇಯಿಸುವುದು ಹೇಗೆಂದು ತಿಳಿಯದ ಅನೇಕ ಜನರಿದ್ದಾರೆ. ಆಗಾಗ್ಗೆ ಜನರು ಮೊಟ್ಟೆಗಳನ್ನು ಬೇಯಿಸುವಾಗ ಕೆಲವೊಂದು



ತಪ್ಪುಗಳನ್ನು ಮಾಡುತ್ತಾರೆ.

ಉದಾಹರಣೆಗೆ ಮೊಟ್ಟೆ ಬೇಯಿಸುವಾಗ ಅದರ ಸಿಪ್ಪೆ ಒಡೆದು ಹೋಗುವುದು, ಅಥವಾ ಮೊಟ್ಟೆ ಬೇಯಿಸಲು ಸರಿಯಾದ ಪಾತ್ರೆಯನ್ನು ಬಳಸದೆ ಇರುವುದು ಇತ್ಯಾದಿ ಹಾಗಾದ್ರೆ ಮೊಟ್ಟೆಗಳನ್ನು ಸರಿಯಾಗಿ ಬೇಯಿಸುವ ವಿಧಾನ ಯಾವುದು ಮೊಟ್ಟೆ ಬೇಯಿಸು ವಾಗ ಏನೆಲ್ಲಾ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು ಎನ್ನುವು ದರ ಬಗ್ಗೆ ನೋಡೋಣ...

**ಫ್ರಿಡ್ಜ್‌ನಿಂದ ತೆಗೆದು ತಕ್ಷಣ ಮೊಟ್ಟೆಯನ್ನು ಬೇಯಿಸಲು ಹೋಗಬೇಡಿ:** ನಮ್ಮಲ್ಲಿ ಬಹುತೇಕರು ಮನೆಗೆ ಬೇಕಾಗುವ ದಿನಸಿ ಸಾಮಾನು ತೆಗೆದು ಕೊಳ್ಳುವ ಸಮಯದಲ್ಲಿ ಮೊಟ್ಟೆಗಳನ್ನು ಕೂಡ ಖರೀದಿಸುತ್ತಾರೆ. ಮನೆಗೆ ಬಂದ ಬಳಿಕ ಮೊಟ್ಟೆ ಬೇಗನೇ ಹಾಳಾಗಬಾರದು ಎನ್ನುವ ಕಾರಣಕ್ಕೆ ನೇರವಾಗಿ ಫ್ರಿಡ್ಜ್‌ನಲ್ಲಿ ಇಟ್ಟುಬಿಡುತ್ತಾರೆ. ಆದರೆ ನಿಮಗೆ ಗೊತ್ತಿರಲಿ ಮೊಟ್ಟೆಯನ್ನು ಫ್ರಿಡ್ಜ್ ನಿಂದ ತೆಗೆದು ತಕ್ಷಣ ಬೇಯಿಸಿದರೆ ಮೊಟ್ಟೆಯ ಸಿಪೆ ಬೇಗನೇ ಒಡೆದುಹೋಗಿ ಇದರ ರುಚಿಯೂ ಕೂಡ ಹಾಳಾಗುವ ಸಾಧ್ಯತೆ ಇರುತ್ತದೆ

ಹೀಗಾಗಿ ಮೊಟ್ಟೆ ಯನ್ನು ಫ್ರಿಡ್ಜ್ ನಿಂದ ತೆಗೆದ ಬಳಿಕ,ಕಿಚನ್ ನಲ್ಲಿ ಹಾಗೆಯೇ 15-20 ನಿಮಿಷ ಹಾಗೆಯೇ ಇಟ್ಟುಬಿಡಿ.

ಮನೆಯ ಸಾಮಾನ್ಯ ವಾತಾವರಣಕ್ಕೆ ಬರುವವರೆಗೆ ಹಾಗೆಯೇ ಇರಲಿ ಅಥವಾ ಫ್ರಿಡ್ಜ್‌ನಿಂದ ತೆಗೆದು ಒಂದರ್ಧ ಗಂಟೆ ಬಿಟ್ಟು ನಂತರ ಬಿಟ್ಟು ಮೊಟ್ಟೆಯ ಮೇಲಿನ ಶೀತವಾತಾವರಣ ಹೋದ ಬಳಿಕ ಬೇಯಿಸಿ. ಇದರಿಂದ ಮೊಟ್ಟೆ ಬೇಯುವಾಗ ಬಿರುಕು ಬಿಡುವುದು ತಪ್ಪುತ್ತದೆ. **ಮೊಟ್ಟೆಗಳನ್ನು ಬೇಯಿಸಲು ಬಳಸುವ ಪಾತ್ರೆ:** ಮೊಟ್ಟೆಗ್ಗಳನ್ನು ಬೇಯಿಸಲು ನೀವು ಸರಿಯಾದ ಪ್ಯಾನ್ ಅನ್ನು ಬಳಸುತ್ತಿದ್ದೀರಿ ಎಂದು ಯಾವಾಗಲೂ ಖಚಿತಪಡಿಸಿಕೊಳ್ಳಿ. ಉದಾಹರಣೆಗೆ, ಬೇಯಿಸಿದ ಮೊಟ್ಟೆಗಳು ಹೊರಪದರವನ್ನು ರೂಪಿಸಲು ಮತ್ತು ಸಂಪೂರ್ಣವಾಗಿ ನೀರಿನಿಂದ ಮುಚ್ಚಲು ಪ್ಯಾನ್‌ನಲ್ಲಿ ಸಾಕಷ್ಟು ಸ್ಥಳಾವಕಾಶ ಬೇಕಾಗುತ್ತದೆ.

ಮೊಟ್ಟೆಗಳನ್ನು ಬೇಯಿಸುವಾಗ, ಅವುಗಳಿಗೆ ಚಲಿಸಲು ಸಾಕಷ್ಟು ಸ್ಥಳಾವಕಾಶವಿರುವಂತೆ ಆಳವಿಲ್ಲದ ಪ್ಯಾನ್ ಅನ್ನು ಬಳಸಬೇಕು. ಸ್ಕ್ರಾಂಬಲ್ಡ್ ಮೊಟ್ಟೆಗಳಿಗೆ ಸಣ್ಣ ಹುರಿಯಲು ಪ್ಯಾನ್ ಅನ್ನು ಶಿಫಾರಸು ಮಾಡಲಾಗುತ್ತದೆ, ಏಕೆಂದರೆ ಇದು ಮೊಟ್ಟೆಗಳು ಸುಡುವುದನ್ನು ಅಥವಾ ಅತಿಯಾಗಿ ಬೇಯಿಸುವುದನ್ನು ತಡೆಯುತ್ತದೆ.

**ಮೊಟ್ಟೆ ಬೇಯಿಸಲು ತಗಲುವ ಸಮಯ :** ಕುದಿಸುವಾಗ ಹೆಚ್ಚು ಹೊತ್ತು ಕುದಿಯಲು ಬಿಟ್ಟರೆ, ಮೊಟ್ಟೆಯ ಚಿಪ್ಪುಗಳು ಬಿರುಕು ಬಿಡಬಹುದು ಮತ್ತು ಹಳದಿ ಲೋಳೆ ಕಂದು ಬಣ್ಣಕ್ಕೆ ತಿರುಗಬಹುದು. ಮೊಟ್ಟೆಗಳನ್ನು ಕುದಿಸಲು ಸರಿಯಾದ ಮಾರ್ಗವೆಂದರೆ ಮೊಟ್ಟೆಗಳನ್ನು ಕುದಿಸಿ ನಂತರ ಉರಿಯನ್ನು ಕಡಿಮೆ ಮಾಡುವುದು.

ಮೊಟ್ಟೆ ಸಂಪೂರ್ಣವಾಗಿ ಬೇಯಲು ಸುಮಾರು 10 ರಿಂದ 12 ನಿಮಿಷಗಳ ಕಾಲ ಬೇಕಾಗಬಹುದು. ಇನ್ನು ಮೊಟ್ಟೆ ಬೆಂದ ಬಳಿಕ ಅದನ್ನು ತಕ್ಷಣ ಬಿಸಿ ನೀರನಿಂದ ತೆಗೆದು ತಣ್ಣೀರಿನ ಪಾತ್ರೆಗೆ ಹಾಕಿಕೊಂಡು 3ರಿಂದ 4 ನಿಮಿಷಗಳ ಕಾಲ ಹಾಗೆಯೇ ಬಿಟ್ಟು, ನಂತರ ಅದರ ಸಿಪ್ಪೆ ತೆಗೆಯಿರಿ.

**ಎಗ್ ಭರ್ಜಿ ಮಾಡುವಾಗ:** ಎಗ್ ಭರ್ಜಿ ಮಾಡುವಾಗ, ಯಾವಾಗಲೂ ಕಡಿಮೆ ಉರಿಯಲ್ಲಿ ಬೇಯಿಸಿ. ಹೆಚ್ಚಿನ ಉರಿಯಲ್ಲಿ ಬೇಯಿಸುವುದರಿಂದ ಮೊಟ್ಟೆ ಬೇಯುತ್ತದೆ ಆದರೆ ಕಡಿಮೆ ಉರಿಯಲ್ಲಿ ಬೇಯಿಸಿದ ಮೊಟ್ಟೆಗಳಂತೆಯೇ ರುಚಿ ನೀಡುವುದಿಲ್ಲ.

> **ತಾಜಾ ಮೊಟ್ಟೆಗಳನ್ನು ಖರೀದಿಸಿ**
> **ಮೊಟ್ಟೆಗಳು ಬಿಳಿಯಾಗಿ ಕಾಣುತ್ತವೆ ಎಂದ ಮಾತ್ರಕ್ಕೆ ಅವು ತಾಜಾವಾಗಿವೆ ಎಂದರ್ಥವಲ್ಲ! ತಾಜಾ ಮೊಟ್ಟೆಗಳನ್ನು ಬೇಯಿಸಿ ಸೇವನೆ ಮಾಡುಬೇಕು. ಮೊಟ್ಟೆಗಳನ್ನು ಖರೀದಿಸುವ ಮೊದಲು ಪ್ಯಾಕೇಜಿಂಗ್ ಮತ್ತು ಸರಿಯಾದ ದಿನಾಂಕವನ್ನು ಪರಿಶೀಲಿಸಿ.**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ | 01:30 ರಿಂದ 39:00 |
| ಯಮಗಂಡ ಕಾಲ | ಮಧ್ಯಾಹ್ನ | 10:30 ರಿಂದ 12:00 |

**ಮೇಷ** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ನೀವು ಇಂದು ನಿಮಗೆ ನೀಡಲಾದ ಹೂಡಿಕೆಯ ಯೋಜನೆಗಳ ಬಗ್ಗೆ ಚೆನ್ನಾಗಿ ಆಲೋಚಿಸಬೇಕು. ಸ್ನೇಹಿತರು ಜೊತೆಗಿನ ಚಟುವಟಿಕೆಗಳು ಆಹ್ಲಾದಕರವಾಗಿರುತ್ತವೆ.

**ವೃಷಭ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ಆರ್ಥಿಕ ಸಮಸ್ಯೆ ರಚನಾತ್ಮಕವಾಗಿ ಯೋಚಿಸುವ ನಿಮ್ಮ ಸಾಮರ್ಥ್ಯವನ್ನು ಹಾಳುಮಾಡುತ್ತದೆ.

**ಮಿಥುನ** ಸಂತೃಪ್ತಿಯ ಜೀವನಕ್ಕಾಗಿ ನಿಮ್ಮ ಮಾನಸಿಕ ದೃಢತೆಯನ್ನು ಸುಧಾರಿಸಿ. ಆಸ್ತಿ ವ್ಯವಹಾರಗಳು ಅಸಾಧಾರಣ ಲಾಭ ತರುತ್ತವೆ. ಮನೆಯ ಸೌಂದರ್ಯದ ಜೊತೆಗೆ ಮಕ್ಕಳ ಅಗತ್ಯಗಳನ್ನೂ ನೋಡಿಕೊಳ್ಳಿ. ಮಕ್ಕಳಿಲ್ಲದ ಮನೆಗಳು ಕ್ರಮಬದ್ಧವಾಗಿದ್ದರೂ ಕೂಡ ಆತ್ಮವಿಲ್ಲದಂತಿರುತ್ತವೆ.

**ಕರ್ಕಾಟಕ** ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ಸಂಶಯಾಸ್ಪದ ಹಣಕಾಸು ವ್ಯವಹಾರಗಳಲ್ಲಿ ಸಿಲುಕಿಕೊಳ್ಳದಂತೆ ಎಚ್ಚರಿಕೆ ವಹಿಸಿ. ನಿಮ್ಮ ಮಕ್ಕಳ ಸಮಸ್ಯೆಗಳನ್ನು ನಿಭಾಯಿಸಲು ಸ್ವಲ್ಪ ಸಮಯ ತೆಗೆದುಕೊಳ್ಳಿ. ನಿಮ್ಮ ಪ್ರೀತಿಪಾತ್ರರಿಂದ ಕರೆ ಪಡೆಯುತ್ತೀರಿ.

**ಸಿಂಹ** ಯಶಸ್ಸು ಹತ್ತಿರವಿರುವಂತೆ ತೋರಿದರೂ ಸಹ ಶಕ್ತಿ ಕುಂಠಿತವಾಗುತ್ತದೆ. ಯಾವುದೇ ವ್ಯಕ್ತಿಯ ಸಹಾಯವಿಲ್ಲದೆ ನೀವು ಹಣವನ್ನು ಗಳಿಸಲು ಸಾಧ್ಯವಾಗುತ್ತದೆ. ನೀವು ನಿಮ್ಮ ಮೇಲೆ ನಂಬಿಕೆಯನ್ನಿಡುವ ಅಗತ್ಯವಿದೆ. ಒಂದು ಹಳೆಯ ಸಂಪರ್ಕ ನಿಮಗೆ ಕೆಲವು ಸಮಸ್ಯೆಗಳನ್ನು ಸೃಷ್ಟಿಸಬಹುದು.

**ಕನ್ಯಾ** ಮನರಂಜನೆ ಮತ್ತು ಮೋಜಿನ ಒಂದು ದಿನ. ಎಲ್ಲಾ ಬದ್ಧತೆಗಳು ಮತ್ತು ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು. ಮಕ್ಕಳು ಹೆಚ್ಚು ಗಮನ ಬಯಸಿದರೂ ಬೆಂಬಲ ಮತ್ತು ಕಾಳಜಿಯಿಂದ ವರ್ತಿಸುತ್ತಾರೆ. ಈ ದಿನ ನಿಮಗೆ ಗುಲಾಬಿಗಳ ಸುಗಂಧವನ್ನು ತರುತ್ತದೆ.

**ತುಲಾ** ತುಂಬಾ ಉತ್ಸಾಹ ಮತ್ತು ಸ್ಫೋಟಕ ಭಾವೋದ್ರೇಕಗಳು ನಿಮ್ಮ ನರಮಂಡಲಕ್ಕೆ ಹಾನಿ ಮಾಡಬಹುದು. ಇದನ್ನು ತಪ್ಪಿಸಲು ನಿಮ್ಮ ಭಾವನೆಗಳನ್ನು ನಿಯಂತ್ರಿಸಿ. ಇಂದು ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ ಆದರೆ ಇದರೊಂದಿಗೆ ನೀವು ನಿಮ್ಮ ಹಣವನ್ನು ವ್ಯರ್ಥವಾಗಿ ಖರ್ಚು ಮಾಡದಂತೆ ನೋಡಿಕೊಳ್ಳಬೇಕು.

**ವೃಶ್ಚಿಕ** ಲಕ್ಕವಿಲ್ಲದಷ್ಟು ಗಾಬರಿಗಳು ನಿಮ್ಮ ಪ್ರತಿರೋಧಕತೆ ಮತ್ತು ಆಲೋಚನಾ ಶಕ್ತಿಯನ್ನು ದುರ್ಬಲಗೊಳಿಸಬಹುದು. ಸಕಾರಾತ್ಮಕ ಚಿಂತನೆಯ ಜೊತೆ ಈ ರೋಗದ ವಿರುದ್ಧ ಹೋರಾಡಲು ಪ್ರಯತ್ನಿಸಿ. ಹಣದ ಪರಿಸ್ಥಿತಿ ದಿನದಲ್ಲಿ ನಂತರ ಸುಧಾರಿಸುತ್ತದೆ.

**ಧನಸ್ಸು** ನೀವು ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ಹಣಕಾಸಿನಲ್ಲಿ ಸುಧಾರಣೆ ನೀವು ಪ್ರಮುಖ ಖರೀದಿಗಳನ್ನು ಮಾಡುವುದನ್ನು ಅನುಕೂಲಕರವಾಗಿಸುತ್ತದೆ.

**ಮಕರ** ನಿಮ್ಮನ್ನು ನೀವೇ ಅನಗತ್ಯವಾಗಿ ದೂಷಿಸುವುದು ನಿಮ್ಮ ಚೈತನ್ಯವನ್ನು ಕುಗ್ಗಿಸಬಹುದು. ದುಂದುಗಾರಿಕೆ, ಸಂಶಯಾಸ್ಪದವಾದ ಹಣಕಾಸು ಯೋಜನೆಗಳನ್ನು ತಪ್ಪಿಸಿ. ಸ್ನೇಹಿತರು, ಕುಟುಂಬದ ಸದಸ್ಯರೊಡನೆ ಒಂದು ಸಂಜೆಯನ್ನು ಆಯೋಜಿಸಿ. ಸ್ಪಷ್ಟವಾಗಿ ಅರ್ಥಮಾಡಿ ಕೊಳ್ಳುವ ಮೂಲಕ ಮಾತ್ರ ನೀವು ನಿಮ್ಮ ಪತ್ನಿಗೆ ಭಾವನಾತ್ಮಕ ಬೆಂಬಲ ನೀಡಬಹುದು.


**ಕುಂಭ** ಆರೋಗ್ಯ ವಿಷಯಗಳಲ್ಲಿ ನಿಮ್ಮ ಬಗ್ಗೆ ನೀವೇ ನಿರ್ಲಕ್ಷ್ಯ ಮಾಡದಂತೆ ಎಚ್ಚರಿಕೆ ವಹಿಸಿ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ.

**ಮೀನ** ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ನಿಮ್ಮ ಹಠಮಾರಿ ಪ್ರಕೃತಿ ನಿಮ್ಮ ಪೋಷಕರ ಶಾಂತಿಯನ್ನು ಹಾಳು ಮಾಡಬಹುದು.

# ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯವರಿಗೆ ಪೌರ ಸನ್ಮಾನ: ಎಮ್. ಸಮೀವುಲ್ಲಾ

• **ಉದಯವಾಹಿನಿ ಅರಸೀಕೆರೆ**

ಕ್ಷೇತ್ರದ ಅಭಿವೃದ್ಧಿಗೆ ಸ್ಪಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾ ರ್ ಸೇರಿದಂತೆ ಸಚಿವರಿಗೆ ಹಾಗೂ ಗಣ್ಯರಿಗೆ ನಗರದ ಮಹಾಜನತೆ ಪರವಾಗಿ ನಗರಸಭೆ ಆಡಳಿತದಿಂದ ಜುಲೈ 26ರಂದು ಪೌರ ಸನ್ಮಾನ ಹಮ್ಮಿಕೊಳ್ಳಲಾಗಿದೆ ಎಂದು ನಗರಸಭೆ ಅಧ್ಯಕ್ಷ ಎಂ. ಸಮೀವುಲ್ಲಾ ಹೇಳಿದರು. ನಗರಸಭೆ ಸಭಾಂಗಣದಲ್ಲಿ ಶಾಸಕರು ಹಾಗೂ ರಾಜ್ಯ ಗೃಹ ಮಂಡಳಿ ಅಧ್ಯಕ್ಷರಾದ ಕೆ.ಎಂ. ಶಿವಲಿಂಗೇಗೌಡರ


☛ ಉದಯವಾಹಿನಿ ಚಿತ್ರ

ಉಪಸ್ಥಿತಿಯಲ್ಲಿ ನಡೆದ ವಿಶೇಷ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ನಗರದ ರೈಲ್ವೆ ನಿಲ್ದಾಣ ರಸ್ತೆ ಮತ್ತು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಹೊಂದಿಕೊಂಡಂತೆ ಇರುವ ನಗರಸಭೆ ಸ್ಥಳದಲ್ಲಿ ಜಗಜ್ಯೋತಿ ಬಸವೇಶ್ವರ ಪ್ರತಿಮೆ, ಸಂತ ಮೇರಿ ಶಾಲೆ ಬಳಿ ಕನಕದಾಸರ ಪ್ರತಿಮೆ ಸ್ಥಾಪಿಸಲಾಗುತ್ತಿದೆ.

ಕಂತೆನಹಳ್ಳಿಯ ಅರಸೀ ಉದ್ಯಾನವನದಲ್ಲಿ ನಿರ್ಮಾಣ ಮಾಡಿರುವ ನೂತನ ಈಜುಕೊಳ, ಸಂತೆ ಮೈದಾನದಲ್ಲಿ ನಿರ್ಮಾಣ ಮಾಡಿರುವ ವಾಣಿಜ್ಯ ಸಂಕೀರ್ಣ. ಯಾದಾಪುರ ರಸ್ತೆ ಬಲಭಾಗದ ಪ್ರದೇಶದಲ್ಲಿ

**ನೂತನ ಮನೆಗಳ ಹಸ್ತಾಂತರ**

ನಿರ್ಮಿಸಲಾದ ಜಿ-ಪ್ಲಸ್ ಒನ್ ಯೋಜನೆಯ 1188 ಮನೆಗಳ ಪೈಕಿ300 ಅರ್ಹರ ಫಲಾನುಭವಿಗಳಿಗೆ ನೂತನ ಮನೆಗಳ ಹಸ್ತಾಂತರ ಸಿಎಂಅವರಿಂದ ನಡೆಯಲಿದೆ.

ಈ ಎಲ್ಲಾ ಕಾರ್ಯಕ್ರಮಗಳು ಸೇರಿದಂತೆ ಇನ್ನಿತರೆ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ, ಮುಖ್ಯಮಂತ್ರಿ ಅವರ ಕಾರ್ಯ ಕ್ರಮ ಯಶಸ್ವಿ ಬಗ್ಗೆ ಸಮಾಲೋಚಿಸಲು ಇಂದು ವಿಶೇಷ ಸಭೆ ಕರೆಯಲಾಗಿದೆ ಎಂದರು.

# ಅಪರಾಧ ತಡೆಗೆ ಸಾರ್ವಜನಿಕರ ಸಹಕಾರ ಅಗತ್ಯ

## ■ ಪೊಲೀಸ್ ಬೀಟ್ ವ್ಯವಸ್ಥೆ ಮತ್ತಷ್ಟು ಪರಿಣಾಮಕಾರಿ ಜಾರಿ

• **ಉದಯವಾಹಿನಿ, ಚಿತ್ರದುರ್ಗ**

ಮನೆ ಮನೆಗೆ ಪೊಲೀಸ್ ಕಾರ್ಯಕ್ರಮ ಅತ್ಯುತ್ತಮ ವ್ಯವಸ್ಥೆ ಆಗಿದೆ. ಸಾರ್ವಜನಿಕರು ಇದಕ್ಕೆ ಬೆಂಬಲ ನೀಡಬೇಕು. ಪೊಲೀಸ್ ಇಲಾಖೆ ನೀಡುವ ಸಲಹೆ ಸೂಚನೆಗಳನ್ನು ಪಾಲಿಸಬೇಕು. ಅಪರಾಧಗಳನ್ನು ತಡೆಯಲು ಪೊಲೀಸರಿಗೆ ಸಾರ್ವಜನಿರ ಸಹಕಾರ ಅಗತ್ಯವಾಗಿದೆ ಎಂದು ಯೋಜನೆ, ಸಾಂಖ್ಯಿಕ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಹೇಳಿದರು. ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಭಾನುವಾರ ಪೊಲೀಸ್ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ಮನೆ ಮನೆಗೆ ಪೊಲೀಸ್ ವ್ಯವಸ್ಥೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದಲ್ಲೇ ವಿನೂತನವಾದ ಮನೆ ಮನೆಗೆ ಪೊಲೀಸ್ ಎನ್ನುವ ಪ್ರಯೋಗವನ್ನು ರಾಜ್ಯ ಪೊಲೀಸ್ ಇಲಾಖೆ ಮಾಡುತ್ತಿದೆ. ಇದನ್ನು ಯಶಸ್ವಿಗೊಳಿಸುವುದು ಪೊಲೀಸರಿಗೆ ಸವಾಲಿನ ಕೆಲಸವಾಗಿದೆ. ಪ್ರತಿಯೊಂದು ತಾಲ್ಲೂಕಿನಲ್ಲೂ 70 ರಿಂದ 80 ಸಾವಿರ ಮನೆಗಳು ಇವೆ. ಬೀಟ್ ಪೊಲೀಸರು ತಮ್ಮ ವ್ಯಾಪ್ತಿಯ ಪ್ರತಿ ಮನೆಯ ವಿವರಗಳನ್ನು ಸಂಗ್ರಹಿಸಿ ಎಲ್ಲಾ ರೀತಿಯ ಅಪರಾಧ ಕೃತ್ಯ ತಡೆಯಲು ಜಾಗರೂಕರಾಗಿರಬೇಕು. ಈ ನಿಟ್ಟಿನಲ್ಲಿ ಜಿಲ್ಲೆಯ ಪೊಲೀಸರು ಸಮರ್ಥವಾಗಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಬೇಕು ಎಂದು ಸಚಿವ ಡಿ.ಸುಧಾಕರ್ ಹೇಳಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಮಾತನಾಡಿ, ಪೊಲೀಸ್ ಬೀಟ್ ವ್ಯವಸ್ಥೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿ ಮಾಡಲು ಮನೆ ಮನೆಗೆ ಪೊಲೀಸ್ ಎನ್ನುವ ಕಾರ್ಯಕ್ರಮ ಜಾರಿ ಮಾಡಲಾಗಿದೆ. ಪ್ರತಿ ಪೊಲೀಸ್ ಠಾಣೆ ವ್ಯಾಪ್ತಿಯ ಸರಹದ್ದನ್ನು ಬೀಟ್‌ಗಳನ್ನಾಗಿ, ನಂತರ ಈ ಬೀಟ್‌ಗಳನ್ನು ಸಬ್‌ಬೀಟ್‌ಗಳನ್ನಾಗಿ ವಿಂಗಡಿಸಲಾಗುವುದು. ಪ್ರತಿ ಸಬ್ ಬೀಟ್‌ನಲ್ಲಿ 40 ರಿಂದ 50 ಮನೆಗಳನ್ನು ಒಳಗೊಂಡ ಕ್ಲಸ್ಟರ್‌ಗಳ ರಚನೆ ಮಾಡಲಾಗುವುದು. ಕ್ಲಸ್ಟರ್‌ಗೆ ನೇಮಿಸಿದ ಪೊಲೀಸ್ ಸಿಬ್ಬಂದಿ ಬೀಟ್ ವೇಳೆ ಪ್ರತಿ ಮನೆಗಳಿಗೂ ಭೇಟಿ ನೀಡುತ್ತಾರೆ.

**ಮನೆ ಮನೆಗೆ ಪೊಲೀಸ್**

ಈ ವೇಳೆ ಮನೆಗಳಲ್ಲಿ ಕಂಡುಬರುವ ಸಮಸ್ಯೆಗಳನ್ನು ಗುರುತಿಸಿ, ಠಾಣೆಯ ನೊಂದಣಿ ಪುಸ್ತಕದಲ್ಲಿ ನಮೂದಿಸುತ್ತಾರೆ. ಏನಾದರೂ ದೊಡ್ಡ ಸಮಸ್ಯೆಗಳು ಇದ್ದರೇ ಪೊಲೀಸ್ ಇನ್ಸ್‌ಪೆಕ್ಟರ್ ಭೇಟಿ ನೀಡಿ ಪರಿಶೀಲಿಸಿ, ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಾರೆ ಎಂದರು. ಜಿಲ್ಲೆಯಲ್ಲಿ ನಮ್ಮ ನಡೆ ಜಾಗೃತಿ ಕಡೆಗೆ ಎನ್ನುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಶಾಲಾ ಕಾಲೇಜು ವಿದ್ಯಾರ್ಥಿಗಳು, ಸರ್ಕಾರಿ ಅಧಿಕಾರಿಗಳಲ್ಲಿ ಅಪರಾಧ ಕೃತ್ಯಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಈ ಕಾರ್ಯಕ್ರಮದಲ್ಲಿ ಪೊಲೀಸರ ಬಗ್ಗೆ ಸಾರ್ವಜನಿಕರು ಉತ್ತಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ದೇಶದ ಭದ್ರತೆ, ಮಹಿಳೆ, ಮಕ್ಕಳ ರಕ್ಷಣೆ ಬರೀ ಪೊಲೀಸರ ಕರ್ತವ್ಯವಲ್ಲ ಪ್ರತಿಯೊಬ್ಬ ನಾಗರಿಕರು ಸಹ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.ಇದೇ ಸಂದರ್ಭದಲ್ಲಿ ಕಳುವಾದ ಮೊಬೈಲ್‌ಗಳನ್ನು ವಾರಸುದಾರರಿಗೆ ಹಿಂದಿರುಗಿ ಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಸಿಇಒ ಎಸ್. ಜೆ.ಸೋಮಶೇಖರ್, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಹೆಚ್ಚುವರಿ ಪೊಲೀಸ್ ವರಷ್ಠಾಧಿಕಾರಿ ಉಮೇಶ್ ಈಶ್ವರ್ ನಾಯ್ಕ್, ಪೊಲೀಸ್ ಉಪಾಧೀಕ್ಷರಾದ ಪಿ.ಕೆ.ದಿನಕರ್, ರಾಜಣ್ಣ, ಶಿವಕುಮಾರ್, ಶ್ರೀನಿವಾಸ ಸೇರಿದಂತೆ ಪೊಲೀಸ್ ಅಧಿಕಾರಿಗಳು, ಸಾರ್ವಜನಿಕರು ಇದ್ದರು.



☛ ಉದಯವಾಹಿನಿ ಚಿತ್ರ

> ಪೊಲೀಸ್ ಇಲಾಖೆಯನ್ನು ಜನಸ್ನೇಹಿಯಾಗಿಸುವುದರ ಜೊತೆಗೆ, ಸಾರ್ವಜನಿಕರಲ್ಲಿ ಕಾಯ್ದೆ ಕಾನೂನುಗಳ ಕುರಿತು ಜಾಗೃತಿ ಸಹ ಮೂಡಿಸಲಾಗುವುದು. ಇದರೊಂದಿಗೆ ಏರಿಯಾದ ಮನೆಗಳಲ್ಲಿ ಹೆಚ್ಚಿನ ರಕ್ಷಣಾ ವ್ಯವಸ್ಥೆ ಅಳವಡಿಸಿಕೊಳ್ಳಲು ಪೊಲೀಸರು ಸಲಹೆಯನ್ನು ಸಹ ನೀಡುತ್ತಾರೆ. ಪೊಲೀಸರು ಜನರ ರಕ್ಷಣೆಗಾಗಿ ಇದ್ದಾರೆ. ಅಪರಾಧ ಕೃತ್ಯಗಳಲ್ಲಿ ತೊಡಗಿದವರು ಮಾತ್ರ ಪೊಲೀಸರನ್ನು ಕಂಡರೆ ಭಯ ಪಡಬೇಕು. ಸಾಮಾನ್ಯ ಜನರಲ್ಲಿ ಪೊಲೀಸರನ್ನು ಕಂಡರೆ ವಿಶ್ವಾಸ ಹಾಗೂ ಧೈರ್ಯ ಮೂಡಬೇಕು. ಜನರು ಏನೇ ಸಮಸ್ಯೆಗಳು ಹಾಗೂ ಮಾಹಿತಿಯನ್ನು ಪೊಲೀಸರೊಂದಿಗೆ ಮುಕ್ತವಾಗಿ ಹಂಚಿಕೊಳ್ಳಬೇಕು. ಮನೆ ಮನೆಗೆ ಪೊಲೀಸ್ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಸಾರ್ವಜನಿಕರು ಹಾಗೂ ಪೊಲೀಸ್ ಅಧಿಕಾರಿಗಳ ಮನೋಭಾವ ಕೂಡ ಬದಲಾಗಬೇಕು.
>
> -ರಂಜಿತ್ ಕುಮಾರ್ ಬಂಡಾರು, ಪೊಲೀಸ್ ವರಿಷ್ಠಾಧಿಕಾರಿ

### ಪೊಲೀಸ್ ಇಲಾಖೆ ಬಲಪಡಿಸಲು ಸಿದ್ಧ

ಪೊಲೀಸ್ ಇಲಾಖೆ ಬಲಪಡಿಸಲು ರಾಜ್ಯ ಸರ್ಕಾರ ಎಲ್ಲಾ ಅಗತ್ಯ ರೀತಿಯ ಕ್ರಮಗಳನ್ನು ಕೈಗೊಂಡಿದೆ. ಜಿಲ್ಲೆಯಲ್ಲಿ ಶಾಸಕರ ಅನುದಾನದಲ್ಲಿ 16 ವಾಹನಗಳನ್ನು ಪೊಲೀಸ್ ಇಲಾಖೆಗೆ ನೀಡಲಾಗಿದ್ದು, ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರದಲ್ಲಿ ಪೊಲೀಸ್ ಅಧಿಕಾರಿಗಳ ವಸತಿ ಗೃಹ ನಿರ್ಮಾಣ ಮಾಡುವಂತೆ ಕೋರಿದು, ಮುಂಬರುವ ಆಯವ್ಯಯದಲ್ಲಿ ಅನುದಾನ ನೀಡುವುದಾಗಿ ಗೃಹ ಸಚಿವರು ಭರವಸೆ ನೀಡಿದ್ದಾರೆ.

-ಡಿ.ಸುಧಾಕರ್, ಸಚಿವ

## ಹುಟ್ಟುಹಬ್ಬ ನಿಮಿತ್ತ: ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣುಹಂಪಲು ವಿತರಣೆ


☛ ಉದಯವಾಹಿನಿ ಚಿತ್ರ

• **ಉದಯವಾಹಿನಿ,ಚಿಂಚೋಳಿ**

ಪಟ್ಟಣದ ಚಂದಾಪೂರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಜಿಲ್ಲಾ ವೀರಶೈವ ಸಮಾಜದ ಅಧ್ಯಕ್ಷ ಅರುಣಕುಮಾರ ಎಸ್.ಪಾಟೀಲ ಕೊಡಲಹಂಗರಗಾ ಅವರ ಹುಟ್ಟುಹಬ್ಬದ ಅಂಗವಾಗಿ ತಾಲ್ಲೂಕಾ ವೀರಶೈವ ಸಮಾಜದ ಅಧ್ಯಕ್ಷ ಸಂಜೀವಕುಮಾರ ಪಾಟೀಲ ನೇತೃತ್ವದಲ್ಲಿ ಆಸ್ಪತ್ರೆಯಲ್ಲಿ ಬಡರೋಗಿಗಳಿಗೆ ಹಣ್ಣು ಹಂಪಲುಗಳನ್ನು ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಬಡಿದರ್ಗಾದ ಸಜ್ಜಾದೆ ನಶೀನ ಸೈಯದ್ ಅಕ್ಬರ್ ಹುಸೈನಿ, ಟಿಹೆಚ್‌ಓ ಡಾ.ಮಹ್ಮುದ್ ಗಫಾರ್, ರಮೇಶ ಪಡಶೆಟ್ಟಿ, ವೀರೇಶ ದೇಸಾಯಿ, ಪ್ರದೀಪ ದೇಶಮುಖ, ರೇವಣಸಿದ್ದಪ್ಪ ದಾದಾಪುರ, ವಿಜಯಕುಮಾರ ಬಳಕೇರಿ, ಚಂದ್ರಶೇಖರ್ ಪಾರಾ, ಜಗದೀಶ್ವ ಸಜ್ಜನ, ಪವನ ಪಾಟೀಲ, ದಯಾನಂದ ಹಿತ್ತಲ, ಈಶ್ವರಪ್ಪ ಕಲಶೆಟ್ಟಿ, ಸುನೀಲ ಕಾಳಗಿ, ಮಲ್ಲಿನಾಥ ಮೇಲಗಿರಿ, ಚೇತನ ಹುಡದಳ್ಳಿ, ರೇವಣಸಿದ್ದಪ್ಪ ತಡಕಲ್ ಅನೇಕರಿದ್ದರು.

## ಭಾರಿ ಮಳೆಗೆ ತುಂಬಿ ಹರಿದ ಹಳ್ಳ, ಕೃಷಿಹೊಂಡ

• **ಉದಯವಾಹಿನಿ, ನರೇಗಲ್**

ಪಟ್ಟಣ, ಹೋಬಳಿಯಾದ್ಯಂತ ಭಾರಿ ಮಳೆಯಾಗಿದೆ. ಬೆಳಿಗ್ಗೆಯಿಂದ ಬಿಸಿಲಿನ ವಾತಾವರಣ ನಿರ್ಮಾಣವಾಗಿತ್ತು, ಸಂಜೆ 4:30 ಗಂಟೆಗೆ ಆರಂಭವಾದ ಮಳೆ ಎರಡು ತಾಸು ಜೋರಾಗಿ ಸುರಿದಿದೆ. ನಂತರ ಸ್ವಲ್ಪ ಹೊತ್ತಿನ ನಂತರ ಮತ್ತೇ ಬಿಟ್ಟುಬಿಡದೆ ಜೋರಾಗಿ ಸುರಿದಿದೆ. ಎಲ್ಲೆಡೆ ಹೊಲಗಳಲ್ಲಿ ನೀರು ತುಂಬಿದೆ.

ಗಡ್ಡಿ ಹಳ್ಳ, ಕಲ್ಲಹಳ್ಳ, ಮಾರನಬಸರಿ ಹಳ್ಳ, ಅಬ್ಬಿಗೇರಿ ಹಳ್ಳ, ಜಕ್ಕಲಿ ಅಗಸರ ಹಳ್ಳಿ, ಹಾಲಕೆರೆ ಹಳ್ಳ, ಹಾಗೂ ನಿಡಗುಂದಿ-ಸಂಕನೂರ ಕ್ರಾಸ್ ನಡುವಿನ ಹಳ್ಳ ಸೇರಿದಂತೆ ಇತರೆ ಕಡೆಯ ಹಳ್ಳಗಳು ತುಂಬಿಹರಿದಿವೆ. ಕೃಷಿ ಹೊಂಡಗಳಲ್ಲೂ ನೀರು ಹರಿದು ಬಂದಿದೆ. ಜಕ್ಕಲಿ ಮಾರ್ಗದ ಕಣಿವೆ, ತೋಟಗಂಟಿ ಕಣಿವೆ, ಜಕ್ಕಲಿ ಕಣಿವೆಗಳಲ್ಲಿ ನೀರು ಬಂದಿದೆ. ಹೊಲಗಳಲ್ಲಿ ನೀರಿನ ರಭಸಕ್ಕೆ ಬದುಗಳು ಒಡೆದು ಹೋಗಿವೆ. ಮುಂಗಾರು ಹಂಗಾಮಿನ ಹೆಸರು ಬೆಳೆ ನೀರಿನಲ್ಲಿ ನಿಂತಿವೆ.

## ಶಾ.ಮಂ.ಕೃಷ್ಣರಾಯಗೆ ಕನ್ನಡ ಪ್ರಪಂಚ 'ಪಾಪು' ಪ್ರಶಸ್ತಿ

• **ಉದಯವಾಹಿನಿ, ಧಾರವಾಡ**

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘ ನೀಡುವ ಸಿರಿಗನ್ನಡಂಗೆಲ್ಲೆ ರಾ.ಹ.ದೇಶಪಾಂಡೆ ಪ್ರಶಸ್ತಿಗೆ ಹಾವೇರಿಯ ಗೆಳೆಯರ ಬಳಗ, ಕನ್ನಡ ಪ್ರಪಂಚ ಪಾಟೀಲ ಪುಟ್ಟಪ್ಪ ಪ್ರಶಸ್ತಿಗೆ ಪತ್ರಕರ್ತ ಶಾ.ಮಂ.ಕೃಷ್ಣರಾಯ ಆಯ್ಕೆಯಾಗಿದ್ದಾರೆ. ಎರಡೂ ಪ್ರಶಸ್ತಿಗಳು ತಲಾ 50 ಸಾವಿರ ನಗದು, ಫಲಕ ಒಳಗೊಂಡಿವೆ. ರಾ.ಹ.ದೇಶಪಾಂಡೆ ಪ್ರಶಸ್ತಿಯನ್ನು ಜುಲೈ 20ರಂದು ಸಂಘದ ಸಂಸ್ಥಾಪನಾ ದಿನಾಚರಣೆ ಉದ್ಘಾಟನೆ ಸಮಾರಂಭದಲ್ಲಿ, ಕನ್ನಡ ಪ್ರಪಂಚ ಪಾಟೀಲ ಪುಟ್ಟಪ್ಪ ಪ್ರಶಸ್ತಿಯನ್ನು ಜು. 26ರಂದು ಸಮಾರೋಪ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು ಎಂದು ತಿಳಿಸಲಾಗಿದೆ.

# ಗೋಕಾಕ ಜಿಲ್ಲಾ ರಚನೆಗೆ ಒತ್ತಾಯ: ಸಿಎಂ ಭೇಟಿಗೆ ಸಮಯ ನಿಗದಿಗೆ ಮನವಿ

• **ಉದಯವಾಹಿನಿ. ಗೋಕಾಕ**

ನೂತನ ಗೋಕಾಕ ಜಿಲ್ಲಾ ಕೇಂದ್ರ ರಚನೆ ವಿಚಾರವಾ ಮುಖ್ಯಮಂತ್ರಿಗಳೊಂದಿಗೆ ನಿಯೋಜಿತ ಗೋಕಾಕ ಜಿಲ್ಲಾ ಹೋರಾಟ ಚಾಲನಾ ಸಮಿತಿ ಪದಾಧಿಕಾರಿಗಳನ್ನು ಭೇಟಿ ಮಾಡಿಸಲು ಕೂಡಲೇ ಸಮಯಾವಕಾಶ ಕಲ್ಪಿಸಿ ಕೊಡುವುದಾಗಿ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಭರವಸೆ ನೀಡಿದರು. ಇಲ್ಲಿನ ಹಿಲ್ ಗಾರ್ಡನದಲ್ಲಿ ತಮ್ಮನ್ನು ಭೇಟಿ ಮಾಡಿದ ನಿಯೋಜಿತ ನೂತನ ಗೋಕಾಕ ಜಿಲ್ಲಾ ಚಾಲನಾ ಸಮಿತಿ ಸದಸ್ಯರ ಪರವಾಗಿ ಸಮಿತಿ ಅಧ್ಯಕ್ಷರೂ ಆಗಿರುವ ಶೂನ್ಯ ಸಂಪಾದನಮಠದ ಪೀಠಾಧಿಪತಿ ಮುರುಘರಾಜೇಂದ್ರ ಸ್ವಾಮೀಜಿ, ವಕೀಲರ ಸಂಘದ ಪದಾಧಿಕಾರಿಗಳು ಹಾಗೂ ರಾಜಕೀಯ ಮುಖಂಡ ಅಶೋಕ ಪೂಜಾರಿ ಅವರು ಜಂಟಿಯಾಗಿ ಸಲ್ಲಿಸಿದ ಮನವಿ ಪತ್ರ ಸ್ವೀಕರಿಸಿ ಅವರು ಮಾತನಾಡಿದರು. ಅತಿ ಶೀಘ್ರವೇ ಭೇಟಿಯ ಸಮಯ ನಿಗದಿಗೆ ಯತ್ನಿಸುತ್ತೇನೆ ಎಂದು ಸತೀಶ ಜಾರಕಿಹೊಳಿ ತಿಳಿಸಿದರು.


☛ ಉದಯವಾಹಿನಿ ಚಿತ್ರ

> ಸಿಎಂ ಸಮಯ ನಿಗದಿಯೊಂದಿಗೆ ನೂತನ ಗೋಕಾಕ ಜಿಲ್ಲಾ ಕೇಂದ್ರ ರಚನೆ ಮಾಡುವುದರಲ್ಲೂ ನೀವು ಅಷ್ಟೇ ನಿರ್ಣಾಯಕ ಪಾತ್ರ ವಹಿಸಿಕೊಳ್ಳಬೇಕು ಎಂದು ನಿಯೋಗದ ಪರ ಒಕ್ಕೊರಲಿನ ಮನವಿ ಮಾಡಿಕೊಂಡರು.
>
> -ಅಶೋಕ ಪೂಜಾರಿ

# ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷ ನಗರಕ್ಕೆ ಆಗಮನ ಅದ್ದೂರಿ ಸ್ವಾಗತ ಮಾಡಿಕೊಂಡ ಪಕ್ಷದ ಮುಖಂಡರು

• **ಉದಯವಾಹಿನಿ, ಸಿಂಧನೂರು**

ಬಿಜೆಪಿ ಪಕ್ಷದ ನೇತೃತ್ವದ ಕೇಂದ್ರ ಸರ್ಕಾರದ 11 ವರ್ಷಗಳ ಸುದೀರ್ಘ ಕಾಲ ಪ್ರಧಾನಿ ನರೇಂದ್ರ ಮೋದಿ ಅವರು ಜನಪರವಾದ ಆಡಳಿತ ನೀಡಿದ ಸಾಧನ ಸಮಾವೇಶ ಹಿನ್ನೆಲೆಯಲ್ಲಿ ಕೊಪ್ಪಳ, ರಾಯಚೂರು, ಬಳ್ಳಾರಿ ಜಿಲ್ಲೆಯಲ್ಲಿ ಹೆಮ್ಮೆ ಹಾಕಿಕೊಂಡಿದ್ದು ಸಮಾವೇಶಕ್ಕೆ ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಸಿಂಧನೂರು ನಗರದ ಮಾರ್ಗವಾಗಿ ಹೋಗವ ಸಂದರ್ಭದಲ್ಲಿ ನಗರದ ಪ್ರವಾಸಿ ಮಂದಿರದಲ್ಲಿ ಹೂವಿನ ಹಾರ ಹಾಕಿ ಪಟಾಕಿ ಸಿಡಿಸಿ ಜೈ ಶ್ರೀರಾಮ್ ಜೈ ಬಿಜೆಪಿ ಜೈ ವಿಜಯೇಂದ್ರ ಅಂತ ಘೋಷಣೆ ಕೂಗುತ್ತಾ ಸಿಂಧನೂರು ಬಿಜೆಪಿ ಮುಖಂಡ ಕೆ. ಕರಿಯಪ್ಪ ನವರು ಹಾಗೂ ನಗರದ ಮತ್ತು ಗ್ರಾಮೀಣ ಭಾಗದ ಬಿಜೆಪಿ ಮಂಡಳಿಯ ಅಧ್ಯಕ್ಷರು ಸದಸ್ಯರು ಪಕ್ಷದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಿ ಅದ್ದೂರಿಯಾಗಿ ಸ್ವಾಗತ ಮಾಡಿಕೊಂಡರು

ಈ ಸಂದರ್ಭದಲ್ಲಿ. ರಾಯಚೂರು ಜಿಲ್ಲೆಯ


☛ ಉದಯವಾಹಿನಿ ಚಿತ್ರ

ಶಾಸಕರು ಡಾ.ಶಿವರಾಜ ಪಾಟೀಲ್. ಮಸ್ಕಿ ಕ್ಷೇತ್ರದ ಮಾಜಿ ಶಾಸಕ ಪ್ರತಾಪ್ ಗೌಡ ಪಾಟೀಲ್ ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಆದಿಮನಿ ವಿಜಯಲಕ್ಷ್ಮಿ ಪರಮೇಶ್ ಒಬಿಸಿ ಜಿಲ್ಲಾ ಘಟಕದ ಅಧ್ಯಕ್ಷ ಕೆ. ಹನುಮೇಶ ಕುರುಕುಂದಿ. ಸಿಂಧನೂರು ನಗರ ಘಟಕದ ಅಧ್ಯಕ್ಷ ಸಿದ್ದರಾಮಶ ಮನ್ನಾಪುರ. ಗ್ರಾಮೀಣ ಘಟಕದ ಅಧ್ಯಕ್ಷ ವೆಂಕೋಬ ನಾಯಕ್ ಹಾಗೂ ರಾಮತ್ನಾಳ ಭಾಗದ ಅಭಿಮಾನಿಗಳು ಸಂಘದ ಸದಸ್ಯರು ಹಾಗೂ ಬಿಜೆಪಿ ಪಕ್ಷದ ಕಾರ್ಯಕರ್ತರ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# 6.90 ಲಕ್ಷ ಮೌಲ್ಯದ 23 ಕೆ.ಜಿ ಮಾದಕವಸ್ತು ವಶ

• **ಉದಯವಾಹಿನಿ, ಬೆಳಗಾವಿ**

ಇಲ್ಲಿನ ಉದ್ಯಮಬಾಗ್ ಕೈಗಾರಿಕಾ ಪ್ರದೇಶದಲ್ಲಿ ಗಾಂಜಾ ಸಾಗಿಸುತ್ತಿದ್ದ ಆರೋಪದ ಮೇಲೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ತಾಲ್ಲೂಕಿನ ಮಚ್ಚೆಯ ಆಕಾಶ ದೊಡಮನಿ, ನಿಖಿಲ್ ಸೋಮಜಿಚೆ, ವೀರೇಶ ಹಿರೇಮಠ ಬಂಧಿತರು. ಅವರಿಂದ 6.90 ಲಕ್ಷ ಮೌಲ್ಯದ 23.84 ಕೆ.ಜಿ ಗಾಂಜಾ, 3 ಲಕ್ಷ ಮೌಲ್ಯದ ಕಾರು, 2 ಸಾವಿರ ಮೌಲ್ಯದ ಎರಡು ಮೊಬೈಲ್, 1,100 ನಗದು ವಶಕ್ಕೆ ಪಡೆಯಲಾಗಿದೆ.

ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ 2023ರಲ್ಲಿ 23 ದಾಳಿ ನಡೆಸಿ 12 ಕೆ.ಜಿ, 2024ರಲ್ಲಿ 25 ದಾಳಿ ನಡೆಸಿ 11 ಕೆ.ಜಿ ಗಾಂಜಾ ವಶಕ್ಕೆ ಪಡೆದಿದ್ದೆವು. ಆದರೆ, ಉದ್ಯಮಬಾಗ್ ಇನ್‌ಸ್ಪೆಕ್ಟರ್ ಡಿ.ಕೆ.ಪಾಟೀಲ ನೇತೃತ್ವದ ತಂಡ ಇದೊಂದೇ ಪ್ರಕರಣದಲ್ಲಿ 23 ಕೆ.ಜಿಗಿಂತ ಹೆಚ್ಚಿನ ಗಾಂಜಾ ವಶಕ್ಕೆ ಪಡೆದಿದೆ. ಇತ್ತೀಚಿನ ವರ್ಷಗಳಲ್ಲೇ ನಡೆದ ದೊಡ್ಡ ದಾಳಿ ಇದಾಗಿದೆ ಎಂದು ಪೊಲೀಸ್ ಕಮಿಷನರ್ ಭೂಷಣ ಬೊರಸೆ ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮಾದಕವಸ್ತುಗಳ ಹಾವಳಿಯಿಂದ ದೂರ ಇರುವ ಕುರಿತಾಗಿ ಕಾಲೇಜುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಜಾಗೃತಿ ಮೂಡಿಸಲಿದ್ದೇವೆ. ಪ್ರತಿ ಕಾಲೇಜಿನಲ್ಲಿ 'ಆ್ಯಂಟಿ ಡ್ರಗ್ ಕಮಿಟಿ ರಚಿಸುವಂತೆಯೂ ತಿಳಿಸುತ್ತೇವೆ ಎಂದರು.

ಇತ್ತೀಚಿನ ದಿನಗಳಲ್ಲಿ ಯುವಜನರು ಹೆಚ್ಚಾಗಿ ಮಾದಕವಸ್ತು ಸೇವಿಸುತ್ತಿದ್ದಾರೆ. ಹಾಗಾಗಿ ಪಾಲಕರು ತಮ್ಮ ಮಕ್ಕಳ ಆರೋಗ್ಯ, ವರ್ತನೆ ಮೇಲೆ ನಿಗಾ ಇರಿಸಬೇಕು. ನಗರದಲ್ಲಿ ಯಾವುದೇ ಸ್ಥಳದಲ್ಲಿ ಮಾದಕವಸ್ತು ಮಾರುತ್ತಿರುವುದು ಕಂಡುಬಂದರೆ ಸಾರ್ವಜನಿಕರು ನಮಗೆ ಮಾಹಿತಿ ನೀಡಬೇಕು ಎಂದು ಕೋರಿದರು.


☛ ಉದಯವಾಹಿನಿ ಚಿತ್ರ

> ಮಹಾರಾಷ್ಟ್ರದಿಂದ ಬರುತ್ತಿದ್ದ ಗಾಂಜಾ ಈ ಆರೋಪಿಗಳ ಮೂಲಕ ಇಡೀ ನಗರಕ್ಕೆ ಪೂರೈಕೆಯಾಗುತ್ತಿತ್ತು. ಕಾಲೇಜು ವಿದ್ಯಾರ್ಥಿಗಳೇ ಅವರ ಟಾರ್ಗೆಟ್ ಆಗಿದ್ದರು ಎಂಬ ಸುಳಿವು ಪ್ರಾಥಮಿಕ ತನಿಖೆಯಲ್ಲಿ ಸಿಕ್ಕಿದೆ. ಹೆಚ್ಚಿನ ಮಾಹಿತಿ ಕಲೆಹಾಕಲು ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದೇವೆ ಎಂದು ತಿಳಿಸಿದರು.

### ಮೂವರ ಬಂಧನ

2025ರಲ್ಲಿ ಜುಲೈ 20ರವರೆಗೆ 21 ದಾಳಿ ನಡೆಸಿ 45 ಆರೋಪಿಗಳನ್ನು ಬಂಧಿಸಿದ್ದು, 40 ಕೆ.ಜಿ ಮಾದಕವಸ್ತು ವಶಕ್ಕೆ ಪಡೆದಿದ್ದೇವೆ. ಗಾಂಜಾ ಸಾಗಿಸುವವರು, ಮಾರುವವರು ಮಾತ್ರವಲ್ಲ; ಸೇವಿಸುವವರನ್ನೂ ಬಂಧಿಸುತ್ತಿದ್ದೇವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಸರ್ಕಾರದ ಸಾಧನೆ ತಿಳಿಸುವ ಸಮಾವೇಶ

• **ಉದಯವಾಹಿನಿ, ಹುಬ್ಬಳ್ಳಿ**

ಮೈಸೂರಿನಲ್ಲಿ ಹಮ್ಮಿಕೊಂಡಿದ್ದ ಸಮಾವೇಶ ಯಾರ ಶಕ್ತಿ ಪ್ರದರ್ಶನದ ವೇದಿಕೆಯಲ್ಲ. ಅದು ಸರ್ಕಾರದ ಸಾಧನೆಯನ್ನು ಜನತೆಗೆ ತಿಳಿಸುವ ಸಮಾವೇಶ ಎಂದು ಸಚಿವ ಆರ್.ಬಿ. ತಿಮ್ಮಾಪುರ ಹೇಳಿದರು. ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದು, ನಾಡಿನಾದ್ಯಂತ ಅವರಿಗೆ ಜನಪ್ರಿಯತೆ ಇದೆ. ಅವರ ಶಕ್ತಿ ಏನೆಂಬುದು ಪಕ್ಷದ ಹೈಕಮಾಂಡ್‌ಗೂ ಗೊತ್ತಿದೆ. ಆದರೆ, ಅವರ ವರ್ಚಸ್ಸು ಕಂಡು ವಿರೋಧ ಪಕ್ಷದವರಿಗೆ ಭಯ ಶುರುವಾಗಿದೆ. ಅದಕ್ಕಾಗಿ ಸಿಎಂ ಬದಲಾವಣೆ ಹಿನ್ನೆಲೆಯಲ್ಲಿ ಶಕ್ತಿಪ್ರದರ್ಶನದ ಸಮಾವೇಶ ಎಂದು ಬಿಂಬಿಸುತ್ತಿದ್ದಾರೆ ಎಂದು ಆರೋಪಿಸಿದರು. ಪ್ರತಿ ವಿಧಾನ ಸಭಾ ಕ್ಷೇತ್ರದ ಅಭಿವೃದ್ಧಿಗೆ 50 ಕೋಟಿ ಅನುದಾನ ಮೀಸಲು ವಿಚಾರಕ್ಕೂ, ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ್ ಅವರು ರಾಜ್ಯಕ್ಕೆ ಬಂದು ಹೋಗುವುದಕ್ಕೂ ಯಾವುದೇ ಸಂಬಂಧವಿಲ್ಲ. ಅನುದಾನ ಮೀಸಲು ಕುರಿತು ಈ ಹಿಂದೆಯೇ ನಿರ್ಧರಿಸಲಾಗಿತ್ತು ಎಂದರು. ಪಕ್ಷದ ಹೈಕಮಾಂಡ್ ಹೇಳಿದ ಹಾಗೆ ಎಲ್ಲರೂ ನಡೆದುಕೊಳ್ಳಬೇಕು. ಹೈಕಮಾಂಡ್ ಸೂಚನೆಯಂತೆ ಸುರ್ಜೇವಾಲ್ ಶಾಸಕರ ಸಭೆ ನಡೆಸಿ, ಅಭಿವೃದ್ಧಿ ವಿಚಾರವಾಗಿ ಚರ್ಚಿಸಿರಬಹುದು. ಸಚಿವರ ವಿರುದ್ಧ ಶಾಸಕರು ಅವರಿಗೆ ದೂರು ನೀಡಿದ್ದು ನನ್ನ ಗಮನಕ್ಕೆ ಬಂದಿಲ್ಲ. ನನ್ನನ್ನಂತೂ ಸಭೆಗೆ ಕರೆದಿಲ್ಲ ಎಂದು ಹೇಳಿದರು.

# ಸಾರ್ವಜನಿಕರ ಅಹವಾಲು ಸ್ವೀಕಾರ

## ತಹಶೀಲ್ದಾರ್ ಕಚೇರಿಗೆ ಜಿಲ್ಲಾಧಿಕಾರಿ ಭೇಟಿ: ಕಡತ ತ್ವರಿತ ವಿಲೇವಾರಿಗೆ ಸೂಚನೆ

• **ಉದಯವಾಹಿನಿ, ಹಾವೇರಿ**

ಕಂದಾಯ ಇಲಾಖೆಯ ಕೆಲಸಗಳನ್ನು ಚುರುಕುಗೊಳಿಸುವ ಉದ್ದೇಶದಿಂದ ಇ-ಆಫೀಸ್ ವ್ಯವಸ್ಥೆ ಅಳವಡಿಸಲಾಗಿದೆ. ಈ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಕಡತಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕು ಎಂದು ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ಅವರು ತಹಶೀಲ್ದಾರ್ ಕಚೇರಿಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸೂಚನೆ ನೀಡಿದರು. ಜಿಲ್ಲೆಯ ಶಿಗ್ಗಾವಿ, ಹಿರೇಕೆರೂರು ತಹಶೀಲ್ದಾರ್ ಕಚೇರಿಗಳಿಗೆ ದಿಢೀರ್ ಭೇಟಿ ನೀಡಿದ ಅವರು, ಕಚೇರಿಯ ವ್ಯವಸ್ಥೆಯನ್ನು ಪರಿಶೀಲಿಸಿದರು. ನಂತರ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಭೆ ನಡೆಸಿದರು. ಕಚೇರಿಗೆ ಬರುವ ಜನರ ಕೆಲಸಗಳನ್ನು ತುರ್ತಾಗಿ ಆದ್ಯತೆ ಮೇರೆಗೆ ಮಾಡಬೇಕು. ಯಾವುದೇ ಕಡತಗಳನ್ನು ಬಾಕಿ ಉಳಿಸಿಕೊಂಡು ವಿಳಂಬ ಮಾಡಬಾರದು. ಜನರಿಗೆ ಯಾವುದೇ ತೊಂದರೆಯಾಗದಂತೆ ಕೆಲಸ ಮಾಡಬೇಕು ಎಂದು ಖಡಕ್ ಸೂಚನೆ ನೀಡಿದರು. ಜಿಲ್ಲೆಯ ತಾಲ್ಲೂಕು ಕಚೇರಿಗಳ ದಾಖಲೆ ಕೊಠಡಿಗಳಲ್ಲಿರುವ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲೀಕರಣ ಮಾಡಲಾಗುತ್ತಿದೆ. ಇದು ದಾಖಲೆ ಸುರಕ್ಷಿತವಾಗಿರಿಸಲು ಶಾಶ್ವತ ಕ್ರಮವಾಗಿದೆ. ದಾಖಲೆಗಳ ರಕ್ಷಣೆಗೆ ಉತ್ತಮ ತಂತ್ರಾಂಶ ಇದಾಗಿದೆ. ಜನಸಾಮಾನ್ಯರ ದಾಖಲೆಗಳನ್ನು ರಕ್ಷಿಸಿ, ಅವುಗಳು ಸುಲಭವಾಗಿ ದೊರೆಯುವಂತೆ ಮಾಡುವುದು ತಂತ್ರಾಂಶದ ಉದ್ದೇಶವಾಗಿದೆ ಎಂದರು.


☛ ಉದಯವಾಹಿನಿ ಚಿತ್ರ

**ರಕ್ಷಣೆಗೆ ಉತ್ತಮ ತಂತ್ರಾಂಶ**

ಕಂದಾಯ ಸಚಿವರು ಇತ್ತೀಚೆಗೆ ಜಿಲ್ಲೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ಇ-ಆಫೀಸ್ ವ್ಯವಸ್ಥೆ ಪರಿಶೀಲಿಸಿದ್ದರು. ಯಾವುದೇ ಕಚೇರಿಯಲ್ಲಿ ನಿಗದಿತ ಗುರಿ ತಲುಪದಿರುವುದನ್ನು ಗಮನಿಸಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಎಲ್ಲಾ ತಾಂತ್ರಿಕ ಸಮಸ್ಯೆಗಳನ್ನು ತ್ವರಿತವಾಗಿ ಸರಿಪಡಿಸಬೇಕು. ಡಿಜಿಟಲೀಕರಣಕ್ಕೆ ಒತ್ತು ನೀಡಬೇಕು ಎಂದು ಸಿಬ್ಬಂದಿಗೆ ತಿಳಿಸಿದರು. ಭೂ ನಿರ್ವಹಣೆಯನ್ನು ಸರಳ ಮತ್ತು ಹೆಚ್ಚು ಪಾರದರ್ಶಕವಾಗಿಸಲು ಆಧಾರ್ ಜೋಡಣೆ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಮುಂದಿನ ಒಂದು ವಾರದಲ್ಲಿ ಎಲ್ಲಾ ತಾಲ್ಲೂಕಿನ ಕಂದಾಯ ಇಲಾಖೆಗಳು ಪ್ರಗತಿ ವರದಿ ಸಲ್ಲಿಸಬೇಕು. ತಪ್ಪಿದಲ್ಲಿ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು. ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ತಾಕೀತು ಮಾಡಿದರು.

ಕಂದಾಯ ಗ್ರಾಮ, ಉಪ ಗ್ರಾಮ ಪ್ರಸ್ತಾವಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕು. ಇ- ಪಾವತಿ ಖಾತೆಯನ್ನು ಆಂದೋಲನ ಮಾದರಿಯಲ್ಲಿ ಎಲ್ಲಾ ಗ್ರಾಮಗಳಲ್ಲಿ ಪ್ರಚಾರ ಮಾಡಬೇಕು ಎಂದರು. ಬಗರಹುಕುಂ ಅಡಿಯಲ್ಲಿ ದುರ್ಬಳಕೆ ತಡೆಗಟ್ಟಲು ಡಿಜಿಟಲ್ ಸಹಿಗೆ ಅವಕಾಶ ಮಾಡಿಕೊಟ್ಟು ಡಿಜಿಟಲ್ ಸಾಗುವಳಿ ಚೀಟಿಯನ್ನು ನೀಡಲಾಗುತ್ತದೆ. ಹೀಗಾಗಿ ಸಂಬಂಧಿಸಿದ ಸಿಬ್ಬಂದಿ, ತಮ್ಮ ಲಾಗಿನ್‌ನಲ್ಲಿರುವ ಕಡತಗಳನ್ನು ವಿಲೇವಾರಿ ಮಾಡಬೇಕು. ಯಾವುದನ್ನೂ ಲಾಗಿನ್‌ನಲ್ಲಿ ಉಳಿಸಿಕೊಳ್ಳದೇ ನಿಗದಿಪಡಿಸಿದ ದಿನದೊಳಗೆ ವಿಲೇವಾರಿ ಮಾಡಬೇಕು' ಎಂದು ಹೇಳಿದರು.

> ಕಂದಾಯ ಇಲಾಖೆಯ ಎಲ್ಲಾ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲೀಕರಣ ಮಾಡಲಾಗುತ್ತಿದೆ. ಇದು ದಾಖಲೆ ಸುರಕ್ಷಿತವಾಗಿರಿಸಲು ಶಾಶ್ವತ ಕ್ರಮವಾಗಿದೆ.
>
> -ವಿಜಯ ಮಹಾಂತೇಶ ದಾನಮ್ಮನವರ
> ಜಿಲ್ಲಾಧಿಕಾರಿ

### ಜನರ ಸೇವೆಗಾಗಿ ಸರ್ಕಾರಿ ಕೆಲಸ

ಜಿಲ್ಲೆಯ ಎಲ್ಲಾ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ನೌಕರರು ಜನರ ಸೇವೆ ಮಾಡುವುದಕ್ಕಾಗಿ ಹೆಚ್ಚು ಓದಿ ಸರ್ಕಾರಿ ಕೆಲಸಕ್ಕೆ ಬಂದಿದ್ದೀರಾ. ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ನಿಸ್ವಾರ್ಥ ಹಾಗೂ ಪ್ರಮಾಣಿಕವಾಗಿ ಕೆಲಸ ಮಾಡಿ ಎಂದು ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ತಿಳಿಸಿದರು. ಸಿಬ್ಬಂದಿಗಳು ನಿಸ್ವಾರ್ಥವಾಗಿ ಸಮನ್ವಯದೊಂದಿಗೆ ಕೆಲಸ ಮಾಡಬೇಕು. ಆಗ ಮಾತ್ರ ಉತ್ತಮ ಕೆಲಸಗಾರ ಎಂದೆನಿಸಿಕೊಳ್ಳುತ್ತಾರೆ ಎಂದು ಹೇಳಿದರು.

## ಆಲಮೇಲ ದೇವಸ್ಥಾನದ ಪಕ್ಕ ಗೋಡೆ ನಿರ್ಮಾಣ: ವಾಗ್ವಾದ

• **ಉದಯವಾಹಿನಿ, ಆಲಮೇಲ**

ಪುರಸಭೆ ಮುಖ್ಯಾಧಿಕಾರಿ ನಡೆ ಖಂಡಿಸಿ ಪಟ್ಟಣ ಪಂಚಾಯಿತಿ ಎದುರು ತಳವಾರ ಸಮಾಜದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು. ಸ್ಥಳೀಯ ವಾರ್ಡ್ ನಂ. 6ರಲ್ಲಿನ ಅಂಬಿಗರ ಚೌಡಯ್ಯ ದೇವಸ್ಥಾನ ಪಕ್ಕ ಕರ್ನಾಟಕ ರಾಜ್ಯ ತಳವಾರ ಮಹಾಸಭೆ ಸಮಿತಿ ಪದಾಧಿಕಾರಿಗಳು ಗೋಡೆ ನಿರ್ಮಿಸುತ್ತಿರುವ ವೇಳೆ ಪ.ಪಂ ಮುಖ್ಯಾಧಿಕಾರಿ ಸುರೇಶ ನಾಯಕ ಕಾಮಗಾರಿ ತಡೆದರು. ಇದರಿಂದ ಕೆಲ ಕಾಲ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು. ಸ್ಥಳಕ್ಕೆ ಪಿಎಸ್‌ಐ ಅರವಿಂದ ಭೇಟಿ ನೀಡಿ ಮುಖಂಡರೊಂದಿಗೆ ಚರ್ಚೆ ನಡೆಸಿದ ವೇಳೆ ವಾಗ್ವಾದವೂ ನಡೆಯಿತು. ಬಳಿಕ ಪದಾಧಿಕಾರಿಗಳು ಅಲ್ಲಿಂದ ಪಟ್ಟಣ ಪಂಚಾಯಿತಿ ಕಚೇರಿಗೆ ತೆರಳಿ ಪುರಸಭೆ ಮುಖ್ಯಾಧಿಕಾರಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅಂಬಿಗರ ಚೌಡಯ್ಯನವರ ದೇವಸ್ಥಾನ ಅಂದಾಜು 30 ವರ್ಷಗಳ ಹಿಂದೆ ನಿರ್ಮಿಸಲಾಗಿದೆ. ಪಕ್ಕದಲೇ ಐತಿಹಾಸಿಕ ದೇವರ ಬಾವಿಯೂ ಇದೆ. ಕೆಲವರು ರಾಜಕೀಯ ಪ್ರಭಾವದಿಂದ ಈ ಬಾವಿ ಮುಚ್ಚುವ ಹುನ್ನಾರ ನಡೆಸಿದ್ದಾರಲ್ಲದೆ, ಪಕ್ಕದಲ್ಲೇ ಶೌಚಗೃಹ ನಿರ್ಮಿಸುತ್ತಿದ್ದಾರೆ. ಆದರೂ ಪ.ಪಂ ಮುಖ್ಯಾಧಿಕಾರಿಗಳು ಕೇವಲ ರಾಜಕೀಯ ಪ್ರಭಾವಿಗಳ ಪರ ಕೆಲಸ ಮಾಡುತ್ತಿದ್ದಾರೆ. ಮೇಲಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಅಂಬಿಗರ ಚೌಡಯ್ಯನವರ ದೇವಸ್ಥಾನ ಜಾಗ ಅಳತೆ ಮಾಡಿ ಹದ್ದುಬಸ್ತ್ ಮಾಡಿಕೊಡಬೇಕು. ಶೌಚಗೃಹ ನಿರ್ಮಾಣ ಕಾಮಗಾರಿ ಕೈ ಬಿಡದಿದ್ದರೆ ಜಿಲ್ಲಾಧಿಕಾರಿ ಕಚೇರಿ ಎಂದು ಧರಣಿ ನಡೆಸಲಾಗುವುದೆಂದು ಎಚ್ಚರಿಸಿದರು.

# ಟಿಆರ್‌ಪಿ ಪ್ರವಾಹದಲ್ಲಿ ಕೊಚ್ಚಿಹೋದ ಪಾಕಿಸ್ತಾನದ ವರದಿಗಾರ

## ಪಾಕಿಸ್ತಾನ ವರದಿಗಾರನ ಸಾವಿನ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಬಿರುಸಿನ ಚರ್ಚೆ



**ಪ್ರಾಣ ಕಸಿದ ನೇರ ಪ್ರಸಾರ**

**ಇಸ್ಲಾಮಾಬಾದ್:** ಖಾಸಗಿ ಮಾಧ್ಯಮಗಳ ನಡುವೆ ಟಿಆರ್‌ಪಿ ಸ್ಪರ್ಧೆ ಇರುವುದು ಸಾಮಾನ್ಯ. ಒಂದು ರೀತಿಯಲ್ಲಿ ಇದು ಮಾಧ್ಯಮಗಳ ಚುರುಕುತನಕ್ಕೆ ಉತ್ತೇಜನ ನೀಡುತ್ತದೆ. ಆದರೆ ಕೇವಲ ಟಿಆರ್‌ಪಿಯೇ ಮಾಧ್ಯಮಗಳ ಉದ್ದೇಶವಾದರೆ, ಅನಾಹುತಗಳೇ ಸಂಭವಿಸಬಹುದು ಎಂಬುದಕ್ಕೆ ನೆರೆಯ ಪಾಕಿಸ್ತಾನದಲ್ಲಿ ಸಂಭವಿಸಿದ ಈ ಘಟನೆಯೇ ಸಾಕ್ಷಿ. ಪಾಕಿಸ್ತಾನದ ರಾವಲ್ಪಿಂಡಿಯ ಚಾಹಾನ್ ಅಣೆಕಟ್ಟು ಬಳಿ ಪ್ರವಾಹ ಪರಿಸ್ಥಿತಿ ಉದ್ಭವವಾಗಿದ್ದು, ಇದರ ನೇರ ಪ್ರಸಾರದ ದೃಶ್ಯ ವಿವರಿಸುತ್ತಿದ್ದ ಪತ್ರಕರ್ತನೋರ್ವ ಪ್ರವಾಹದಲ್ಲಿ ಕೊಚ್ಚಿಹೋದ ಘಟನೆ ನಡೆದಿದೆ. ವರದಿಗಾರ ಲೈವ್ ನಲ್ಲೇ ಪ್ರವಾದಲ್ಲಿ ಕೊಚ್ಚಿಹೋದ ಭೀಕರ ದೃಶ್ಯ, ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವೈರಲ್ ಆಗಿದೆ. ವರದಿಗಾರ ಪ್ರವಾಹದ ನೀರಿನಲ್ಲೇ ಕೈಯಲ್ಲಿ ಮೈಕ್ರೋಫೋನ್ ಹಿಡಿದುಕೊಂಡು ನೇರ ಪ್ರಸಾರ ಮಾಡುತ್ತಿದ್ದ. ಆದರೆ ಕ್ಷಣಕ್ಷಣಕ್ಕೂ ನೀರಿನ ಪ್ರಮಾಣ ಹೆಚ್ಚಾಗುತ್ತಲೇ ಇರುವುದನ್ನು ಗಮನಿಸದ ಆತ, ಅಂತಿಮವಾಗಿ ಅದೇ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದಾನೆ. ಪತ್ರಕರ್ತರು ಅಪಾಯಕಾರಿ ಪರಿಸ್ಥಿತಿಯಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಾರೆ. ಆದರೆ ಈ ದೃಶ್ಯಗಳು ಸೋಶಿಯಲ್ ಮೀಡಿಯಾಗಳಲ್ಲಿ ವೈರಲ್ ಆಗುತ್ತಿದ್ದಂತೇ, ಕೆಲವರು ವರದಿಗಾರನ ಧೈರ್ಯವನ್ನು ಹೊಗಳಿದರೆ, ಇನ್ನೂ ಕೆಲವರು ಟಿಆರ್‌ಪಿಗಾಗಿ ಇಂತಹ ಹುಚ್ಚು ಪ್ರಯತ್ನ ಸಲ್ಲದು ಎಂದು ಕಿಡಿಕಾರಿದ್ದಾರೆ. ಇನ್ನೂ ಕೆಲವರು ಇದು ಸ್ವಯಂಕೃತ ಅಪರಾಧ ಎಂದು ವ್ಯಂಗ್ಯವಾಡಿದ್ದಾರೆ.

**ಆಗಿದ್ದೇನು?:** ರಾವಲ್ಪಿಂಡಿಯ ಚಹಾನ್ ಅಣಕಟ್ಟು ಬಳಿ ಕಳೆದ ಕೆಲವು ದಿನಗಳಿಂದ ಭಾರೀ ಮಳೆಯಾಗುತ್ತಿದೆ. ಈ ವೇಳೆ ಪಾಕಿಸ್ತಾನದ ಖಾಸಗಿ ಮಾಧ್ಯಮದ ವರದಿಗಾರನೋರ್ವ ಅದರ ನೇರ ಪ್ರಸಾರ ಮಾಡಲು ಪ್ರವಾಹದ ನೀರಿನಲ್ಲಿ ಇಳಿದಿದ್ದಾನೆ. ನೀರು ಎಷ್ಟು ವೇಗವಾಗಿ, ಯಾವ ಪ್ರಮಾಣದಲ್ಲಿ ಹರಿಯುತ್ತಿದೆ ಎಂಬುದನ್ನು ತಿಳಿಸಲು, ವರದಿಗಾರ ನದಿಗೆ ಇಳಿದಿದ್ದು, ತನ್ನ ಕುತ್ತಿಗೆವರೆಗೂ ನೀರು ಬಂದರೂ ನೇರ ಪ್ರಸಾರವನ್ನು ನಿಲ್ಲಿಸಲಿಲ್ಲ.

ಈ ವರದಿಗಾರ ಲೈವ್ ಮಾಡುತ್ತಿದ್ದಾಗಲೇ ರಭಸದಿಂದ ಹರಿದ ನೀರಿನಲ್ಲಿ ಕೊಚ್ಚಿಹೋಗಿದ್ದಾನೆ. ಈ ವೇಳೆ ಕ್ಯಾಮರಾಮನ್ ಕೂಡ ಅಸಹಾಯಕನಾಗಿ ನಿಂತಿದ್ದ ಎಂದು ಮೂಲಗಳು ವರದಿ ಮಾಡಿವೆ. ಸದ್ಯ ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಕೆಲವರು ವರದಿಗಾರನ ಧೈರ್ಯವನ್ನು ಪ್ರಶಂಸಿದರೆ ಇನ್ನು ಕೆಲವರು ಇದು ಪತ್ರಕರ್ತರ ಸುರಕ್ಷತೆಗೆ ಎಷ್ಟು ಅಪಾಯವಿದೆ ಎಂಬುದಕ್ಕೆ ಸಾಕ್ಷಿ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತುರ್ತು ಮತ್ತು ವಾಸ್ತವ ವರದಿಗಾರಿಕೆ ಪತ್ರಿಕೋದ್ಯಮದ ಅಗತ್ಯ ನಿಜ, ಆದರೆ ಅದು ಜೀವ ಕಳೆದುಕೊಳ್ಳುವಷ್ಟು ಅನಿವಾರ್ಯತೆ ಎಂದಿಗೂ ಅಲ್ಲ ಎಂದು ನೆಟ್ಟಿಗನೋರ್ವ ಈ ಘಟನೆಗೆ ಮಾರ್ಮಿಕವಾಗಿ ಪ್ರತಿಕ್ರಿಯೆ ನೀಡದ್ದಾನೆ. ಇನ್ನೂ ಕೆಲವು ಸಾಮಾಜಿಕ ಜಾಲತಣ ಬಳಕೆದಾರರು ಇದು ಟಿವಿ ಚಾನೆಲ್‌ಗಳ ಟಿಆರ್‌ಪಿ ಹಸಿವು ಎಂದು ದೂಷಿಸಿದ್ದಾರೆ. ಹಲವು ಅಂತಾರಾಷ್ಟ್ರೀಯ ಮಾಧ್ಯಮಗಳು ಈ ಸುದ್ದಿಯನ್ನು ಪ್ರಸಾರ ಮಾಡಿದ್ದು, ಕೆಲವರು ಇದನ್ನು ಎಐ ಜನರೇಟೆಡ್ ವಿಡಿಯೋ ಆಗಿರಬಹುದು ಎಂದೂ ಅನುಮಾನ ವ್ಯಕ್ತಪಡಿಸಿದ್ದಾರೆ.

**ಪಾಕಿಸ್ತಾನದಲ್ಲಿ ಮಳೆ**

ಪಾಕಿಸ್ತಾನದಲ್ಲಿ ಕಳೆದ ಜೂನ್ 26ರಿಂದ ನಿರಂತರವಾಗಿ ಮಳೆ ಸುರಿಯುತ್ತಿದೆ. ಇದರಿಂದಾಗಿ ಪಾಕಿಸ್ತಾನದ ಅನೇಕ ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಭಾರೀ ಮಳೆಗೆ ಈವರೆಗೆ ಕನಿಷ್ಠ 116 ಮಂದಿ ಸಾವನ್ನಪ್ಪಿದ್ದು, 250ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಪಾಕಿಸ್ತಾನದ ಪಂಜಾಬ್ ಪ್ರಾಂತ್ಯವೊಂದರಲ್ಲೇ 44 ಸಾವುಗಳು ಸಂಭವಿಸಿವೆ ಎಂದು ವರದಿಯಾಗಿದೆ. ಪ್ರವಾಹದ ಕಾರಣಕ್ಕೆ ಲಕ್ಷಾಂತರ ಜನರ ಸ್ಥಳಾಂತರ ಕಾರ್ಯಾಚರಣೆ ಆರಂಭಿಸಲಾಗಿದ್ದು, ಚಹಾನ್ ಅಣೆಕಟ್ಟು ಕುಸಿತವು ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸಿದೆ.

**ಆಘಾತಕಾರಿ ಘಟನೆ ಸಾಕ್ಷಿ**

ಕೆಲವು ಮಾಧ್ಯಮಗಳ ನಡುವಿನ ಟಿಆರ್‌ಪಿ ಸ್ಪರ್ಧೆಯು ಎಂತಹ ಅನಾಹುತಕ್ಕೆ ಕಾರಣವಾಗಬಲ್ಲದು ಎಂಬುದಕ್ಕೆ ಪಾಕಿಸ್ತಾನದಲ್ಲಿ ನಡೆದ ಒಂದು ಆಘಾತಕಾರಿ ಘಟನೆ ಸಾಕ್ಷಿಯಾಗಿದೆ. ಪಾಕಿಸ್ತಾನದ ರಾವಲ್ಪಿಂಡಿಯ ಚಹಾನ್ ಅಣೆಕಟ್ಟು ಬಳಿ ಉಂಟಾದ ಭೀಕರ ಪ್ರವಾಹದ ಕುರಿತು ನೇರ ಪ್ರಸಾರ ಮಾಡುತ್ತಿದ್ದ ಪತ್ರಕರ್ತರೊಬ್ಬರು, ವರದಿ ಮಾಡುವಾಗಲೇ ರಭಸವಾಗಿ ಹರಿಯುತ್ತಿದ್ದ ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ. ಈ ಘಟನೆ ಸಾಮಾಜಿಕ ಜಾಲತಾಣದಲ್ಲಿ ಭಾರೀ ಚರ್ಚೆಯನ್ನು ಹುಟ್ಟುಹಾಕಿದ್ದು, ಕೆಲವರು ಇದನ್ನು ಸ್ವಯಂಕೃತ ಅಪರಾಧ ಎಂದು ಬಣ್ಣಿಸಿದ್ದಾರೆ.

## ಹಡಗು ಮುಳುಗಿ 34 ಜನ ಸಾವು

**ವಿಯೆಟ್ನಾಂ:** ಇಲ್ಲಿನ ಕ್ವಾಂಗ್ ನಿನ್ಸ್ ಪ್ರಾಂತ್ಯದ ಹಾ ಲಾಂಗ್ ಕೊಲ್ಲಿಯಲ್ಲಿ ಪ್ರವಾಸಿ ಹಡಗು ಮಗುಚಿ 34 ಜನರು ಸಾವನ್ನಪ್ಪಿದ್ದಾರೆ. ಹಡಗಿನಲ್ಲಿ 48 ಪ್ರವಾಸಿಗರು, 5 ಸಿಬ್ಬಂದಿ ಇದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಲವಾದ ಗಾಳಿಯಿಂದಾಗಿ ಹಡಗು ಮಗುಚಿದೆ ಎಂದು ಪ್ರಾಥಮಿಕ ವರದಿ ತಿಳಿಸಿದೆ. ರಕ್ಷಣಾ ಕಾರ್ಯಚರಣೆ ವೇಳೆ ಹಲವರನ್ನು ರಕ್ಷಿಸಲಾಗಿದೆ.

34 ಮಂದಿ ಶವ ಪತ್ತೆಯಾಗಿದ್ದು ಇನ್ನು ಎಂಟು ಮಂದಿ ನಾಪತ್ತೆಯಾಗಿದ್ದಾರೆ ಎನ್ನುವ ಮಾಹಿತಿ ಲಭ್ಯವಾಗಿದೆ. ಸಾಧ್ಯವಾದಷ್ಟು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ಶೋಧ, ರಕ್ಷಣಾ ಕಾರ್ಯಾಚರಣೆಗಳನ್ನು ಕೈಗೊಳ್ಳಲು ಲಭ್ಯವಿರುವ ಎಲ್ಲಾ ಸಿಬ್ಬಂದಿ ಮತ್ತು ಸಂಪನ್ಮೂಲಗಳನ್ನು ಸಜ್ಜುಗೊಳಿಸುವಂತೆ ಅವರು ರಾಷ್ಟ್ರೀಯ ರಕ್ಷಣಾ ಸಚಿವಾಲಯಕ್ಕೆ ಪ್ರಧಾನಿ ಫಾಮ್ ಸೂಚನೆ ನೀಡಿದ್ದಾರೆ. ಘಟನೆಯಲ್ಲಿ ಮಕ್ಕಳು ಮಹಿಳೆಯರು ಹೆಚ್ಚಾಗಿ ಸಾವನ್ನಪ್ಪಿದ್ದಾರೆ.

## ಜುಲೈ 23ರಂದು ಬ್ರಿಟನ್, 25ರಂದು ಮಾಲೀಕ್ಸ್‌ಗೆ ಪ್ರಧಾನಿ ಮೋದಿ ಭೇಟಿ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಜುಲೈ 23ರಿಂದ 26ರವರೆಗೆ ಬ್ರಿಟನ್ ಮತ್ತು ಮಾಲ್ಡಿವ್‌ಗೆ ಭೇಟಿ ನೀಡಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಭಾನುವಾರ ತಿಳಿಸಿದೆ. ಜು.23ರಂದು ಪ್ರಧಾನಿ ಕೀರ್ ಸ್ಟಾರ್ಮರ್ ಆಹ್ವಾನದ ಮೇರೆಗೆ ಮೋದಿ ಅವರು ಬ್ರಿಟನ್‌ಗೆ ಭೇಟಿ ನೀಡಲಿದ್ದಾರೆ. ಬಳಿಕ ಜು.25ರಂದು ಮಾಡ್ತೀವ್‌ಗೆ ತೆರಳಲಿರುವ ಮೋದಿ ಅವರು ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ಮೂಲಗಳು ತಿಳಿಸಿವೆ. ಮೋದಿ ಅವರು ಪ್ರಧಾನಿಯಾದ ಬಳಿಕ ಬ್ರಿಟನ್‌ಗೆ ಕೈಗೊಳ್ಳುತ್ತಿರುವ ನಾಲ್ಕನೇ ಪ್ರವಾಸ ಇದಾಗಿದೆ. ಭಾರತ ಮತ್ತು ಬ್ರಿಟನ್ ನಡುವಿನ ದ್ವಿಪಕ್ಷೀಯ ಸಂಬಂಧಗಳ ಕುರಿತು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರೊಂದಿಗೆ ವ್ಯಾಪಕ ಚರ್ಚೆ ನಡೆಸಲಿದ್ದಾರೆ. ಜತೆಗೆ, ಪ್ರಾದೇಶಿಕ, ಜಾಗತಿಕ ವಿಷಯಗಳು ಸೇರಿದಂತೆ ವ್ಯಾಪಾರ, ತಂತ್ರಜ್ಞಾನ, ರಕ್ಷಣೆ, ಹವಾಮಾನ, ಆರೋಗ್ಯ, ಶಿಕ್ಷಣ ಕ್ಷೇತ್ರದ ಬಗ್ಗೆ ಉಭಯ ನಾಯಕರು ಮಾತುಕತೆ ನಡೆಸಲಿದ್ದಾರೆ. ಇದೇ ವೇಳೆ ಮೋದಿ ಅವರು ಬ್ರಿಟನ್‌ನ ರಾಜ ಚಾರ್ಲ್ಸ್ ಅವರನ್ನು ಭೇಟಿಯಾಗುವ ಸಾಧ್ಯತೆ ಇದೆ' ಎಂದು ವಿದೇಶಾಂಗ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ. ಮೋದಿ ಅವರು ಪ್ರಧಾನಿಯಾದ ಬಳಿಕ ಮೂರನೇ ಬಾರಿಗೆ ಮಾಲ್ಡೀವ್ಸ್ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಮೋದಿ ಅವರು ಜುಲೈ 26ರಂದು 60ನೇ ಮಾಲ್ಡೀವ್ಸ್ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಬಳಿಕ ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರೊಂದಿಗೆ ದ್ವಿಪಕ್ಷೀಯ ಸಂಬಂಧಗಳ ಕುರಿತು ಮಾತುಕತೆ ನಡೆಸಲಿದ್ದಾರೆ.

### ಅಮೆರಿಕವನ್ನು ಭೂಗ್ರಹದ ಕ್ರಿಪ್ಟೋ ರಾಜಧಾನಿ ಮಾಡುವ ಜೀನಿಯಸ್ ಆ್ಯಕ್ಟ್‌ಗೆ ಟ್ರಂಪ್ ಸಹಿ

## ಐತಿಹಾಸಿಕ ಸ್ಟೇಬಲ್‌ಕಾಯಿನ್ ಮಸೂದೆಗೆ ಸಹಿ



**ವಾಷಿಂಗ್ಟನ್ ಡಿಸಿ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಯುಎಸ್ ಡಾಲರ್-ಬೆಲೆಯ ಕ್ರಿಪ್ಟೋಕರೆನ್ಸಿಗಳಿಗೆ ನಿಯಂತ್ರಕ ಆಡಳಿತವನ್ನು ರಚಿಸುವ ಕಾನೂನಿಗೆ ಸಹಿ ಹಾಕಿದ್ದಾರೆ. ಇದು ಡಿಜಿಟಲ್ ಸ್ವತ್ತುಗಳು ಪಾವತಿಗಳನ್ನು ಮಾಡಲು ಮತ್ತು ಹಣವನ್ನು ಸಾಗಿಸಲು ದಾರಿ ಮಾಡಿಕೊಡುವ ಒಂದು ಮೈಲಿಗಲ್ಲು ಎಂದು ಪರಿಗಣಿಸಲಾಗಿದೆ. GENIUS ಕಾಯಿದೆ ಎಂದು ಕರೆಯಲ್ಪಡುವ ಮಸೂದೆಯನ್ನು 308 ಪರ, 122 ವಿರೋಧ ಮತಗಳಿಂದ ಅಂಗೀಕರಿಸಲಾಗಿದೆ. ಈ ಮಸೂದೆ ಸುಮಾರು ಅರ್ಧದಷ್ಟು ಡೆಮಾಕ್ರಟಿಕ್ ಸದಸ್ಯರು ಮತ್ತು ಹೆಚ್ಚಿನ ರಿಪಬ್ಲಿಕನ್ನರಿಂದ ಬೆಂಬಲವನ್ನು ಪಡೆದುಕೊಂಡಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಅಮೆರಿಕದಲ್ಲಿ ಕ್ರಿಪ್ಟೋಕರೆನ್ಸಿ ಒಪ್ಪಂದ ಜಾರಿಯ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. 2009ರಲ್ಲಿ ನಾವೀನ್ಯತೆ ಮತ್ತು ಊಹಾತ್ಮಕ ಅವ್ಯವಸ್ಥೆಗೆ ಹೆಸರುವಾಸಿಯಾದ ಉದ್ಯಮಕ್ಕೆ ಹೆಚ್ಚಿನ ಕಾನೂನುಬದ್ಧತೆಯನ್ನು ಪಡೆಯುವ ಪ್ರಯತ್ನದಲ್ಲಿ, ಅಂತಹ ನಿಯಂತ್ರಕ ಚೌಕಟ್ಟಿಗೆ ದೀರ್ಘಕಾಲ ಲಾಬಿ ಮಾಡಿದ್ದ ಕ್ರಿಪ್ಟೋ ಬೆಂಬಲಿಗರಿಗೆ ಈ ಕಾನೂನು ಒಂದು ದೊಡ್ಡ ಗೆಲುವಾಗಿದೆ. ಈ ಸಹಿ ನಿಮ್ಮ ಕಠಿಣ ಪರಿಶ್ರಮ, ಪ್ರವರ್ತಕ ಮನೋಭಾವದ ಬೃಹತ್ ದೃಢೀಕರಣವಾಗಿದೆ ಎಂದು ಹಲವಾರು ಕ್ರಿಪ್ಟೋ ಕಾರ್ಯನಿರ್ವಾಹಕರನ್ನು ಉದ್ದೇಶಿಸಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

**ಏನಿದು ಸ್ಟೇಬಲ್‌ಕಾಯಿನ್?:** ಸ್ಟೇಬಲ್‌ಕಾಯಿನ್‌ಗಳನ್ನು ಸ್ಥಿರ ಮೌಲ್ಯವನ್ನು ಕಾಯ್ದುಕೊಳ್ಳಲು ವಿನ್ಯಾಸಗೊಳಿಸಲಾಗಿದೆ. ಸಾಮಾನ್ಯವಾಗಿ 1:1 ಯುಎಸ್ ಡಾಲರ್ ಪೆಗ್, ಮತ್ತು ಅವುಗಳ ಬಳಕೆಯು ಇದೀಗ ಸುಲಭ. ವಿಶೇಷವಾಗಿ ಕ್ರಿಪ್ಟೋ ವ್ಯಾಪಾರಿಗಳು ಟೋಕನ್‌ಗಳ ನಡುವೆ ಹಣವನ್ನು ವರ್ಗಾಯಿಸುವುದರಿಂದ, ಪಾವತಿಗಳನ್ನು ತಕ್ಷಣವೇ ಕಳುಹಿಸಲು ಮತ್ತು ಸ್ವೀಕರಿಸಲು ಅವು ಮುಖ್ಯವಾಹಿನಿಯ ಬಳಕೆಗೆ ಪ್ರವೇಶಿಸುತ್ತವೆ. ಹೊಸ ಕಾನೂನಿನ ಪ್ರಕಾರ ಸ್ಟೇಬಲ್‌ಕಾಯಿನ್‌ಗಳು ಅಮೆರಿಕದ ಡಾಲರ್‌ಗಳು, ಅಲ್ಪಾವಧಿಯ ಖಜಾನೆ ಬಿಲ್‌ಗಳಂತಹ ದ್ರವ ಸ್ವತ್ತುಗಳಿಂದ ಬೆಂಬಲಿತವಾಗಿರಬೇಕು, ವಿತರಕರು ತಮ್ಮ ಮೀಸಲುಗಳ ಸಂಯೋಜನೆಯನ್ನು ಮಾಸಿಕ ಸಾರ್ವಜನಿಕವಾಗಿ ಬಹಿರಂಗಪಡಿಸಬೇಕು.

ಕ್ರಿಪ್ಟೋ ಕಂಪನಿಗಳು ಮತ್ತು ಕಾರ್ಯನಿರ್ವಾಹಕರು ಇಂತಹ ಶಾಸನವು ಸ್ಟೇಬಲ್‌ಕಾಯಿನ್‌ಗಳ ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ ಮತ್ತು ಬ್ಯಾಂಕುಗಳು, ಚಿಲ್ಲರೆ ವ್ಯಾಪಾರಿಗಳು ಮತ್ತು ಗ್ರಾಹಕರು ಅವುಗಳನ್ನು ಬಳಸಿಕೊಂಡು ಹಣವನ್ನು ತಕ್ಷಣವೇ ವರ್ಗಾಯಿಸಲು ಹೆಚ್ಚು ಸಿದ್ಧರಿರುತ್ತಾರೆ ಎಂದು ವಾದಿಸಿದ್ದಾರೆ. ಕ್ರಿಪ್ಟೋ ಡೇಟಾ ಪೂರೈಕೆದಾರ CoinGecko ಪ್ರಕಾರ ಸ್ಟೇಬಲ್‌ಕಾಯಿನ್ ಮಾರುಕಟ್ಟೆಯು ಪ್ರಸ್ತುತ 260 ಶತಕೋಟಿ ಅಮೆರಿಕನ್ ಡಾಲರ್‌ಗಿಂತ ಹೆಚ್ಚು ಮೌಲ್ಯವನ್ನು ಹೊಂದಿದೆ. ಆದರೆ ಇದರ ಮಾರುಕಟ್ಟೆ 2028ರ ವೇಳೆಗೆ ಹೊಸ ಕಾನೂನಿನ ಅಡಿಯಲ್ಲಿ 2 ಟ್ರಿಲಿಯನ್ ಅಮೆರಿಕನ್ ಡಾಲರ್‌ಗೆ ಬೆಳೆಯಬಹುದು ಎಂದು ಈ ವರ್ಷದ ಆರಂಭದಲ್ಲಿ ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಅಂದಾಜಿಸಿದೆ.

**ಭರವಸೆ ಈಡೇರಿಸಿದ ಟ್ರಂಪ್:** ಫೆಡರಲ್ ಚುನಾವಣಾ ಆಯೋಗದ ದತ್ತಾಂಶದ ಪ್ರಕಾರ, ಟ್ರಂಪ್ ಸೇರಿದಂತೆ ಕ್ರಿಪ್ಟೋ ಪರ ಅಭ್ಯರ್ಥಿಗಳಿಗೆ ಸಹಾಯ ಮಾಡಲು, ಕಳೆದ ವರ್ಷದ ಚುನಾವಣೆಯಲ್ಲಿ 245 ಮಿಲಿಯನ್ ಅಮೆರಿಕನ್ ಡಾಲರ್ ಗಿಂತಲೂ ಹೆಚ್ಚು ದೇಣಿಗೆ ನೀಡಿದ ಉದ್ಯಮದ ದೀರ್ಘ ಲಾಬಿ ಪ್ರಯತ್ನವನ್ನು ಕಾನೂನಿನ ಅಂಗೀಕಾರವು ಕೊನೆಗೊಳಿಸುತ್ತದೆ. ತಮ್ಮದೇ ಆದ ಕ್ರಿಪ್ಟೋ ನಾಣ್ಯವನ್ನು ಬಿಡುಗಡೆ ಮಾಡಿರುವ ರಿಪಬ್ಲಿಕನ್ ಅಧ್ಯಕ್ಷರು, ಪ್ರತಿಯಾಗಿ ಉದ್ಯಮದೊಂದಿಗೆ ವ್ಯವಹಾರ ಕುದುರಿಸಿದ್ದಾರೆ. ತಮ್ಮ ಅಧ್ಯಕ್ಷೀಯ ಪ್ರಚಾರದ ಸಮಯದಲ್ಲಿ, ಡೊನಾಲ್ಡ್ ಟ್ರಂಪ್ ಅವರು ಅಮೆರಿಕವನ್ನು ಭೂಗ್ರಹದ ಕ್ರಿಪ್ಟೋ ರಾಜಧಾನಿಯನ್ನಾಗಿ ಮಾಡುವುದಾಗಿ ಭರವಸೆ ನೀಡಿದ್ದರು.


**ಟಿ-ಬಿಲ್‌ಗಳಿಗೆ ಬೇಡಿಕೆ**

ನಿಯಂತ್ರಕರು ಡಿಜಿಟಲ್ ಸ್ವತ್ತುಗಳಿಗೆ ಬಲವಾದ ಬೆಂಬಲ ನೀಡುತ್ತಿರುವುದರಿಂದ, ದೊಡ್ಡ ಯುಎಸ್ ಬ್ಯಾಂಕ್‌ಗಳು ಕ್ರಿಪ್ಟೋಕರೆನ್ಸಿಗಳ ವಿಸ್ತರಣೆಯ ಬಗ್ಗೆ ಆಂತರಿಕವಾಗಿ ಚರ್ಚಿಸುತ್ತಿವೆ. ಆದರೆ ಬ್ಯಾಂಕುಗಳ ಆರಂಭಿಕ ಹಂತಗಳು ಪೈಲಟ್ ಕಾರ್ಯಕ್ರಮಗಳು, ಪಾಲುದಾರಿಕೆಗಳು, ಸೀಮಿತ ಕ್ರಿಪ್ಟೋ ವ್ಯಾಪಾರವನ್ನು ಕೇಂದ್ರೀಕರಿಸಿ ಜಾಗರೂಕರಾಗಿರುತ್ತವೆ ಎಂದು ರಾಯಿಟರ್ಸ್ ಕಳೆದ ಮೇ ತಿಂಗಳಲ್ಲಿ ವರದಿ ಮಾಡಿದೆ.

**ಬಿಟ್‌ಕಾಯಿನ್ ಮೀಸಲು ರಚಿಸುವತ್ತ ಟ್ರಂಪ್**

ಡೊನಾಲ್ಡ್ ಟ್ರಂಪ್ ಅವರು ಕಳೆದ ಮಾರ್ಚ್‌ನಲ್ಲಿ ಕಾರ್ಯತಂತ್ರದ ಬಿಟ್‌ಕಾಯಿನ್ ಮೀಸಲು ಸ್ಥಾಪಿಸುವ ಕಾರ್ಯನಿರ್ವಾಹಕ ಆದೇಶಕ್ಕೆ ಸಹಿ ಹಾಕುವ ಮೂಲಕ, ಅಮೆರಿಕದ ಕ್ರಿಪ್ಟೋಕರೆನ್ಸಿ ನೀತಿಗಳನ್ನು ವ್ಯಾಪಕವಾಗಿ ಪರಿಶೀಲಿಸುವ ಕಾರ್ಯಕ್ಕೆ ಮುನ್ನುಡಿ ಬರೆದಿದ್ದರು. ಅಧ್ಯಕ್ಷರು ವೈಯಕ್ತಿಕವಾಗಿ ಡಿಜಿಟಲ್ ಸ್ವತ್ತುಗಳತ್ತ ಸಾಗಿದ್ದಾರೆ. ಜನವರಿಯಲ್ಲಿ TRUMP ಎಂಬ ಮೀಮ್ ನಾಣ್ಯವನ್ನು ಅವರು ಬಿಡುಗಡೆ ಮಾಡಿದ್ದಾರೆ. ಇಷ್ಟೇ ಅಲ್ಲದೇ ಕ್ರಿಪ್ಟೋ ಕಂಪನಿ ವರ್ಲ್ಡ್ ಲಿಬರ್ಟಿ ಫೈನಾನ್ಶಿಯಲ್‌ನ ಭಾಗಶಃ ಮಾಲೀಕತ್ವವನ್ನೂ ಡೊನಾಲ್ಡ್ ಟ್ರಂಪ್ ಹೊಂದಿದ್ದಾರೆ.

## ಭೂಕುಸಿತ ಮುನ್ಸೂಚನೆ ನೀಡಲು ಎಐ ಆಧಾರಿತ ವ್ಯವಸ್ಥೆ ಅಭಿವೃದ್ಧಿ



**ಕೋಲ್ಕತ್ತಾ:** ಭಾರತೀಯ ಭೂವೈಜ್ಞಾನಿಕ ಸಮೀಕ್ಷೆ (ಜಿಎಸ್‌ಐ) ಹೆಚ್ಚು ಬಲಿಷ್ಠವಾದ ಭೂಕುಸಿತ ಮುನ್ಸೂಚನೆ ಮಾದರಿ ಮತ್ತು ಕೃತಕ ಬುದ್ಧಿಮತ್ತೆ (ಎಐ) ಬಳಸಿಕೊಂಡು ತಜ್ಞರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಮುಂದಾಗಿದೆ. ರಾಷ್ಟ್ರೀಯ ಭೂಕುಸಿತ ಮುನ್ಸೂಚನೆ ಕೇಂದ್ರದ ಮೊದಲ ವಾರ್ಷಿಕೋತ್ಸವದ ಸರಣಾರ್ಥ ನಡೆದ ಕಾರ್ಯಾಗಾರದಲ್ಲಿ ಜಿಎಸ್‌ಐ ಮಹಾನಿರ್ದೇಶಕ ಅಸಿತ್ ಸಹಾ ಮಾತನಾಡಿ, ಹೆಚ್ಚು ಬಲಿಷ್ಠವಾದ ಭೂ ಕುಸಿತ ಮುನ್ಸೂಚನೆ ಮಾದರಿ ಮತ್ತು ಕೃತಕ ಬುದ್ಧಿಮತ್ತೆ (ಎಐ) ಬಳಸಿಕೊಂಡು ತಜ್ಞ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಸಂಶೋಧನೆ ನಡೆಯುತ್ತಿದೆ ಎಂದು ಹೇಳಿದ್ದಾರೆ.

ಭೂಕುಸಿತದ ಮುನ್ಸೂಚನೆ ವ್ಯಾಪ್ತಿಯನ್ನು ಆರು ರಾಜ್ಯಗಳಲ್ಲಿ 16 ಜಿಲ್ಲೆಗಳಿಂದ 2025ರ ವೇಳೆಗೆ ಎಂಟು ರಾಜ್ಯಗಳ 21 ಜಿಲ್ಲೆಗಳಿಗೆ ವಿಸ್ತರಿಸಿದ್ದಕ್ಕಾಗಿ ಶ್ಲಾಘಿಸಿದರು. ಜಾಗತಿಕ ಅತ್ಯುತ್ತಮ ಅಭ್ಯಾಸಗಳನ್ನು ಮುನ್ಸೂಚನೆ ವ್ಯವಸ್ಥೆಗಳಲ್ಲಿ ಸಂಯೋಜಿಸುವಲ್ಲಿ ಪ್ರವರ್ತಕ ಪ್ರಯತ್ನಗಳು, ಡ್ಯಾಶ್‌ಬೋರ್ಡ್, ಭೂಸಂಕೇತ್ ಪೋರ್ಟಲ್ ಮತ್ತು ಭೂಸ್ಖಲನ್ ಅಪ್ಲಿಕೇಶನ್‌ನ ಯಶಸ್ವಿ ನವೀಕರಣಗಳನ್ನು ಅವರು ಪುನರಚ್ಚರಿಸಿದರು.

2030ರ ವೇಳೆಗೆ ರಾಷ್ಟ್ರವ್ಯಾಪಿ ಪ್ರಾದೇಶಿಕ ಭೂ ಕುಸಿತ ಮುನ್ಸೂಚನಾ ವ್ಯವಸ್ಥೆಯನ್ನು ಕಾರ್ಯಗತಗೊಳಿಸುವ ಸಂಸ್ಥೆಯ ದೀರ್ಘಕಾಲೀನ ದೃಷ್ಟಿಕೋನವನ್ನು ಪ್ರತಿಪಾದಿಸಿದ್ದಾರೆ. ಉತ್ತರಾಖಂಡದ ರುದ್ರಪ್ರಯಾಗ ಜಿಲ್ಲೆಯ ಜಿಎಸ್‌ಐ ಶೀಘ್ರದಲ್ಲೇ ಕಾರ್ಯಾರಂಭ ಮಾಡಲಿದ್ದು, ಭೂಕುಸಿತ ಮುನ್ಸೂಚನಾ ಬುಲೆಟಿನ್‌ಗಳನ್ನು ನೀಡಲು ಪ್ರಾರಂಭಿಸುತ್ತದೆ ಎಂದು ಹೇಳಿದ್ದಾರೆ.

ಇದು ನೈಜ-ಸಮಯದ ಮೇಲ್ವಿಚಾರಣೆ, ನಿರ್ಣಾಯಕ ಭೂಕುಸಿತ ಮುನ್ಸೂಚನೆಯನ್ನು ಸಾರ್ವಜನಿಕರಿಗೆ ನೀಡುವಲ್ಲಿ ಹೆಚ್ಚಿನ ಸಾಮರ್ಥ್ಯ ಹೊಂದಿದೆ ಎಂದರು.

## ಚೀನಾ ಹ್ಯಾಕರ್‌ಗಳಿಂದ ಸೈಬರ್ ದಾಳಿ: ಸಚಿವ




**ಸಿಂಗಾಪುರ:** ಚೀನಾ ಮೂಲದ ಸೈಬರ್ ದಾಳಿಯನ್ನು ದೇಶವು ಗಂಭೀರವಾಗಿ ಎದುರಿಸುತ್ತಿದೆ ಎಂದು ರಾಷ್ಟ್ರೀಯ ಭದ್ರತಾ ಸಚಿವ ಕೆ. ಷಣ್ಮುಗಂ ಹೇಳಿದ್ದಾರೆ. ಚೀನಾ ಹ್ಯಾಕರ್‌ಗಳು ನಿರಂತರವಾಗಿ ಬೆದರಿಕೆ ಹೊಡ್ಡುತ್ತಿದ್ದಾರೆ. ಇದು ದೇಶಕ್ಕೆ ಗಂಭೀರ ಅಪಾಯ ಉಂಟು ಮಾಡಬಹುದು ಎಂದು ಅವರು ಹೇಳಿದ್ದಾರೆ. 2021, 2024ರ ನಡುವೆ ಚೀನಾ ಸೈಬರ್ ದಾಳಿಯು ನಾಲ್ಕುಪಟ್ಟು ಹೆಚ್ಚಾಗಿದೆ. ಮೂಲಸೌಕರ್ಯ, ರಾಷ್ಟ್ರೀಯ ಭದ್ರತೆಗೆ ಹೆಚ್ಚು ಅಪಾಯ ಎಂದು ಸಚಿವರು ಹೇಳಿದ್ದಾರೆ. ಚೀನಾದ ಹ್ಯಾಕರ್‌ಗಳು ಯುಎನ್‌ಸಿ 3886 ಎಂಬ ಕುತಂತ್ರಾಂಶದ ಮೂಲಕ ದಾಳಿ ಮಾಡುತ್ತಿದ್ದಾರೆ ಎಂಬುದನ್ನು ಗೂಗಲ್‌ನ ಸೈಬರ್ ಸೆಕ್ಯುರಿಟಿ ಸಂಸ್ಥೆ ಮ್ಯಾಂಡಿಯಂಟ್ ತಿಳಿಸಿದೆ. ಈ ಹ್ಯಾಕರ್‌ಗಳು ಚೀನಾ ಸರ್ಕಾರದ ಗೂಢಚಾರರು ಎಂದು ವಿವರಿಸಿದರು.

## ತಮಿಳುನಾಡಿನಲ್ಲಿ ಮಹಿಳೆಯರು ಸುರಕ್ಷಿತವಾಗಿಲ್ಲ



**ನಾಗಪಟ್ಟಣಂ:** ತಮಿಳುನಾಡಿನಲ್ಲಿ ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ಅಪರಾಧಗಳ ಬಗ್ಗೆ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ, ಮಾಜಿ ಸಿಎಂ ಎಡಪ್ಪಾಡಿಕೆ ಪಳನಿಸ್ವಾಮಿ ಕಳವಳ ವ್ಯಕ್ತಪಡಿಸಿದ್ದಾರೆ. ಅಪರಾಧಿಗಳಿಗೆ ಕಾನೂನಿನ ಭಯವಿಲ್ಲದೆ ಓಡಾಡುತ್ತಿದ್ದು ಹುಡುಗಿಯರು, ಮಹಿಳೆಯರಿಗೆ ಸುರಕ್ಷತೆ ಇಲ್ಲದಂತಾಗಿದೆ ಎಂದು ರಾಜ್ಯ ಡಿಎಂಕೆ ಸರ್ಕಾರವನ್ನು ಟೀಕಿಸಿದ್ದಾರೆ.

ಜನರನ್ನು ರಕ್ಷಿಸಿ, ತಮಿಳುನಾಡನ್ನು ಉದ್ಧಾರ ಮಾಡಿ ಎಂಬ ರಾಜ್ಯವ್ಯಾಪಿ ಅಭಿಯಾನದ ಭಾಗವಾಗಿ ಇಲ್ಲಿ ನಡೆದ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಪಳನಿಸ್ವಾಮಿ, ಗುಮ್ಮಿಡಿಪೂಂಡಿಯಲ್ಲಿ 10ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಅಪರಾಧಿಯನ್ನು ಇನ್ನೂ ಬಂಧಿಸಲಾಗಿಲ್ಲ, ಡಿಎಂಕೆ ಆಡಳಿತದಲ್ಲಿ ಯುವತಿಯರು, ಮಹಿಳೆಯರು ಮತ್ತು ವೃದ್ಧರು ಸಹ ಸುರಕ್ಷಿತವಾಗಿಲ್ಲ ಎಂದು ಹೇಳಿದರು.

ಇದಕ್ಕೂ ಮೊದಲು, ಪಕ್ಷದ ಹಿರಿಯರೊಂದಿಗೆ ಪಳನಿಸ್ವಾಮಿ, ವೆಲಾಂಕಣಿ ಚರ್ಚ್ ಎಂದೂ ಕರೆಯಲ್ಪಡುವ ಬೆಸಿಲಿಕಾ ಆಫ್ ಅವರ್ ಲೇಡಿ ಆಫ್ ಹೆಲ್ ಗೆ ಭೇಟಿ ನೀಡಿ, ಮೇಣದಬತ್ತಿಯನ್ನು ಬೆಳಗಿಸಿ ಪ್ರಾರ್ಥನೆ ಸಲ್ಲಿಸಿದರು. ನಾಗಪಟ್ಟಣಂನಲ್ಲಿ ರೋಡ್ ಶೋ ಅನ್ನು ಉದ್ದೇಶಿಸಿ ಮಾತನಾಡುವಾಗ, ನೆರೆಹೊರೆಯ ಮುಸ್ಲಿಮರು ತಮ್ಮ ಸಂಜೆ ಪ್ರಾರ್ಥನೆಯನ್ನು ಮುಗಿಸುವವರೆಗೆ ಅವರು ತಮ್ಮ ಪ್ರಚಾರ ವಾಹನದಿಂದ ಕೆಲವು ನಿಮಿಷಗಳ ಕಾಲ ವಿರಾಮಗೊಳಿಸಿದರು.

ಅಂತಹ ಸರ್ಕಾರ ಮುಂದುವರಿಯಬೇಕೆಂದು ನೀವು ಬಯಸುತ್ತೀರಾ? ಎಂದು ಮಾಜಿ ಸಿಎಂ ಪ್ರಶ್ನಿಸಿದ್ದಾರೆ. ಬ್ರಿಟಿಷರ ವಿರುದ್ಧ ಉಪ್ಪಿನ ಸತ್ಯಾಗ್ರಹಕ್ಕೆ ಹೆಸರುವಾಸಿಯಾದ ವೇದಾರಣ್ಯಂನಲ್ಲಿ ಮಾತನಾಡಿದ ಪಳನಿಸ್ವಾಮಿ, ಪ್ರಸ್ತುತ ಡಿಎಂಕೆ ಆಡಳಿತದಿಂದ ಜನರು ಎಲ್ಲಾ ರಂಗಗಳಲ್ಲಿಯೂ ಭ್ರಮನಿರಸನಗೊಂಡಿದ್ದಾರೆ ಮತ್ತು ಮುಂದಿನ ವರ್ಷದ ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆ ಪಕ್ಷವನ್ನು ಸೋಲಿಸಲುನಾರಿಯರು ಸಿದ್ದರಾಗಿದ್ದಾರೆ ಎಂದು ಹೇಳಿದರು.

# ದೇಶ್ ಬಚಾವ್ರೋ, ಬಿಜೆಪಿ ಹಟಾವ್ರೋ

## ಆರ್‌ಎಸ್‌ಎಸ್ ಸಿಪಿಐ (ಎಂ) ಎರಡೂ ಒಂದೇ ; ರಾಹುಲ್ ಗಾಂಧಿ ಹೇಳಿಕೆಗೆ ಇಂಡಿಯಾ ವಿರೋಧ



**ಜನರ ಬಗ್ಗೆ ಕಾಳಜಿ ಇಲ್ಲ**

**ಹೊಸದಿಲ್ಲಿ:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ಆರ್‌ಎಸ್‌ಎಸ್, ಸಿಪಿಐ (ಎಂ) ಅನ್ನು ಒಂದೇ ಎಂದು ಹೇಳಿಕೆ ನೀಡಿದ್ದು ಇಂಡಿ ಬಣದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಎಡಪಕ್ಷದ ನಾಯಕರು ಈ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಿದರು. ಕೇರಳದಲ್ಲಿ ಗಾಂಧಿಯವರು ನೀಡಿದ ಹೇಳಿಕೆಗಳು ಸರಿಯಿಲ್ಲವೆಂದು ಎಡಪಕ್ಷದ ನಾಯಕರು ಎಚ್ಚರಿಸಿದ್ದಾರೆ. ಈ ಹೇಳಿಕೆಗಳು ಕಾರ್ಯಕರ್ತರಿಗೆ ತಪ್ಪು ಸಂದೇಶವನ್ನು ರವಾನಿಸಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಇಂಡಿ ಬಣದ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿದೆ. ಮುಂಬರುವ ಸಂಸತ್ ಅಧಿವೇಶನದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲು ನಿರ್ಧರಿಸಲಾಗಿದೆ.

ರಾಹುಲ್ ಗಾಂಧಿಯವರು ಕೊಟ್ಟಾಯಂನಲ್ಲಿ ಮಾತನಾಡುತ್ತಾ ಆರ್‌ಎಸ್‌ಎಸ್, ಸಿಪಿಐ ಸಿದ್ಧಾಂತಗಳನ್ನು ವಿರೋಧಿಸುವುದಾಗಿ ಹೇಳಿದರು. ಅವರಿಗೆ ಜನರ ಬಗ್ಗೆ ಕಾಳಜಿ ಇಲ್ಲ ಎಂದು ಟೀಕಿಸಿದರು. ನಾನು ಅವರ ಸಿದ್ಧಾಂತಗಳನ್ನು, ಭಾಷಣಗಳನ್ನು ವಿರೋಧಿಸುತ್ತೇನೆ. ಅವರಿಗೆ ಜನರ ಬಗ್ಗೆ ಕಾಳಜಿ ಇಲ್ಲ ಎಂಬುದು ನನ್ನ ದೊಡ್ಡ ದೂರು ಎಂದು ಅವರು ಹೇಳಿದರು. ರಾಜಕೀಯದಲ್ಲಿದ್ದರೆ ಜನರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕು, ಅವರ ಮಾತನ್ನು ಕೇಳಬೇಕು, ಅವರನ್ನು ಸ್ಪರ್ಶಿಸಬೇಕು. ಭಾರತೀಯ ರಾಜಕಾರಣದಲ್ಲಿ ಇಂದು ಬಹಳ ಕಡಿಮೆ ಜನರು ಇತರರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತಿದ್ದಾರೆ ಎಂದು ಅವರು ವಿಷಾದಿಸಿದರು. ಸಿಪಿಐ ನಾಯಕ ಡಿ.ರಾಜಾ ಅವರು ರಾಹುಲ್ ಗಾಂಧಿಯವರ ಹೆಸರನ್ನು ಹೇಳದೆ ಈ ವಿಷಯವನ್ನು ಪ್ರಸ್ತಾಪಿಸಿದರು.

ಎಡಪಕ್ಷಗಳನ್ನು ಆರ್‌ಎಸ್‌ಎಸ್ ಜೊತೆ ಹೋಲಿಸುವುದು ಸರಿಯಲ್ಲ ಇದು ಕಾರ್ಯಕರ್ತರಲ್ಲಿ ಗೊಂದಲವನ್ನು ಉಂಟುಮಾಡುತ್ತದೆ, ಮೈತ್ರಿಗೆ ಹಾನಿ ಮಾಡುತ್ತದೆ ಎಂದು ಅವರು ಹೇಳಿದರು.

ಇಂಡಿ ಬಣವು ದೇಶ್ ಬಚಾವ್ರೋ, ಬಿಜೆಪಿ ಹಟಾವ್ರೋ ಎಂಬ ಘೋಷಣೆಯೊಂದಿಗೆ ಪ್ರಾರಂಭವಾಯಿತು. ಆದ್ದರಿಂದ, ಮೈತ್ರಿಯಲ್ಲಿ ಭಿನ್ನಾಭಿಪ್ರಾಯ ಮೂಡಿಸುವ ಹೇಳಿಕೆಗಳನ್ನು ಯಾರೂ ನೀಡಬಾರದು ಎಂದು ಅವರು ಹೇಳಿದರು.

ನಾವು ಸ್ವತಂತ್ರವಾಗಿ ಟೀಕೆಗಳನ್ನು ಮಾಡುತ್ತೇವೆ. ಆದರೆ, ನಾವು ಎಂದಿಗೂ ಕಾಂಗ್ರೆಸ್‌ಅನ್ನು ಬಿಜೆಪಿ, ಆರ್‌ಎಸ್‌ಎಸ್‌ಗೆ ಹೋಲಿಸುವುದಿಲ್ಲ ಎಂದು ಬೇಬಿ ಹೇಳಿದರು. ಕೇರಳದಲ್ಲಿ ಆರ್‌ಎಸ್‌ಎಸ್ ಅನ್ನು ಎದುರಿಸುವಲ್ಲಿ ಅವರ ಪಕ್ಷದ ಐತಿಹಾಸಿಕ ಪಾತ್ರದ ಬಗ್ಗೆ ಗಾಂಧಿಯವರಿಗೆ ತಿಳಿದಿದೆಯೇ ಎಂದು ಅವರು ಪ್ರಶ್ನಿಸಿದರು. ಕೇರಳದಲ್ಲಿ ಆರ್‌ಎಸ್‌ಎಸ್ ಅನ್ನು ಎದುರಿಸುವಲ್ಲಿ ಕಾಂಗ್ರೆಸ್‌ನ ದಾಖಲೆ ಏನು ಎಂದು ರಾಹುಲ್ ಗಾಂಧಿಗೆ ತಿಳಿದಿದೆಯೇ ಎಂದು ನನಗೆ ಗೊತ್ತಿಲ್ಲ ಎಂದು ಬೇಬಿ ಹೇಳಿದರು. INDIA ಬಣದ ಸಭೆಯಲ್ಲಿ ಮುಂಬರುವ ಸಂಸತ್ ಮುಂಗಾರು ಅಧಿವೇಶನದಲ್ಲಿ ಹಲವು ವಿಷಯಗಳನ್ನು ಪ್ರಸ್ತಾಪಿಸಲು ನಿರ್ಧರಿಸಲಾಯಿತು. ಪೆಹಲ್ಗಾಮ್ ದಾಳಿ ಮತ್ತು ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯಿಂದ ಮತದಾನದ ಹಕ್ಕಿಗೆ ಉಂಟಾಗುವ ಬೆದರಿಕೆಗಳ ಬಗ್ಗೆ ಚರ್ಚಿಸಲು ನಿರ್ಧರಿಸಲಾಯಿತು. ಜುಲೈ 23-24 ರಂದು ಜಂತರ್ ಮಂತರ್ ನಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ವಿಷಯದ ಬಗ್ಗೆ ಪ್ರತಿಭಟನಾ ಮೆರವಣಿಗೆಯನ್ನು ಯೋಜಿಸಲಾಗಿದೆ. ರಾಹುಲ್ ಗಾಂಧಿಯವರ ಹೇಳಿಕೆ INDIA ಬಣದಲ್ಲಿ ಬಿರುಕು ಮೂಡಿಸಿದೆ.

ರಾಹುಲ್ ಗಾಂಧಿಯವರ ಹೇಳಿಕೆಯನ್ನು ಕಾಂಗ್ರೆಸ್ ಪಕ್ಷದ ಹಲವು ನಾಯಕರು ಸಮರ್ಥಿಸಿಕೊಂಡಿದ್ದಾರೆ. ಆದರೆ, ಎಡಪಕ್ಷಗಳು ಮಾತ್ರ ತೀವ್ರ ವಿರೋಧ ವ್ಯಕ್ತಪಡಿಸಿವೆ. ಈ ವಿವಾದವು INDIA ಬಣದಲ್ಲಿ ಬಿರುಕು ಮೂಡಿಸಿದೆ. ಮುಂಬರುವ ದಿನಗಳಲ್ಲಿ ಈ ಬಿಕ್ಕಟ್ಟು ಯಾವ ಸ್ವರೂಪ ಪಡೆಯುತ್ತದೆ ಎಂಬುದನ್ನು ಕಾದು ನೋಡಬೇಕಿದೆ. ರಾಹುಲ್ ಗಾಂಧಿಯವರು ಕೇರಳದಲ್ಲಿ ಮಾತನಾಡುತ್ತಾ CPI(M), RSS ಎರಡೂ ಒಂದೇ ರೀತಿಯ ಸಿದ್ಧಾಂತವನ್ನು ಹೊಂದಿವೆ ಎಂದು ಹೇಳಿದ್ದರು. ಎರಡೂ ಪಕ್ಷಗಳಿಗೂ ಜನರ ಬಗ್ಗೆ ಕಾಳಜಿ ಇಲ್ಲ ಎಂದು ಟೀಕಿಸಿದ್ದರು. ಈ ಹೇಳಿಕೆಗೆ CPI(M) ನಾಯಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. INDIA ಬಣದ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ, ಇಂತಹ ಹೇಳಿಕೆಗಳು ಮೈತ್ರಿಗೆ ಹಾನಿ ಉಂಟುಮಾಡುತ್ತವೆ ಎಂದು ಎಚ್ಚರಿಸಿದ್ದಾರೆ.

**ಅವರಿಗಿರುವ ತಿಳುವಳಿಕೆಯ ಕೊರತೆ**

ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ.ಬೇಬಿ ಅವರು ಗಾಂಧಿಯವರ ಹೇಳಿಕೆಯನ್ನು ಟೀಕಿಸಿದ್ದಾರೆ. ಇದು ಕೇರಳ ಮತ್ತು ಭಾರತದ ರಾಜಕೀಯ ವಾಸ್ತವತೆಯ ಬಗ್ಗೆ ಅವರಿಗಿರುವ ತಿಳುವಳಿಕೆಯ ಕೊರತೆಯನ್ನು ತೋರಿಸುತ್ತದೆ ಎಂದು ಅವರು ಹೇಳಿದ್ದಾರೆ. ಸಿಪಿಐ( ಎಂ), ಆರ್ ಎಸ್‌ಎಸ್ ಅನ್ನು ಒಂದೇ ಎಂದು ಹೇಳಿರುವುದು, ಸಿಪಿಐ( ಎಂ), ಆರ್‌ಎಸ್‌ಎಸ್ ಪಾತ್ರದ ಬಗ್ಗೆ ರಾಹುಲ್ ಗಾಂಧಿಯವರಿಗೆ ಸರಿಯಾದ ತಿಳುವಳಿಕೆ ಇಲ್ಲ ಎಂಬುದನ್ನು ತೋರಿಸುತ್ತದೆ ಎಂದು ಬೇಬಿ xನಲ್ಲಿ ಪೋಸ್ಟ್ ಮಾಡಿದ್ದಾರೆ.

2004ರಲ್ಲಿ ಕಾಂಗ್ರೆಸ್ ಸರ್ಕಾರವು ಎಡಪಕ್ಷಗಳ ಬೆಂಬಲವಿಲ್ಲದೆ ರಚನೆಯಾಗಲು ಸಾಧ್ಯವಿರಲಿಲ್ಲ ಎಂಬುದನ್ನು ಅವರು ನೆನಪಿಸಿದರು. 2004ರಲ್ಲಿ ಮನಮೋಹನ್ ಸಿಂಗ್ ಅವರು ಸಿಪಿಐ( ಎಂ), ಇತರ ಎಡಪಕ್ಷಗಳ ಬೆಂಬಲವಿಲ್ಲದೆ ಸರ್ಕಾರವನ್ನು ರಚಿಸಲು ಸಾಧ್ಯವಾಗುತ್ತಿರಲಿಲ್ಲ ಎಂಬುದನ್ನು ರಾಹುಲ್ ಗಾಂಧಿ ನೆನಪಿಟ್ಟುಕೊಳ್ಳಬೇಕು. 2004ರ ಚುನಾವಣೆಯ ನಂತರ ಕಾಂಗ್ರೆಸ್‌ಗೆ ಲೋಕಸಭೆಯಲ್ಲಿ ಬಹುಮತವಿರಲಿಲ್ಲ ಎಂದು ಅವರು ಹೇಳಿದರು.

## ಮಿನಿ ನ್ಯೂಸ್

### ಉದ್ಯಮಿಯನ್ನು ಕಟ್ಟಿಹಾಕಿ ಚಿನ್ನ,ಹಣ ಲೂಟಿ

**ಪುಣೆ:** ಬಂಗಲೆಯೊಂದಕ್ಕೆ ದರೋಡೆಕೋರರು ನುಗ್ಗಿ,ಉದ್ಯಮಿಯನ್ನು ಕಟ್ಟಿಹಾಕಿ ಚಿನ್ನಾಭರಣ, ಬೆಲೆಬಾಳುವ ವಸ್ತುಗಳೊಂದಿಗೆ ಪರಾರಿಯಾಗಿರುವ ಘಟನೆ ನಗರದಲ್ಲಿ ನಡೆದಿದೆ. ಪಿಂಪ್ರಿ ಚಿಂಚ್‌ವಾಡ್‌ನ ನಿಗ್ಡಿ ಪ್ರಾಧಿಕಾರ ಪ್ರದೇಶದಲ್ಲಿ ಕಳೆದ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಾಥಮಿಕ ತನಿಖೆಯ ಪ್ರಕಾರ ಮೂರರಿಂದ ನಾಲ್ಕು ದುಷ್ಕರ್ಮಿಗಳು ಬಂಗಲೆಗೆ ನುಗ್ಗಿ, ವೃದ್ಧ ಉದ್ಯಮಿಯನ್ನು ಬೆದರಿಸಿ ಕೈಗಳನ್ನು ಕಟ್ಟಿಹಾಕಿ ಮನೆಯನ್ನೆಲಾ ಜಾಲಾಡಿ ವಸ್ತುಗಳನ್ನು ದೋಚಲಾಗಿದೆ ಎಂದು ಪಿಂಪ್ರಿ ಚಿಂಚ್‌ವಾಡ್‌ನ ಉಪ ಪೊಲೀಸ್ ಆಯುಕ್ತ ಶಿವಾಜಿ ಪವಾರ್‌ತಿಳಿಸಿದ್ದಾರೆ. ಮನೆಯಿಂದ ಏನು ಕದ್ದಿದ್ದಾರೆ ಎಂದು ಇನ್ನೂ ಸರಿಯಾಗಿ ಗೊತ್ತಾಗಿಲ್ಲ ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅವರು ಹೇಳಿದರು.

### 3 ಮಕ್ಕಳೊಂದಿಗೆ ದಂಪತಿ ಆತ್ಮಹತ್ಯೆ

**ಅಹಮದಾಬಾದ್:** ಗುಜರಾತ್‌ನ ಬಗೋದರ ಗ್ರಾಮದ ಮನೆಯೊಂದರಲ್ಲಿ ಭಾನುವಾರ ಮುಂಜಾನೆ ದಂಪತಿ, ಅವರ ಮೂವರು ಮಕ್ಕಳ ಶವಗಳು ಪತ್ತೆಯಾಗಿದ್ದು, ಇದು ಸಾಮೂಹಿಕ ಆತ್ಮಹತ್ಯೆ ಎಂದು ಪೊಲೀಸರು ಶಂಕಿಸಿದ್ದಾರೆ. ಮೃತರನ್ನು ವಿಪುಲ್ ವಘ್‌ಲಾ(32), ಅವರ ಪತ್ನಿ ಸೋನಾಲ್(26), ಅವರ ಮಕ್ಕಳಾದ ಕರೀನಾ(11), ಮಯೂರ್(8), ಪ್ರಿನ್ಸೆಸ್(5) ಎಂದು ಗುರುತಿಸಲಾಗಿದೆ ಎಂದು ಬಗೋದರ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸ್ಥಳೀಯರ ಮಾಹಿತಿ ಮೇಲೆ ಬೆಳಗಿನ ಜಾವ 2 ಗಂಟೆ ಸುಮಾರಿಗೆ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಘಟನೆ ಬೆಳಕಿಗೆ ಬಂದಿದೆ ಎಂದು ಅಹಮದಾಬಾದ್ ಪೊಲೀಸ್ ವರಿಷ್ಠಾಧಿಕಾರಿ ಓಂ ಪ್ರಕಾಶ್ ಜಾಟ್ ತಿಳಿಸಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ ಇವರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತೋರುತ್ತದೆ. ಇದರ ಹಿಂದಿನ ಕಾರಣವನ್ನು ಕಂಡುಹಿಡಿಯಲು ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅವರು ಹೇಳಿದರು. ದಂಪತಿ-ಮಕ್ಕಳು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದು, ವಿಪುಲ್ ವಘ್‌ಲಾ ಜೀವನೋಪಾಯಕ್ಕಾಗಿ ಆಟೋರಿಕ್ಷಾ ಓಡಿಸುತ್ತಿದ್ದರು ಎಂದು ಅಧಿಕಾರಿ ಹೇಳಿದರು. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದ್ದು, ಘಟನೆಯಿಂದ ಗ್ರಾಮಸ್ಥರು ಬೆಚ್ಚಿಬಿದ್ದಿದ್ದಾರೆ.

### ಡೆಲ್ಟಾದ ಬೋಯಿಂಗ್ ವಿಮಾನದಲ್ಲಿ ಕಾಣಿಸಿಕೊಂಡ ಬೆಂಕಿ: ತುರ್ತು ಭೂಸ್ಪರ್ಶ

**ಲಾಸ್ ಏಂಜಲೀಸ್:** ಡೆಲ್ಟಾ ಏರ್‌ಲೈನ್ಸ್ ವಿಮಾನಯಾನ ಸಂಸ್ಥೆಗೆ ಸೇರಿದ ಬೋಯಿಂಗ್ 767 ವಿಮಾನದ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡ ಪರಿಣಾಮ ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ. ಈ ಘಟನೆ ರಾತ್ರಿ ನಡೆದಿದೆ ಎಂದು ವಿಮಾನಯಾನ ಕಂಪನಿಯ ಅಧಿಕಾರಿಗಳು ಹೇಳಿದ್ದಾರೆ. ಇದು ಅಟ್ಲಾಂಟಾಗೆ ತೆರಳುತ್ತಿದ್ದು ಇದರಲ್ಲಿ ಸಿಬ್ಬಂದಿ ಸೇರಿ 200ಕ್ಕೂ ಹೆಚ್ಚು ಪ್ರಯಾಣಿಕರಿದ್ದರು. ಎಲ್ಲರೂ ಸುರಕ್ಷಿತರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಮಾನ ಆಗಸದಲ್ಲಿ ಹಾರುತ್ತಿರುವಾಗ ಎಡ ಎಂಜಿನ್‌ನಲ್ಲಿ ಬೆಂಕಿಯ ಜ್ವಾಲೆಗಳು ಕಾಣುತ್ತಿರುವುದು ವಿಡಿಯೋದಲ್ಲಿ ಸೆರೆಯಾಗಿವೆ. ಈ ದೃಶ್ಯಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

24 ವರ್ಷ ಹಳೆಯ ಬೋಯಿಂಗ್-767 ವಿಮಾನದ ಎಂಜಿನಲ್ಲಿ ಬೆಂಕಿ ಕಾಣಿಸಿಕೊಂಡಿರವುದನ್ನು ಗಮನಿಸಿದ ಪೈಲಟ್‌ಗಳು ತಕ್ಷಣವೇ ತುರ್ತು ಪರಿಸ್ಥಿತಿ ಘೋಷಿಸಿದರು. ವಿಮಾನ ವಾಪಸಾತಿಗಾಗಿ ವಾಯು ಸಂಚಾರ ನಿಯಂತ್ರಣದೊಂದಿಗೆ ಸಮನ್ವಯ ಸಾಧಿಸಿದರು. ಕೆಲ ನಿಮಿಷಗಳ ಕಾಲ ವಿಮಾನ ಪೆಸಿಫಿಕ್ ಮಹಾಸಾಗರದ ಮೇಲೆ ಹಾರಾಡಿದ ಬಳಿಕ ತುರ್ತು ಭೂಸ್ಪರ್ಶ ಮಾಡಿತು. ಕೂಡಲೇ ಅಗ್ನಿ ಶಾಮಕ, ತುರ್ತು ಸಿಬ್ಬಂದಿ ಬೆಂಕಿ ನಂದಿಸಿದರು ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ಹೇಳಿದ್ದಾರೆ.

### ರಾಜೀನಾಮೆ ಹಿಂಪಡೆದ ಎಎಪಿ ಶಾಸಕಿ ಅನ್ಮೋಲ್

**ಚಂಡೀಗಢ:** ವಿಧಾನಸಭೆಯ ಸದಸ್ಯತ್ವಕ್ಕೆ ಸ್ಥಾನಕ್ಕೆ ರಾಜೀನಾಮೆ ನೀಡಿ, ರಾಜಕೀಯದಿಂದ ದೂರ ಉಳಿಯುವುದಾಗಿ ಘೋಷಿಸಿದ್ದ ಆಮ್ ಆದ್ಮಿ ಪಕ್ಷದ ಶಾಸಕಿ ಅನ್ಮೋಲ್ ಗಗನ್ ಮಾನ್‌ಅವರು ತಮ್ಮ ನಿರ್ಧಾರವನ್ನು ಹಿಂಪಡೆದಿದ್ದಾರೆ. ಪಂಜಾಬ್‌ನ ಎಎಪಿ ಘಟಕದ ಅಧ್ಯಕ್ಷ ಅಮನ್ ಅರೋರ ಅವರು ಅನಮೋಲ್ ಅವರನ್ನು ಭೇಟಿಯಾಗಿ, ಪಕ್ಷ ಮತ್ತು ಕ್ಷೇತ್ರಕ್ಕಾಗಿ ತಮ್ಮ ಕೆಲಸವನ್ನು ಮುಂದುವರಿಸುವಂತೆ ಕೇಳಿಕೊಂಡರು. ಬಳಿಕ ತಮ್ಮ ಸ್ಥಾನದಲ್ಲಿ ಮುಂದುವರಿಯುವುದಾಗಿ ಅನ್ಮೋಲ್ ತಿಳಿಸಿದ್ದಾರೆ. ಈ ಬಗ್ಗೆ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅರೋರ ಅವರು ರಾಜೀನಾಮೆಯನ್ನು ತಿರಸ್ಕರಿಸಲು ಪಕ್ಷ ನಿರ್ಧರಿಸಿರುವುದಾಗಿ ಅನ್ಮೋಲ್ ಅವರಿಗೆ ತಿಳಿಸಿದೆವು. ಪಕ್ಷ ಹಾಗೂ ತಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ ಜೊತೆಯಾಗಿ ಕೆಲಸ ಮಾಡುವಂತೆ ಕೇಳಿದೆವು. ಈಗ ಅವರು ನಮ್ಮ ಪಕ್ಷದ ಕುಟುಂಬದ ಭಾಗವಾಗಿ ಉಳಿಯಲಿದ್ದಾರೆ ಎಂದು ಹೇಳಿದ್ದಾರೆ.

### ನಿರಂತರ ಮಳೆ: ಕೇರಳದ ಒಂಬತ್ತು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್



**ತಿರುವನಂತಪುರಂ:** ಕೇರಳದ ಹಲವು ಜಿಲ್ಲೆಗಳಲ್ಲಿ ತೀವ್ರ ಮಳೆಯಾಗುತ್ತಿರುವ ಕಾರಣ ನದಿ ನೀರಿನ ಮಟ್ಟ ಏರಿಕೆಯಾಗಿ ತಗ್ಗು ಪ್ರದೇಶದಲ್ಲಿ ಪ್ರವಾಹ ಸೃಷ್ಟಿಯಾಗಿದ್ದು, ಭಾರತೀಯ ಹವಮಾನ ಇಲಾಖೆ ಒಂಬತ್ತು ಜಿಲ್ಲೆಗಳಿಗೆ ಆರೆಂಜ್ ಅಲರ್ಟ ಘೋಷಿಸಿದೆ. ಎರ್ನಾಕುಲಂ, ಇಡುಕ್ಕಿ, ತ್ರಿಶೂರ್, ಪಾಲಕ್ಕಾಡ್, ಮಲಪ್ಪುರಂ, ಕೋಯಿಕ್ಕೋಡ್, ವಯನಾಡು, ಕಣ್ಣೂರು, ಕಾಸರಗೋಡು ಜಿಲ್ಲೆಗಳಿಗೆ ಆರೆಂಜ್ ಅಲರ್ಟ ಘೋಷಿಸಲಾಗಿದ್ದು. ಇನ್ನುಳಿದ ಐದು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ ಘೋಷಿಸಿದೆ. ರಾಜ್ಯದಾದ್ಯಂತ ಸಾಧಾರಣವಾಗಿ ಮಳೆ ಆಗಲಿದೆ ಮತ್ತು ಗಂಟೆಗೆ 40 ಕಿ.ಮೀ.ಮಳೆಯಾಗಲಿದೆ ಎಂದು ಭಾರತೀಯ ಹವಮಾನ ಇಲಾಖೆ ತಿಳಿಸಿದೆ. ಜಿಲ್ಲೆಯಲ್ಲಿನ ಎಲ್ಲಾ ಅಣೆಕಟ್ಟುಗಳ ಗೇಟ್‌ಗಳನ್ನು ತೆರೆಯಲಾಗಿದೆ ಎಂದು ಪಾಲಕ್ಕಾಡ್ ಜಿಲ್ಲಾಡಳಿತ ತಿಳಿಸಿದೆ. ನೀರಾವರಿ ವಿನ್ಯಾಸ ಮತ್ತು ಸಂಶೋಧನಾ ಮಂಡಳಿಯು ಪತ್ತನಂತಿಟ್ಟ ಜಿಲ್ಲೆಯ ಮಣಿಮಾಲ ಮತ್ತು ಕಾಸರಗೋಡು ಜಿಲ್ಲೆ ಯ್ ಮೊಗ್ರಾಲ್ ನದಿಗಳ ಮಟ್ಟ ತೀವ್ರವಾಗುತ್ತಿರುವ ಕಾರಣ ಅಪಾಯದ ಎಚ್ಚರಿಕೆ ನೀಡಿದೆ. ನದಿ ಸಮೀಪದಲ್ಲಿ ವಾಸವಿರುವ ಜನರಿಗೆ ಸುರಕ್ಷಿತವಾಗಿರಲು ಜಿಲ್ಲಾ ಆಡಳಿತವು ಸೂಚಿಸಿದ್ದು, ಪರಿಸ್ಥಿತಿ ಬಿಗಡಾಯಿಸಿದರೆ ಸುರಕ್ಷಿತ ಸ್ಥಳಗಳಿಗೆ ತೆರಳಲು ಸಿದ್ಧವಿರಬೇಕು ಎಂದು ಹೇಳಿದೆ.







## ನಾನು ಬಿಗ್ ಬಾಸ್‌ಗೆ ಬರಲ್ಲ ಭದ್ರ ಸಿನಿಮಾ ನಟಿ

ಡೈಸಿ ಶಾ ಅವರು ಸಲ್ಮಾನ್ ಖಾನ್ ಅವರ ಬಿಗ್ ಬಾಸ್ 19 ರ ವದಂತಿಗಳಿಗೆ ತೆರೆ ಎಳೆದಿದ್ದಾರೆ. ಅವರು ಸಾಮಾಜಿಕ ಜಾಲತಾಣದಲ್ಲಿ ತಾವು ಈ ರಿಯಾಲಿಟಿ ಶೋನಲ್ಲಿ ಭಾಗವಹಿಸುತ್ತಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇತ್ತೀಚೆಗೆ ಭೋಜ್ ಪುರಿ ಹಾಡಿನಲ್ಲಿ ಕಾಣಿಸಿಕೊಂಡ ಡೈಸಿ, ಕನ್ನಡ ಸಿನಿಮಾಗಳಲ್ಲೂ ನಟಿಸಿದ್ದಾರೆ. 'ಸಲ್ಮಾನ್ ಖಾನ್ ಅವರ ರಿಯಾಲಿಟಿ ಶೋ ಬಿಗ್ ಬಾಸ್ ಮತ್ತೆ ಸುದ್ದಿಯಲ್ಲಿದೆ. ಅದರ 19 ನೇ ಸೀಸನ್ ಶೀಘ್ರದಲ್ಲೇ ಪ್ರಾರಂಭವಾಗಲಿದೆ. ಆದಾಗ್ಯೂ, ಕಾರ್ಯಕ್ರಮದಲ್ಲಿ ಭಾಗವಹಿಸುವ ತಾರೆಯರ ಹೆಸರುಗಳು ಚರ್ಚೆಯಲ್ಲಿ ಇದೆ. ಅವರಲ್ಲಿ, ಸಲ್ಮಾನ್ ಖಾನ್ ಅವರ ನಟಿ ಡೈಸಿ ಶಾ ಅವರ ಹೆಸರೂ ಸುದ್ದಿಯಲ್ಲಿತ್ತು. ಅವರು ಕೂಡ ಈ ಕಾರ್ಯಕ್ರಮದ ಭಾಗವಾಗುತ್ತಾರೆ ಎಂಬ ಊಹಾಪೋಹಗಳಿದ್ದವು. ಆದಾಗ್ಯೂ, ಈಗ ನಟಿ ಸ್ವತಃ ಈ ವದಂತಿಗಳ ಬಗ್ಗೆ ಮೌನ ಮುರಿದಿದ್ದಾರೆ ಮತ್ತು ಅದರ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಈ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ.

ಬಿಗ್ ಬಾಸ್ 19 ಟಿವಿಯಲ್ಲಿ ಬರಲು ಸಿದ್ಧವಾಗಿದೆ. ಇದಕ್ಕಾಗಿ ಅನೇಕ ತಾರೆಯರನ್ನು ಸಂಪರ್ಕಿಸಲಾಗಿದೆ. ಆದಾಗ್ಯೂ, ಸ್ಪರ್ಧಿಗಳ ಪಟ್ಟಿಯನ್ನು ತಯಾರಕರು ಇನ್ನೂ ದೃಢಪಡಿಸಿಲ್ಲ. ಆದರೆ, ಸ್ಪರ್ಧಿಗಳ ಬಗ್ಗೆ ಊಹಾಪೋಹಗಳು ಪ್ರಾರಂಭವಾಗಿವೆ. ಡೈಸಿ ಶಾ ಕೂಡ ಕಾರ್ಯಕ್ರಮಕ್ಕೆ ಸೇರಬಹುದು ಎಂದು ಹೇಳಲಾಗುತ್ತಿತ್ತು. ಆದರೆ, ಡೈಸಿ ತನ್ನ ಸಾಮಾಜಿಕ ಮಾಧ್ಯಮದಲ್ಲಿ ಒಂದು ಸ್ಟೋರಿ ಹಂಚಿಕೊಳ್ಳುವ ಮೂಲಕ ಈ ಊಹಾಪೋಹಗಳಿಗೆ ಅಂತ್ಯ ಹಾಡಿದ್ದಾರೆ. ಡೈಸಿ ತನ್ನ ಅಧಿಕೃತ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ತಾನು ಬಿಗ್ ಬಾಸ್‌ಗೆ ಸೇರುತ್ತಿಲ್ಲ ಮತ್ತು ಎಂದಿಗೂ ಸೇರುವುದಿಲ್ಲ ಎಂದು ಹಂಚಿಕೊಂಡಿದ್ದಾರೆ. ಎಲ್ಲಾ ವದಂತಿಗಳಿಗೆ ಅಂತ್ಯ ಹಾಡುತ್ತಾ ಅವರು ಬರೆದಿದ್ದಾರೆ, 'ನಾನು ಬಿಗ್ ಬಾಸ್‌ನಲ್ಲಿ ಭಾಗವಹಿಸುತ್ತಿಲ್ಲ ಮತ್ತು ಬಹುಶಃ ಎಂದಿಗೂ ಮಾಡುವುದಿಲ್ಲ, ಧನ್ಯವಾದಗಳು' ಎಂದು ಅವರು ಬರೆದಿದ್ದಾರೆ. ನಟಿಯ ಅವರು ಸಲ್ಮಾನ್ ಖಾನ್ ಅವರೊಂದಿಗೆ 'ಜೈ ಹೋ' ಚಿತ್ರದಲ್ಲಿ ಕಾಣಿಸಿಕೊಂಡರು.

## ಹೊಸ ಬ್ಯುಸಿನೆಸ್ ಶುರು ಮಾಡಿದ ರಶ್ಮಿಕಾ ಮಂದಣ್ಣ

ಸ್ಯಾಂಡಲ್‌ವುಡ್‌ನಿಂದ ಇದೀಗ ಭಾರತೀಯ ಚಿತ್ರರಂಗದಲ್ಲಿ ನಟಿ ರಶ್ಮಿಕಾ ಮಂದಣ್ಣ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಬ್ಯಾಕ್ ಟು ಬ್ಯಾಕ್ ಸಿನಿಮಾಗಳಲ್ಲಿ ಕಮಾಯಿ ಮಾಡುತ್ತಿರುವ ರಶ್ಮಿಕಾ ಮಂದಣ್ಣ ಇದೀಗ ಬ್ಯುಸಿನೆಸ್ ಕ್ಷೇತ್ರಕ್ಕೂ ಕಾಲಿಟ್ಟಿದ್ದಾರೆ. ಈ ಬಗ್ಗೆ ರಶ್ಮಿಕಾ, ತಮ್ಮ ತಾಯಿ ಅವರೊಂದಿಗಿನ ವಿಡಿಯೋ ಕಾಲ್‌ನ ಸಂಭಾಷಣೆ ಮೂಲಕ ಅಭಿಮಾನಿಗಳೊಂದಿಗೆ ಶೇರ್ ಮಾಡಿಕೊಂಡಿದ್ದಾರೆ.

ರಶ್ಮಿಕಾ ಮಂದಣ್ಣ ಸ್ಟಾರ್ ನಟಿಯಾಗಿ ಭಾರತೀಯ ಚಿತ್ರರಂಗದಲ್ಲಿ ಮಿಂಚುತ್ತಿದ್ದಾರೆ. ಸ್ಟಾರ್ ನಟರೊಂದಿಗೆ ಬ್ಯಾಕ್ ಟು ಬ್ಯಾಕ್ ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಅವರ ಸಿನಿಮಾಗಳು ಬಾಕ್ಸಾಫೀಸ್‌ನಲ್ಲಿ ಸದ್ದು ಮಾಡುತ್ತಿವೆ. ಕನ್ನಡದ ಕಿರಿಕ್ ಪಾರ್ಟಿ ಸಿನಿಮಾ ಮೂಲಕ ಬಣ್ಣದ ಲೋಕಕ್ಕೆ ಎಂಟ್ರಿ ಕೊಟ್ಟಿದ್ದ ರಶ್ಮಿಕಾ ಮಂದಣ್ಣ, ತೆಲುಗು, ತಮಿಳು ಹಾಗೂ ಹಿಂದಿ ಸಿನಿಮಾಗಳಲ್ಲಿ ಬಹುಬೇಡಿಕೆಯ ನಟಿಯಾಗಿ ಗುರುತಿಸಿಕೊಂಡಿದ್ದಾರೆ.

ಈ ನಡುವೆ ಹೊಸ ಬ್ಯುಸಿನೆಸ್ ಕೂಡ ಶುರು ಮಾಡಿದ್ದಾರೆ. ನಟಿ ರಶ್ಮಿಕಾ ಮಂದಣ್ಣ ಹೊಸ ಬ್ಯುಸಿನೆಸ್ ಶುರು ಮಾಡಿದ್ದಾರೆ. ಈ ಬಗ್ಗೆ ಇತ್ತೀಚೆಗೆ ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ರಶ್ಮಿಕಾ ಮಾಹಿತಿ ಹಂಚಿಕೊಂಡಿದ್ದಾರೆ. ಹೌದು.. ರಶ್ಮಿಕಾ, ಅವರ ತಾಯಿ ಸುಮನ್ ಮಂದಣ್ಣ ಅವರೊಂದಿಗೆ ವಿಡಿಯೋ ಕಾಲ್‌ನಲ್ಲಿ, ನಾನು ತುಂಬಾ ಮುಖ್ಯವಾದ ಶೂಟಿಂಗ್‌ಗಾಗಿ ಈ ವಿಡಿಯೋ ಮಾಡುತ್ತಿದ್ದೇನೆ. ಅಮ್ಮ ನೀವು ಹೇಳಿದ ಬ್ಯುಸಿನೆಸ್ ನಾನು ಆರಂಭಿಸುತ್ತಿದ್ದೇನೆ ಎಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ತಾಯಿ ಸುಮನ್, ಮಗಳ ಹೊಸ ಕಾರ್ಯಕ್ಕೆ ಶುಭಾಶಯ ಕೋರಿದ್ದಾರೆ.

**ರಶ್ಮಿಕಾ ಮಂದಣ್ಣರ ಹೊಸ ಬ್ಯುಸಿನೆಸ್ ಯಾವುದು?**

ಆದರೆ ರಶ್ಮಿಕಾ ತಾವು ಆರಂಭಿಸುತ್ತಿರುವ ಬ್ಯುಸಿನೆಸ್‌ನ ವಿವರಗಳನ್ನು ಗುಟ್ಟಾಗಿಟ್ಟಿದ್ದು, ಸೋಮವಾರ ಈ ಬಗ್ಗೆ ರಿವೀಲ್ ಮಾಡೋದಾಗಿ ಹೇಳಿಕೊಂಡಿದ್ದಾರೆ. ಅಂದಹಾಗೆ ರಶ್ಮಿಕಾ ಶುರು ಮಾಡುತ್ತಿರುವ ಹೊಸ ಬ್ಯುಸಿನೆಸ್ ಯಾವುದು ಅನ್ನೋದು ಅವರ ಅಭಿಮಾನಿಗಳಿಗಿರುವ ಕುತೂಹಲ. ರಶ್ಮಿಕಾ ಮಂದಣ್ಣ ಹೊಸ ಕಾರ್ಯಕ್ಕೆ ಅವರ ಅಭಿಮಾನಿಗಳು ಕೂಡ ಶುಭ ಹಾರೈಸಿದ್ದಾರೆ. ದಿ ಗರ್ಲ್‌ಫ್ರೆಂಡ್ ರಶ್ಮಿಕಾ ಮಂದಣ್ಣ ಮತ್ತು ಕನ್ನಡದ ನಟ ದೀಕ್ಷಿತ್ ಶೆಟ್ಟಿ ಅಭಿನಯದ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಚಿತ್ರವಾಗಿದೆ. ಈ ಸಿನಿಮಾವನ್ನು ರಾಹುಲ್ ರವೀಂದ್ರನ್ ನಿರ್ದೇಶಿಸಿದ್ದಾರೆ, ಮತ್ತು ಗೀತಾ ಆರ್ಟ್ಸ್ ಹಾಗೂ ಧೀರಜ್ ಮೊಗಿಲಿನೇನಿ ಎಂಟರ್‌ಟೈನ್‌ಮೆಂಟ್ ಬ್ಯಾನರ್‌ಗಳಡಿ ನಿರ್ಮಾಣವಾಗಿದೆ.

## ಕಿರೀಟಿ ರೆಡ್ಡಿಯನ್ನು ಜೂ ಎನ್‌ಟಿಆರ್ ಜೊತೆ ಹೋಲಿಸಿದ ತೆಲುಗು ಪ್ರೇಕ್ಷಕರು

ರಾಜ್ಯದ ರಾಜಕಾರಣಿ ಜನಾರ್ದನ ರೆಡ್ಡಿಯ ಪುತ್ರ ಕಿರೀಟಿ ರೆಡ್ಡಿ ಚಿತ್ರರಂಗಕ್ಕೆ ಕಾಲಿಟ್ಟಿದ್ದಾರೆ. ಅವರ ನಟನೆಯ ಮೊದಲ ಸಿನಿಮಾ 'ಜೂನಿಯರ್' ಇದೇ ಶುಕ್ರವಾರ ಬಿಡುಗಡೆ ಆಗಿದೆ. ಸಿನಿಮಾದ ಬಗ್ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಆದರೆ ಸಿನಿಮಾ ನೋಡಿದವರೆಲ್ಲ ಕಿರೀಟಿ ರೆಡ್ಡಿಯ ನೃತ್ಯ ಪ್ರತಿಭೆಯನ್ನು ಮಾತ್ರ ತಪ್ಪದೆ ಹೊಗಳಿದ್ದಾರೆ. ಡ್ಯಾನ್ಸ್ ಹಾಗೂ ಆಕ್ಷನ್ ದೃಶ್ಯಗಳನ್ನು ಕಿರೀಟಿ ಬಹಳ ಚೆನ್ನಾಗಿ ನಿರ್ವಹಿಸಿದ್ದಾರೆ ಎಂಬ ಸಾಮೂಹಿಕ ಪ್ರಶಂಸೆ ಕಿರೀಟಿಗೆ ವ್ಯಕ್ತವಾಗಿದೆ. ಕಿರೀಟಿಯ ಜೂನಿಯರ್ ಸಿನಿಮಾ ಕನ್ನಡ, ತೆಲುಗು ಭಾಷೆಗಳಲ್ಲಿ ಏಕಕಾಲಕ್ಕೆ ಬಿಡುಗಡೆ ಆಗಿದ್ದು, ಸಿನಿಮಾನಲ್ಲಿ ತೆಲುಗಿನ ಹಲವು ಕಲಾವಿದರನ್ನು ಸಹ ಬಳಸಿಕೊಳ್ಳಲಾಗಿದೆ. ಸಿನಿಮಾ ತೆಲುಗು ರಾಜ್ಯಗಳಲ್ಲಿಯೂ ಸಹ ಅದ್ಧೂರಿಯಾಗಿಯೇ ಬಿಡುಗಡೆ ಆಗಿದ್ದು, ತೆಲುಗಿನ ಪ್ರೇಕ್ಷಕರು ಸಹ ಸಿನಿಮಾ ನೋಡಿ ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಕಿರೀಟಿಯ ಡ್ಯಾನ್ಸ್ ಮತ್ತು ಆಕ್ಷನ್ ಅನ್ನು ಮೆಚ್ಚಿಕೊಂಡಿದ್ದಾರೆ. ತೆಲುಗು ಪ್ರೇಕ್ಷಕರು ಒಂದು ಹೆಜ್ಜೆ ಮುಂದೆ ಹೋಗಿ ಜೂ ಎನ್‌ಟಿಆರ್ ಜೊತೆಗೆ ಕಿರೀಟಿ ರೆಡ್ಡಿಯನ್ನು ಹೋಲಿಕೆ ಮಾಡಿದ್ದಾರೆ. ಸಿನಿಮಾದ ವೈರಲ್ ವೈಯ್ಯಾರಿ ಹಾಡಿಗೆ ಕಿರೀಟಿ ರೆಡ್ಡಿ ಹಾಕಿರುವ ಸ್ಟೆಪ್ಪುಗಳ ವಿಡಿಯೋಗಳನ್ನು ಹಂಚಿಕೊಳ್ಳುತ್ತಿರುವ ತೆಲುಗು ಸಿನಿಮಾ ಪ್ರೇಕ್ಷಕರು, 'ಅದ್ಭುತವಾಗಿ ಡ್ಯಾನ್ಸ್ ಮಾಡಿದ್ದಾನೆ ಈ ಯುವಕ, ಈ ಯುವಕನ್ನು ನೋಡುತ್ತಿದ್ದರೆ ಜೂ ಎನ್‌ಟಿಆರ್ ನೆನಪು ಬರುತ್ತಾರೆ' ಎಂದು ಬರೆದುಕೊಂಡಿದ್ದಾರೆ.



## ಆಡಿಕೊಳ್ಳುವವರಿಗೆ ಔಷಧಿಯಿಲ್ಲ

ಆ್ಯಂಕರ್ ಅನುಶ್ರೀ ಅವರ ಮದುವೆ ಬಗ್ಗೆ ಈಚೆಗೆ ಭಾರಿ ಸುದ್ದಿಯಾಗುತ್ತಿದೆ. ಇದೇ ಆಗಸ್ಟ್ 28ರಂದು ಅನುಶ್ರೀ ಅವರ ವಿವಾಹವು ರೋಷನ್ ಎಂಬುವವರ ಜೊತೆಗೆ ನಡೆಯಲಿದೆ ಎಂಬುದು ಟಾಕ್. ಈಗಾಗಲೇ ಸಾಕಷ್ಟು ತಯಾರಿಗಳು ಕೂಡ ನಡೆಯುತ್ತಿವೆಯಂತೆ. ಆದರೆ ಈ ಮಧ್ಯೆ ಅನುಶ್ರೀ ಅವರು ಹಂಚಿಕೊಂಡಿರುವ ಒಂದು ವಿಡಿಯೋ ಎಲ್ಲರ ಗಮನಸೆಳೆಯುತ್ತಿದೆ. ಡಾ.ರಾಜ್ ಕುಮಾರ್ ಅವರ ಹಳೆಯ ಸಿನಿಮಾವೊಂದರ ಡೈಲಾಗ್ ಇರುವ ವಿಡಿಯೋವೊಂದನ್ನು ಅನುಶ್ರೀ ಹಂಚಿಕೊಂಡಿದ್ದಾರೆ. ಆ ವಿಡಿಯೋದಲ್ಲಿ ಏನಿದೆ? ಈ ಆಡಿಕೊಳ್ಳುವವರ ಬಾಯಿಗೆ ಬೀಗ ಹಾಕೋದಕ್ಕೆ ನಮ್ಮಿಂದ ಸಾಧ್ಯವಿಲ್ಲ. ಒಳ್ಳೆಯವರಾಗಿದ್ರೂ ಆಡ್ಕೋತಾರೆ, ಕೆಟ್ಟವರಾಗಿದ್ರೂ ಆಡ್ಕೋತಾರೆ. ಈ ಆಡ್ಕೋಳೋದು, ಅನ್ನೋದು ಮನುಷ್ಯನಿಗೆ ಒಂಥರಾ ಕಾಯಿಲೆ ಇದ್ದಹಾಗೆ. ಇದಕ್ಕೆ ಔಷಧಿನೇ ಇಲ್ಲ- ಸಂಭಾಷಣೆ ಇರುವ ವಿಡಿಯೋವನ್ನು ಶೇರ್ ಅನುಶ್ರೀ ಮಾಡಿದ್ದಾರೆ.



## ಡೆವಿಲ್ ಮೋಷನ್ ಪೋಸ್ಟರ್ ರಿಲೀಸ್

ಚಾಲೆಂಜಿಂಗ್ ಸ್ಟಾರ್ ದರ್ಶನ್ ನಟನೆಯ ಬಹು ನಿರೀಕ್ಷಿತ ಚಿತ್ರ ದಿ ಡೆವಿಲ್ ಸಿನಿಮಾ ಮೋಷನ್ ಪೋಸ್ಟರ್ ರಿಲೀಸ್ ಆಗಿದೆ. ಅತ್ತ ಥಾಯ್ಲೆಂಡ್‌ನಲ್ಲಿ ಶೂಟಿಂಗ್ ಕಂಪ್ಲೀಟ್ ಮಾಡಲು ದರ್ಶನ್ ಬೀಡು ಬಿಟ್ಟಿರುವ ಹೊತ್ತಿನಲ್ಲೇ ಚಿತ್ರತಂಡ ಮೋಷನ್ ಪೋಸ್ಟರ್ ರಿಲೀಸ್ ಮಾಡಿದೆ. ಇದರ ವಿಡಿಯೋ ತುಣುಕನ್ನು ನಟ ದರ್ಶನ್ ತಮ್ಮ ಸೋಷಿಯಲ್ ಮೀಡಿಯಾ ಖಾತೆಲ್ಲಿ ಹಂಚಿಕೊಂಡಿದ್ದಾರೆ. ಈ ಮೂಲಕ ಅಭಿಮಾನಿಗಳ ಕಾತರಕ್ಕೆ ತೆರೆ ಎಳೆದಿದ್ದಾರೆ.ಫೇಸ್‌ಬುಕ್ ಖಾತೆಯಲ್ಲಿ ಮೋಷನ್ ಪೋಸ್ಟರ್‌ನ 1:05 ನಿಮಿಷದ ವಿಡಿಯೋ ಹಂಚಿಕೊಂಡಿರುವ ದರ್ಶನ್, ನಲ್ಮೆಯ ಸೆಲಬ್ರಿಟಿಗಳಿಗೆ ವಿಶೇಷ ಸಂದೇಶವೊಂದನ್ನೂ ನೀಡಿದ್ದಾರೆ.

ನಲ್ಮೆಯ ಸೆಲಬ್ರಿಟಿಗಳಿಗೆ ನಿಮ್ಮೆಲ್ಲರ ಕಾತುರಕ್ಕೆ ಇಂದು ನಮ್ಮ 'ದಿ ಡೆವಿಲ್' ತಂಡ ಮೋಷನ್ ಪೋಸ್ಟರ್ ಬಿಡುಗಡೆ ಮಾಡುವುದರೊಂದಿಗೆ ಬೆಳ್ಳಿಪರದೆಯ ಮೇಲೆ ಶೀಘ್ರದಲ್ಲೇ ಬರುವ ಮುನ್ಸೂಚನೆ ನೀಡಿದೆ. ಸದ್ಯಕ್ಕೆ ಈ ಪೋಸ್ಟರ್ ನೋಡಿ ನಿಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳಿ ಎಂದು ಬರೆದುಕೊಂಡಿದ್ದಾರೆ.




## ಪಾಕಿಗೆ ಮತ್ತೆ ಶಾಕ್, ಹಿಂದೆ ಸರಿದ ಟೀಂ ಇಂಡಿಯಾ

### ಲೆಜೆಂಡ್ಸ್ ಕ್ರಿಕೆಟ್ ಪಂದ್ಯ ರದ್ದು

ಬರ್ಮಿಂಗ್‌ಹ್ಯಾಮ್: ಭಾರತದ ಆಟಗಾರರು ಹಿಂದೆ ಸರಿದ ಬೆನ್ನಲ್ಲೇ ವಿಶ್ವ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ 2025 ಕ್ರಿಕೆಟ್ ಟೂರ್ನಿಯಲ್ಲಿ ಇಂದು ನಡೆಯಬೇಕಿದ್ದ ಭಾರತ-ಪಾಕಿಸ್ತಾನ ಕ್ರಿಕೆಟ್ ಪಂದ್ಯ ರದ್ದಾಗಿದೆ. ಇಂದಿನ ಪಂದ್ಯದ ಬಗ್ಗೆ ಭಾರತದ ಅಭಿಮಾನಿಗಳು ಸಾಮಾಜಿಕ ಜಾಲತಾಣದಲ್ಲಿ ಭಾರೀ ಟೀಕೆ ವ್ಯಕ್ತಪಡಿಸಿದ ಬೆನ್ನಲ್ಲೇ ಟೀಂ ಇಂಡಿಯಾ ಪಂದ್ಯ ಆಡದೇ ಇರಲು ನಿರ್ಧರಿಸಿದೆ. ಪೆಹಲ್ಗಾಮ್ ದಾಳಿ, ಆಪರೇಷನ್ ಸಿಂಧೂರ ವಿಚಾರವನ್ನು ಪ್ರಸ್ತಾಪಿಸಿ ಪಾಕ್ ಜೊತೆ ಆಡುವ ಅಗತ್ಯ ಏನು ಎಂದು ಪ್ರಶ್ನಿಸಿ ಟೀಕಿಸುತ್ತಿದ್ದರು. ಈ ಸಂಬಂಧ ಎಜ್‌ಬಾಸ್ಟನ್ ಸ್ಟೇಡಿಯಂ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ, ವಿಶ್ವ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಆಯೋಜಕರು ಭಾರತ ಮತ್ತು ಪಾಕಿಸ್ತಾನ ಮಧ್ಯೆ ನಡೆಯಬೇಕಿದ್ದ ಪಂದ್ಯವನ್ನು ರದ್ದುಗೊಳಿಸಿದ್ದಾರೆ. ಕ್ರೀಡಾಂಗಣ ಮುಚ್ಚಲಾಗಿರುವುದರಿಂದ ದಯವಿಟ್ಟು ಹಾಜರಾಗಬೇಡಿ.

ಟಿಕೆಟ್ ಖರೀದಿಸಿದ ಎಲ್ಲಾ ಪ್ರೇಕ್ಷಕರಿಗೆ ಪೂರ್ಣ ಮರುಪಾವತಿ ಮಾಡಲಾಗುವುದು ಎಂದು ತಿಳಿಸಿದೆ. ಈ ಟೂರ್ನಿಯಲ್ಲಿ ಟೂರ್ನಿಯಲ್ಲಿ ಟೀಂ ಇಂಡಿಯಾದ ಸದಸ್ಯರು ಆಡುತ್ತಿಲ್ಲ. ಬದಲಾಗಿ ಟೀ ಇಂಡಿಯಾಗೆ ನಿವೃತ್ತಿ ಹೇಳಿದ ಹಿರಿಯ ಆಟಗಾರರು ಆಡುತ್ತಿದ್ದಾರೆ.

ವಿಶ್ವ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್‌ನ ಎರಡನೇ ಆವೃತ್ತಿಯಲ್ಲಿ ಯುವರಾಜ್ ಸಿಂಗ್ ಭಾರತ ತಂಡವನ್ನು, ಯೂನಿಸ್ ಖಾನ್ ಪಾಕಿಸ್ತಾನ ಚಾಂಪಿಯನ್ಸ್ ತಂಡವನ್ನು ಮುನ್ನಡೆಸುತ್ತಿದ್ದಾರೆ.

ಕಳೆದ ವರ್ಷ ವಿಶ್ವ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಟೂರ್ನಿ ಆರಂಭಗೊಂಡಿತ್ತು. ಫೈನಲಿನಲ್ಲಿ ಪಾಕಿಸ್ತಾನವನ್ನು ಸೋಲಿಸಿ ಭಾರತ 5 ವಿಕೆಟ್ ಜಯ ಸಾಧಿಸಿ ಕಪ್ ಗೆದ್ದಿತ್ತು. ಭಾರತ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ಪಾಕಿಸ್ತಾನ, ವೆಸ್ಟ್ ಇಂಡೀಸ್‌ನ ಹಿರಿಯ ಆಟಗಾರರು ಈ ಟೂರ್ನಿಯಲ್ಲಿ ಭಾಗವಹಿಸುತ್ತಾರೆ.

**ಭಾರತ ಚಾಂಪಿಯನ್ಸ್ ತಂಡ:** ಯುವರಾಜ್ ಸಿಂಗ್ (ನಾಯಕ), ಸುರೇಶ್ ರೈನಾ, ರಾಬಿನ್ ಉತ್ತಪ್ಪ, ಮೊಹಮ್ಮದ್ ಕೈಫ್, ಇರ್ಫಾನ್ ಪಠಾಣ್, ಪಾರ್ಥಿವ್ ಪಟೇಲ್, ವಿನಯ್ ಕುಮಾರ್, ಹರ್ಭಜನ್ ಸಿಂಗ್, ಪ್ರಗ್ಯಾನ್ ಓಜಾ, ಯೂಸುಫ್ ಪಠಾಣ್, ನಮನ್ ಓಜಾ, ಮುನಾಫ್ ಪಟೇಲ್, ರಿತಿಂದರ್ ಸಿಂಗ್ ಸೋಧಿ, ಆರ್‌ಪಿ ಸಿಂಗ್, ಅಶೋಕ್ ದಿಂಡಾ.

**ಪಾಕಿಸ್ತಾನ ಚಾಂಪಿಯನ್ಸ್ ತಂಡ:** ಯೂನಿಸ್ ಖಾನ್ (ನಾಯಕ), ಶಾಹಿದ್ ಅಫ್ರಿದಿ, ಶೋಯೆಬ್ ಮಲಿಕ್, ಮಿಸ್ಬಾ-ಉಲ್-ಹಕ್, ಇಮ್ರಾನ್ ನಜೀರ್, ಮೊಹಮ್ಮದ್ ಹಫೀಜ್, ಕಮ್ರಾನ್ ಅಕ್ಮಲ್, ಸಲ್ಮಾನ್ ಬಟ್, ಅಬ್ದುಲ್ ರಜಾಕ್, ವಹಾಬ್ ರಿಯಾಜ್, ಮೊಹಮ್ಮದ್ ಆಮಿರ್, ಯಾಸಿರ್ ಅರಾಫತ್, ಸೊಹೈಲ್ ತನ್ವೀರ್, ಸಯೀದ್ ಅಜ್ಮಲ್, ಉಮರ್ ಗುಲ್.




## ಜಸ್‌ಪ್ರೀತ್ ಬುಮ್ರಾ ಕಣಕ್ಕಿಳಿಯುವುದು ಖಚಿತ

ಮ್ಯಾಚೆಂಸ್ಟರ್‌ನ ಓಲ್ಡ್ ಟ್ರಾಫೋರ್ಡ್ ಮೈದಾನದಲ್ಲಿ ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಟೀಮ್ ಇಂಡಿಯಾ ಪರ ಜಸ್‌ಪ್ರೀತ್ ಬುಮ್ರಾ ಕಣಕ್ಕಿಳಿಯುವುದು ಖಚಿತವಾಗಿದೆ. ಇದಕ್ಕೂ ಮುನ್ನ ಬುಮ್ರಾ ನಾಲ್ಕನೇ ಪಂದ್ಯದಿಂದ ಹೊರಗುಳಿಯಲಿದ್ದು, ಕೊನೆಯ ಟೆಸ್ಟ್ ಪಂದ್ಯದಲ್ಲಿ ಮಾತ್ರ ಕಣಕ್ಕಿಳಿಯಲಿದ್ದಾರೆ ಎನ್ನಲಾಗಿತ್ತು. ಮ್ಯಾಚೆಂಸ್ಟರ್‌ನ ಓಲ್ಡ್ ಟ್ರಾಫೋರ್ಡ್‌ಮೈದಾನದಲ್ಲಿ ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಟೀಮ್ ಇಂಡಿಯಾ ಪರ ಜಸ್‌ಪ್ರೀತ್ ಬುಮ್ರಾ ಕಣಕ್ಕಿಳಿಯುವುದು ಖಚಿತವಾಗಿದೆ. ಇದಕ್ಕೂ ಮುನ್ನ ಬುಮ್ರಾ ನಾಲ್ಕನೇ ಪಂದ್ಯದಿಂದ ಹೊರಗುಳಿಯಲಿದ್ದು, ಕೊನೆಯ ಟೆಸ್ಟ್ ಪಂದ್ಯದಲ್ಲಿ ಮಾತ್ರ ಕಣಕ್ಕಿಳಿಯಲಿದ್ದಾರೆ ಎನ್ನಲಾಗಿತ್ತು. ಪ್ರಸ್ತುತ ಮಾಹಿತಿ ಪ್ರಕಾರ, ಜಸ್ ಪ್ರೀತ್ ಬುಮ್ರಾ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಆಡುವುದು ಕನ್ಫರ್ಮ್ ಆಗಿದೆ. ಮೂರನೇ ಟೆಸ್ಟ್ ಪಂದ್ಯದ ಬಳಿಕ ಒಂದು ವಾರ ವಿಶ್ರಾಂತಿ ಲಭಿಸಿರುವ ಕಾರಣ ಬುಮ್ರಾ ಮ್ಯಾಚೆಂಸ್ಟರ್‌ನಲ್ಲಿ ನಿರ್ಣಾಯಕ ಪಂದ್ಯವಾಡಲು ನಿರ್ಧರಿಸಿದ್ದಾರೆ ಎಂದು ವರದಿಯಾಗಿದೆ. ಇದಾಗ್ಯೂ ನಾಲ್ಕನೇ ಪಂದ್ಯದ ವೇಳೆ ಮತ್ತೋರ್ವ ವೇಗಿಗೆ ವಿಶ್ರಾಂತಿ ನೀಡಲು ಟೀಮ್ ಮ್ಯಾನೇಜ್ಮೆಂಟ್ ನಿರ್ಧರಿಸಿದೆ.



## ಟಿಂ ಇಂಡಿಯಾ ಟೆಸ್ಟ್-ಟಿ20-ಏಕದಿನಕ್ಕೆ ಪ್ರತ್ಯೇಕ ಕೋಚ್ ಯಾಕೆ ಬೇಕು?

ಭಾರತ ಕ್ರಿಕೆಟ್ ತಂಡಕ್ಕೆ ಟೆಸ್ಟ್ ಮತ್ತು ವೈಟ್ ಬಾಲ್ ಕ್ರಿಕೆಟ್ ಬೇರೆ ಬೇರೆ ಕೋಚ್‌ಗಳನ್ನು ನೇಮಿಸುವ ಬಗ್ಗೆ ಯೋಚಿಸಬೇಕು ಎಂದು ಟೀಂ ಇಂಡಿಯಾ ಮಾಜಿ ಸ್ಪಿನ್ನರ್ ಹರ್ಭಜನ್ ಸಿಂಗ್ ಅಭಿಪ್ರಾಯಪಟ್ಟಿದ್ದಾರೆ. ಗೌತಮ್ ಗಂಭೀರ್ ಟಿ-20 ವಿಶ್ವಕಪ್ 2024ರ ನಂತರ ಭಾರತದ ಕೋಚ್ ಆಗಿ ಉತ್ತಮ ಫಲಿತಾಂಶಗಳನ್ನು ನೀಡಿದ್ದಾರೆ. ಆದರೆ ಟೆಸ್ಟ್ ಕ್ರಿಕೆಟ್‌ನಲ್ಲಿ ಅವರ ದಾಖಲೆ ಅಷ್ಟೇನೂ ಉತ್ತಮವಾಗಿಲ್ಲ. ಹೀಗಾಗಿ ಆಟಗಾರರು ಮತ್ತು ತಂಡಗಳು ಬೇರೆ ಬೇರೆಯಾಗಿರುವುದರಿಂದ ಬೇರೆ ಬೇರೆ ಕೋಚ್‌ಗಳನ್ನು ನೇಮಿಸುವುದು ತಪ್ಪಲ್ಲ ಇದರಿಂದ ಕೋಚ್‌ಗಳ ಮೇಲಿನ ಕೆಲಸದ ಒತ್ತಡ ಕೂಡ ಕಡಿಮೆಯಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಈ ವಿಚಾರವಾಗಿ ಇಂಡಿಯಾ ಟುಡೇಗೆ ಮಾತನಾಡಿರುವ ಅವರು, ಕೋಚ್‌ಗೆ ಸಿದ್ಧತೆ ನಡೆಸಲು ಸಮಯ ಬೇಕಾಗುತ್ತದೆ. ಒಂದು ಕೋಚ್ ವರ್ಷವಿಡೀ ಕೆಲಸ ಮಾಡುವುದು ಸರಿಯಲ್ಲ ಎಂದರು. ನಿಮ್ಮ ಕೋಚ್‌ಗೆ ಸರಣಿಗೆ ತಯಾರಿ ನಡೆಸಲು ಸಮಯ ಬೇಕಾಗುತ್ತದೆ. ಆಸ್ಟ್ರೇಲಿಯಾ ವಿರುದ್ಧ ಐದು ಟೆಸ್ಟ್ ಪಂದ್ಯಗಳು, ನಂತರ ಇಂಗ್ಲೆಂಡ್, ಹೀಗೆ ಬೇರೆ ಬೇರೆ ಕಡೆ ಸರಣಿಗಳು ಇರುತ್ತವೆ. ಕೋಚ್ ತನ್ನ ತಂಡ ಹೇಗಿರಬೇಕು ಎಂದು ತಯಾರು ಮಾಡಲು ಸಾಧ್ಯವಾಗುತ್ತದೆ. ಬಿಳಿ ಚೆಂಡಿನ ಕೋಚ್‌ಗೂ ತಯಾರಿ ನಡೆಸಲು ಸಮಯ ಬೇಕಾಗುತ್ತದೆ. ಎಂದು ಅವರು ತಿಳಿಸಿದರು.

**ತಂಡ ತಯಾರಿಗೆ ಸಮಯ ಅಗತ್ಯ:** ಕೋಚ್ ಕೂಡ ಸಿದ್ಧತೆ ಮಾಡಿಕೊಳ್ಳಲು ಸಮಯ ಬೇಕು. ಒಂದು ಸರಣಿಗೆ ತಯಾರಿ ನಡೆಸಲು ಅವರಿಗೆ ಸಮಯ ಬೇಕು. ಆಸ್ಟ್ರೇಲಿಯಾ ವಿರುದ್ಧ ಐದು ಟೆಸ್ಟ್ ಪಂದ್ಯಗಳು, ನಂತರ ಇಂಗ್ಲೆಂಡ್‌ನಲ್ಲಿ ಸರಣಿ. ಹೀಗೆ ಬೇರೆ ಬೇರೆ ಕಡೆ ಸರಣಿಗಳು ಇರುತ್ತವೆ. ಆಗ ಕೋಚ್‌ಗೆ ತನ್ನ ತಂಡವನ್ನು ಹೇಗೆ ಸಿದ್ಧಪಡಿಸಬೇಕು ಎಂದು ತಿಳಿಯುತ್ತದೆ.

ಅದೇ ರೀತಿ, ವೈಟ್-ಬಾಲ್ ಕೋಚ್‌ಗೂ ತಯಾರಿ ನಡೆಸಲು ಸಮಯ ಬೇಕಾಗುತ್ತದೆ. ಎಂದು ಹರ್ಭಜನ್ ಸಿಂಗ್ ಹೇಳಿದರು. ಒಬ್ಬ ಕೋಚ್‌ಗೆ ವರ್ಷವಿಡೀ ಕೆಲಸ ಕೊಟ್ಟರೆ, ಅವರಿಗೂ ಕುಟುಂಬ ಮತ್ತು ಜವಾಬ್ದಾರಿಗಳು ಇರುತ್ತವೆ. ಕುಟುಂಬದೊಂದಿಗೆ ನಿರಂತರವಾಗಿ ಪ್ರಯಾಣಿಸುವುದು ಸುಲಭವಲ್ಲ. ಹೀಗಾಗಿ, ಕೆಂಪು ಚೆಂಡು ಮತ್ತು ಬಿಳಿ ಚೆಂಡು ಕ್ರಿಕೆಟ್‌ಗೆ ಬೇರೆ ಬೇರೆ ಕೋಚ್‌ಗಳನ್ನು ನೇಮಿಸುವುದು ಒಳ್ಳೆಯದು, ಎಂದು ಹರ್ಭಜನ್ ಸಲಹೆ ನೀಡಿದರು. ಗೌತಮ್ ಗಂಭೀರ್ ಕೋಚ್ ಆದ ನಂತರ ಭಾರತ ತಂಡ ಏಕದಿನ ಮತ್ತು ಟಿ20 ಮಾದರಿಗಳಲ್ಲಿ ಉತ್ತಮ ಸಾಧನೆ ಮಾಡಿದೆ. ಅವರ ನೇತೃತ್ವದಲ್ಲಿ ಭಾರತ ತಂಡ ಐಸಿಸಿ ಚಾಂಪಿಯನ್ಸ್ ಟ್ರೋಫಿಯನ್ನು ಗೆದ್ದುಕೊಂಡಿದೆ. ಅಂತಾರಾಷ್ಟ್ರೀಯ ಟಿ20 ಮಾದರಿಯಲ್ಲಿ 13 ಪಂದ್ಯಗಳನ್ನು ಗೆದ್ದು ಕೇವಲ 2 ಪಂದ್ಯಗಳಲ್ಲಿ ಸೋತಿದೆ. ಶ್ರೀಲಂಕಾ, ದಕ್ಷಿಣ ಆಫ್ರಿಕಾ, ಬಾಂಗ್ಲಾದೇಶ ಮತ್ತು ಇಂಗ್ಲೆಂಡ್ ವಿರುದ್ಧ ಸರಣಿಗಳನ್ನು ಗೆದ್ದಿದ್ದಾರೆ. ಏಕದಿನ ಮಾದರಿಯಲ್ಲಿ 11 ಪಂದ್ಯಗಳಲ್ಲಿ 8 ಗೆಲುವು, 2 ಸೋಲು ಮತ್ತು 1 ಟೈ ಸಾಧಿಸಿದ್ದಾರೆ.

**ಟೆಸ್ಟ್ ನಲ್ಲಿ ಸಂಪೂರ್ಣ ವಿಫಲ:** ಅದೇ ಟೆಸ್ಟ್ ಕ್ರಿಕೆಟ್‌ನಲ್ಲಿ ಅವರ ದಾಖಲೆ ಹೇಳಿಕೊಳ್ಳುವಂತಿಲ್ಲ. ಬಾಂಗ್ಲಾದೇಶವನ್ನು ಸೋಲಿಸಿದ ನಂತರ, ನ್ಯೂಜಿಲೆಂಡ್ ವಿರುದ್ಧ ತವರಿನಲ್ಲಿ ವೈಟ್‌ವಾಶ್ ಆಯಿತು. ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್-ಗವಾಸ್ಕರ್ ಟ್ರೋಫಿಯನ್ನು 1-3 ಅಂತರದಿಂದ ಸೋತಿತು. ಸದ್ಯ ಇಂಗ್ಲೆಂಡ್ ವಿರುದ್ಧ ನಡೆಯುತ್ತಿರುವ ಸರಣಿಯಲ್ಲಿ 1-2 ಹಿನ್ನಡೆಯಲ್ಲಿದೆ. ಗಂಭೀರ್ ಕೋಚ್ ಆದ ನಂತರ ಭಾರತ 13 ಟೆಸ್ಟ್ ಪಂದ್ಯಗಳಲ್ಲಿ ಕೇವಲ 4ರಲ್ಲಿ ಗೆದ್ದು 8ರಲ್ಲಿ ಸೋತಿದೆ ಮತ್ತು 1 ಪಂದ್ಯ ಡ್ರಾ ಆಗಿದೆ. ಈ ವಿಚಾರವಾಗಿ ಇದೀಗ ಬಹಳ ವಿಮರ್ಶೆಗಳು ನಡೆಯುತ್ತಿವೆ. ಟೆಸ್ಟ್ ಕ್ರಿಕೆಟ್ ಗೆ ಅವರು ತಂಡವನ್ನು ತಯಾರಿಸುತ್ತಿರುವ ರೀತಿ ಟೀಕೆಗೆ ಒಳಗಾಗಿದೆ.ಈವರೆಗೂ ಸ್ಪ್ಲಿಟ್ ಕೋಚಿಂಗ್ ಅನ್ನು ಅನುಸರಿಸಿಲ್ಲ.




## 2 ವರ್ಷಗಳ ಬಳಿಕ ತವರು ತಂಡದ ಪರ ಕರುಣ್ ಕಣಕ್ಕೆ

8 ವರ್ಷಗಳ ನಂತರ ಟೀಂ ಇಂಡಿಯಾದಲ್ಲಿ ಸ್ಥಾನ ಪಡೆದಿದ್ದ ಕನ್ನಡಿಗ ಕರುಣ್ ನಾಯರ್ ಇಂಗ್ಲೆಂಡ್‌ನಲ್ಲಿ ಇಲ್ಲಿಯವರೆಗೆ ಬ್ಯಾಟಿಂಗ್‌ನಲ್ಲಿ ಸಂಪೂರ್ಣ ವಿಫಲವಾಗಿದ್ದಾರೆ. ಈ ನಡುವೆ ಕರುಣ್ ನಾಯರ್ ದೇಶೀ ಟೂರ್ನಿಯಲ್ಲಿ ತಮ್ಮ ತಂಡವನ್ನು ಬದಲಿಸಿದ್ದು, ಮತ್ತೊಮ್ಮೆ ತಮ್ಮ ತವರು ತಂಡವನ್ನು ಸೇರಿಕೊಂಡಿದ್ದಾರೆ. ಕಳೆದ ಎರಡು ದೇಶೀ ಆವೃತ್ತಿಯಲ್ಲಿ ವಿದರ್ಭ ತಂಡದ ಪರ ಆಡಿದ್ದ ಕರುಣ್ ನಾಯರ್ ಇದೀಗ ತಮ್ಮ ತವರು ತಂಡವಾದ ಕರ್ನಾಟಕ ತಂಡವನ್ನು ಕೂಡಿಕೊಂಡಿದ್ದಾರೆ. ಪ್ರಸ್ತುತ ನಡೆಯುತ್ತಿರುವ ಇಂಗ್ಲೆಂಡ್ ವಿರುದ್ಧದ ಮೂರು ಟೆಸ್ಟ್ ಪಂದ್ಯಗಳ 6 ಇನ್ನಿಂಗ್ಸ್‌ಗಳಲ್ಲಿ ಕರುಣ್ ನಾಯರ್ ಕೇವಲ 131 ರನ್ ಗಳಿಸಿದ್ದಾರೆ. ಇದರ ಹೊರತಾಗಿಯೂ, ಕರ್ನಾಟಕ ತಂಡ 2025-26ರ ದೇಶೀಯ ಸೀಸನ್‌ಗಾಗಿ ಕರುಣ್ ಅವರನ್ನು ಮತ್ತೆ ತಮ್ಮ ತಂಡಕ್ಕೆ ಸೇರಿಸಿಕೊಂಡಿದೆ.

**ಕರ್ನಾಟಕ ಪರ ಆಡಲಿರುವ ಕರುಣ್:** ಕಳೆದ ಎರಡು ದೇಶೀಯ ಸೀಸನ್‌ಗಳಲ್ಲಿ ವಿದರ್ಭ ಪರ ಆಡಿದ್ದ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಕರುಣ್ ನಾಯರ್ ತಮ್ಮ ಹಳೆಯ ತಂಡ ಕರ್ನಾಟಕಕ್ಕೆ ಮತ್ತೆ ಸೇರ್ಪಡೆಗೊಂಡಿದ್ದಾರೆ. ಈ ಸೀಸನ್‌ನಲ್ಲಿ ಅವರು ಕರ್ನಾಟಕ ಪರ ಆಡಲಿದ್ದಾರೆ. 2022 ರಲ್ಲಿ ಕರ್ನಾಟಕ ತಂಡದಿಂದ ಕೈಬಿಟ್ಟ ನಂತರ, ಕರುಣ್ ನಾಯರ್ ವಿದರ್ಭಕ್ಕೆ ತೆರಳಿ 2023 ಮತ್ತು 2024ರ ದೇಶೀಯ ಆವೃತ್ತಿಗಳಲ್ಲಿ ವಿದರ್ಭ ಪರ ಆಡಿದ್ದರು. ಒಂದೆಡೆ ಕರುಣ್ ಕರ್ನಾಟಕ ತಂಡಕ್ಕೆ ಮರಳುತ್ತಿದ್ದರೆ, ಮತ್ತೊಂದೆಡೆ ಕರ್ನಾಟಕದ ವೇಗದ ಬೌಲರ್ ವಾಸುಕಿ ಕೌಶಿಕ್ ಈಗ ಮುಂದಿನ ಸೀಸನ್‌ನಲ್ಲಿ ಗೋವಾ ಪರ ಆಡಲಿದ್ದಾರೆ.

ಕ್ರಿಕ್‌ಬಜ್ ವರದಿಗಳ ಪ್ರಕಾರ, ಕರುಣ್ ನಾಯರ್ ವೈಯಕ್ತಿಕ ಕಾರಣಗಳಿಂದ ಕರ್ನಾಟಕಕ್ಕೆ ಮರಳಲು ನಿರ್ಧರಿಸಿದ್ದು, ತಂಡವನ್ನು ಸಹ ಸೇರಿಕೊಂಡಿದ್ದಾರೆ. ಹಾಗೆಯೇ ಕರ್ನಾಟಕದ ವೇಗದ ಬೌಲರ್ ವಾಸುಕಿ ಕೌಶಿಕ್ ಗೋವಾ ಪರ ಆಡಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಿಂದ (ಕೆಎಸ್‌ಸಿಎ) ಎನ್‌ಒಸಿ ಕೋರಿದ್ದಾರೆ ಎಂದು ವರದಿಯಾಗಿದೆ. ಗೋವಾ ಕ್ರಿಕೆಟ್ ಅಸೋಸಿಯೇಷನ್ (ಜಿಸಿಎ) ಕಾರ್ಯದರ್ಶಿ ಶಂಭ ದೇಸಾಯಿ ಮಾತನಾಡಿ, ನಾವು ಕೌಶಿಕ್ ಅವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದೇವೆ. ಈಗ ಅವರು ನಮ್ಮ ತಂಡಕ್ಕಾಗಿ ಆಡುವುದನ್ನು ಕಾಣಬಹುದು. ಸಚಿನ್ ತೆಂಡೂಲ್ಕರ್ ಅವರ ಮಗ ಅರ್ಜುನ್ ತೆಂಡೂಲ್ಕರ್ ಕೂಡ ಗೋವಾ ತಂಡಕ್ಕಾಗಿ ಆಡುವುದನ್ನು ಕಾಣಬಹುದು.


Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news


ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966